ಸಂಪುಟ 15
ಸಂಚಿಕೆ 35 - 36

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ರೂ. 2.00
12 ಸೆಪ್ಟೆಂಬರ್ 1993



ಭಾರತ್ ಬಂದ್ ಭಾರತ್ ಬಂದ್ ಯಶಸ್ವಿಗೊಳಿಸಿ

ಮತ್ತೆ ಮತ್ತೆ ಅದೇ ಕರೆ


ಇ.ಎಂ.ಎಸ್.

ಭಾರತ ಬಂದ್ ಯಶಸ್ವಿಗೊಳಿಸಿ, ಭಾರತ ಬಂದ್ ಯಶಸ್ವಿ ಆಗಿಯೇ ತೀರುತ್ತದೆ, ಮತ್ತೆ ಭಾರತ ಬಂದ್‌ನ ಮಾತು. ಹೊಸ ಆರ್ಥಿಕ ನೀತಿಯಿಂದ ತರತರನ ಸಂಕಟಕ್ಕೆ ಒಳಗಾದ ಜನ, ಮತ್ತಷ್ಟು ಬಾಧೆಯ ಭಯದಿಂದ ಆತಂಕಕ್ಕೊಳಗಾಗಿರುವ ಜನ, ಕೋಮುವಾದಿಗಳು ಹಬ್ಬಿಸಿರುವ ಕಾಳವಿಷದಿಂದ ನೊಂದಿರುವ ಜನ ಭಾರತ್ ಬಂದ್ ಅನ್ನು ಯಶಸ್ವಿಗೊಳಿಸಿಯೇ ತೀರುತ್ತಾರೆ.

ಜನಗಳ ಅಗಾಧ ಅತೃಪ್ತಿಗೆ, ನೋವಿಗೆ ಬಾಯಿ ಕೊಡಲು ಎಡ-ಪ್ರಜಾಪ್ರಭುತ್ವ ಶಕ್ತಿಗಳು ಮುಂದಾಗಿ ಸೆ. 9 ರ ಭಾರತ ಬಂದ್ ಅನ್ನು ಯಶಸ್ವಿಗೊಳಿಸಬೇಕು. ಇದು ಕರ್ನಾಟಕದ ಪಕ್ಷದ ಕಾರ್ಯಕರ್ತರಿಗೆ, ಸಾಮೂಹಿಕ ಸಂಘಟನೆಗಳ ನಾಯಕರಿಗೆ ದೇಶದ ಕ್ರಾಂತಿಕಾರಿ ಚಳುವಳಿ ಅಪ್ರತಿಮ ನೇತಾರರೆಲ್ಲಾ ನೀಡಿದ ಕರೆ. ಸೆ. 9 ರವರೆಗೆ ನಿರಂತರ ಪ್ರಚಾರ ಜನರೆಲ್ಲರ ಶಕ್ತಿಯನ್ನು ಮೇಳೈಸಿ, ಕೇಂದ್ರ ಸರ್ಕಾರದ ದುರ್ನೀತಿಗಳಿಗೆದುರಾಗಿ ಸಮರ ಸಾರಿ. ಇದು ಕೇವಲ ಆರಂಭ ಮಾತ್ರ.


ಹಿರಿಯ ಮುತ್ಸದ್ದಿ, ಸಿಪಿಐ(ಎಂ)ನ ಹಿಂದಿನ ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ರವರು ತಮ್ಮ ಸಂಕ್ಷಿಪ್ತ ಭಾಷಣದಲ್ಲಿ ಸೆಪ್ಟೆಂಬರ್ 9ರ ಭಾರತ್ ಬಂದ್ ಒಂದು ದೇಶವ್ಯಾಪಿ ಆಂದೋಲನದ ಆರಂಭದ ಸೂಚನೆ ಎಂದರು. ಕಾರ್ಮಿಕ ಸಂಘಗಳು ಹಾಗೂ ನಮ್ಮ ದೇಶದ ಬಹುಸಂಖ್ಯಾತ ಜನರನ್ನು ಪ್ರತಿನಿಧಿಸುವ ಇತರ ಹೋರಾಟ ಶೀಲ ಸಾಮೂಹಿಕ ಸಂಘಟನೆಗಳು ನೀಡಿರುವ ಮಹತ್ವದ ಕರೆಯಿದು. -ಒಂದು ಬೃಹತ್ ಭಾರತ್ ಬಂದ್‌ನ ಕರೆ. ಇದು ದೇಶದ ಬಹುಪಾಲು ಜನರ ಒಂದು ದೊಡ್ಡ ಯಶಸ್ವೀ ಕಾರ್ಯಾಚರಣೆಯಾಗಬೇಕು ಎಂದರು ಇ.ಎಂ.ಎಸ್. ನಂತರ ಮಾತನಾಡಿದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್, ಇನ್ನೊಬ್ಬ ಪೊಲಿಟ್‌ಬ್ಯೂರೋ ಸದಸ್ಯ ಹಾಗೂ ಪಶ್ಚಿಮಬಂಗಾಳದ ಜನಪ್ರಿಯ ಮುಖ್ಯಮಂತ್ರಿ ಜ್ಯೋತಿಬಸು ಮತ್ತು ಸಭೆಯ ಅಧ್ಯಕ್ಷತೆ ವಹಿಸಿದ್ದ ಸಿಪಿಐ(ಎಂ) ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯ ಹಾಗೂ ಕಾರ್ಮಿಕ ಮುಂದಾಳು ಸೂರ್ಯನಾರಾಯಣ ರಾವ್ ಕೂಡಾ 'ಭಾರತ್ ಬಂದ್' ಕಾರ್ಯಕ್ರಮವನ್ನು ಅತ್ಯಂತ ಸಫಲಗೊಳಿಸಬೇಕೆಂದು ಕರೆ ನೀಡಿದರು.

ರಾಜ್ಯದ ಮೂಲೆ ಮೂಲೆಯಿಂದ ಬಂದ ಸುಮಾರು ಐವತ್ತು ಸಾವಿರ ದುಡಿಯುವ ಜನರ ಪ್ರತಿನಿಧಿಗಳು ಕೋಮು ಸೌಹಾರ್ದವನ್ನು, ದೇಶವನ್ನು ಮಾರಹೊರಟಿರುವ ದೇಶದ್ರೋಹವನ್ನು ಸಾರುವ ಘೋಷಣೆಗಳನ್ನು ಕೂಗುತ್ತಾ 'ಹೊಸ ಆರ್ಥಿಕ ನೀತಿ-ದೇಶದ ಅಧೋಗತಿ' 'ಹೊಸ ಕೈಗಾರಿಕಾ ನೀತಿ- ಕಾರ್ಮಿಕರ ಅಧೋಗತಿ', 'ಓಂದೂ ನಾವೊಂದು ಸುಲಿಗೆಕೋರರ ಕೂಗು' 'ಭಾರತೀಯರೆಲ್ಲಾ ಒಂದು-ಶ್ರಮಿಕರ ಕೂಗು' ಇತ್ಯಾದಿ ಘೋಷಣೆಗಳನ್ನು ಇಕ್ಕೆಲಗಳಲ್ಲಿ ಸುಂದರವಾಗಿ ಹೊತ್ತ ನಂತ ಬೀದಿಗಳಲ್ಲಿ ಒಂದು ಭವ್ಯ ಮೆರವಣಿಗೆ ನಡೆಸಿದರು. ಕೆಂಬಾವುಟಗಳ, ಕೆಂಪು ಬ್ಯಾನರುಗಳ ಸಾಗರವೇ ಹರಿದು ಬಂತು. ಕೋಮು ಸೌಹಾರ್ದ ರ‍್ಯಾಲಿ ನಡೆಯಬೇಕಾಗಿದ್ದ ಮಲ್ಲೇಶ್ವರಂ ಮೈದಾನಕ್ಕೆ ನಗರದ ಹಲವೆಡೆ ಗೋಡೆಗಳು, ಹೋರಾಟದ ಅರ್ಥಪೂರ್ಣ ಘೋಷಣೆಗಳಿಂದ, ರಸ್ತೆಗಳು ಕೆಂಪು ಪತಾಕೆಗಳಿಂದ ಅಲಂಕೃತವಾಗಿದ್ದವು. ಸೂರಿಯವರು ಹೇಳಿದಂತೆ ಎರಡು ತಿಂಗಳ



ಹಿಂದೆ ಬಿಜೆಪಿಯ ಸಭೆಗೆ ಅಬ್ಬರದ ಪ್ರಚಾರಕ್ಕೆ ದುಡ್ಡು ಎಲ್ಲಿಂದ ಬಂತು ಎಂದು ಎಲ್ಲರಿಗೂ ಗೊತ್ತು. ಆದರೆ ಸಿಪಿಐ(ಎಂ)ಗೆ ಅ ಮಾರ್ವಾಡಿಗಳಿಂದ ಕಳ್ಳ, ಸುಲಿಗೆ ಕೋರರಿಂದ ತೆರಿಗೆ ವಂಚಕರಿಂದ ಬರಲಿಲ್ಲ. ಕಾರ್ಮಿಕರಿಂದ ಬಂತು, ರೈತರಿಂದ ಬಂತು. ದುಡಿಯುವ ಜನಗಳಿಂದ ಬಂತು ಏಕೆಂದರೆ ಸಿಪಿಐ(ಎಂ) ದುಡಿಯುವ ಜನಗಳ ಪಕ್ಷ ಹಾಗೆಂದು ಹೇಳಿಕೊಳ್ಳಲು ಅದಕ್ಕೆ ಬಹಳ ಹೆಮ್ಮೆ. ಭಾರತದ ಹಿರಿಯ ಮುತ್ಸದ್ದಿ ಇ.ಎಂ.ಎಸ್. ತಾನು ಕಾರ್ಮಿಕ ವರ್ಗದ ದತ್ತುಪುತ್ರ ಎಂದದ್ದು ಸುಮ್ಮನೇ ಅಲ್ಲ ಎಂದು ಕಾ. ಸೂರಿ ಈ ಸಂದರ್ಭದಲ್ಲಿ ನೆನಪಿಸಿಕೊಂಡರು.

ಸಭೆಯ ಆರಂಭದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹಾಗೂ ಕೇಂದ್ರ ಸಮಿತಿ ಸದಸ್ಯ ಪಿ. ರಾಮಚಂದ್ರರಾವ್ ಸ್ವಾಗತಭಾಷಣ ಮಾಡುತ್ತಾ ಪೊಲಿಟ್‌ಬ್ಯೂರೋ ಸದಸ್ಯರನ್ನು ಸಭೆಗೆ ಪರಿಚಯ ಮಾಡಿಕೊಟ್ಟರು. ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಆರ್. ಶ್ರೀನಿವಾಸ್ ವಂದನಾರ್ಪಣೆ ಮಾಡಿದರು.



ಎಡಪಕ್ಷಗಳು ಜಾತ್ಯಾತೀತ ಶಕ್ತಿಗಳ ಐಕ್ಯತೆ ಬೆಸೆಯುವ ಸಿಮೆಂಟ್

--ಸುರ್ಜಿತ್

ಬೆಂಗಳೂರಿನಲ್ಲಿ ಎರಡು ದಶಕಗಳ ನಂತರ ಸಿಪಿಐ(ಎಂ)ನ ಕೇಂದ್ರ ಸಮಿತಿಯ ಸಭೆ ನಡೆಯುತ್ತಿದ್ದು ಈ ಅಂತರಾಳದಲ್ಲಿ ಪಕ್ಷದ ಪ್ರತಿಷ್ಠೆ ಬಹುಪಾಲು ಹೆಚ್ಚಿದೆ ಎಂದ ಹರ್ಕಿಶನ್ ಸಿಂಗ್ ಸುರ್ಜಿತ್ ದೇಶದ ಐಕ್ಯತೆ ಕಾಪಾಡಲು ಅಗತ್ಯವಾದ ಜಾತ್ಯಾತೀತತೆ ಹೇಗೆ ನರಸಿಂಹರಾಯರ ಆಡಳಿತದಲ್ಲಿ ಅಪಾಯಕ್ಕೊಳಗಾಗಿದೆ ಎಂದು ವಿವರಿಸಿದರು. ಅವರು ದೇವಸ್ಥಾನ-ಮಸೀದಿಯ ಸಮಸ್ಯೆಗೆ ಪರಿಹಾರ ಏನು ಎಂಬುದರ ಬಗ್ಗೆ ಸಾರ್ವಜನಿಕ ಅಭಿಪ್ರಾಯ ಮೂಡಿಸುವ ಬದಲು ದೇವಸ್ಥಾನ ಕಟ್ಟುವುದು ಯಾರು- ನರಸಿಂಹರಾಯರೋ, ಬಿಜೆಪಿಯೋ ಎಂಬ ಬಗ್ಗೆ ಸಾರ್ವಜನಿಕ ಅಭಿಪ್ರಾಯ ಮೂಡಿಸಲು ಯತ್ನಿಸುತ್ತಿದ್ದಾರೆ. ಇದರಿಂದ ಅಲ್ಪ ಸಂಖ್ಯಾಕರಿಗೆ ಏನನ್ನಿಸಬಹುದು ಎಂಬ ಬಗ್ಗೆ ತುಸುವಾದರೂ ಕಳಕಳಿ ಅವರಲ್ಲಿ ಇದ್ದಂತಿಲ್ಲ ಎಂದು ಸುರ್ಜಿತ್ ಟೀಕಿಸಿದರು.

ನಮ್ಮ ಮುಂದಿರುವ ಆರ್ಥಿಕ ಸವಾಲನ್ನು ಎದುರಿಸಲು ದುಡಿಯುವ ಜನಗಳ ಹೋರಾಟಗಳನ್ನು ಪ್ರಸ್ತಾಪಿಸಿದ ಅವರು ಇತ್ತೀಚಿನ ಆಗಸ್ಟ್ 19 ರ 'ಜೈಲ್‌ಭರೋ' ಕಾರ್ಯಕ್ರಮದಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಿದರು ಎಂಬ ಸಂಗತಿಯತ್ತ ಗಮನ ಸೆಳೆದರು.

ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಪ್ರಧಾನಿಗಳು 100 ಕೋಟಿ ರೂ. ಅನ್ನು ಹೇಗೆ ಹಂಚುವುದೆಂಬ ಬಗ್ಗೆ ಸೂತ್ರಗಳನ್ನು ಪಠಿಸಿ

ಪುಟ 4ಕ್ಕೆ

ನಮಗಾಗಿ ಮತ್ತು ದೇಶಕ್ಕಾಗಿ

ಭಾರತ್ ಬಂದ್ ಯಶಸ್ವಿಗಾಗಿ ದುಡಿಯೋಣ

--ಎನ್.ಕೆ. ಉಪಾಧ್ಯಾಯ

ನಮಗಾಗಿ ನಾವು ದೇಕಾದಷ್ಟು ಅಳುತ್ತೇವೆ. ಬಿಕ್ಕಿ ಬಿಕ್ಕಿ ಅಳುತ್ತೇವೆ ನಿರರ್ಗಳವಾಗಿ ಕಣ್ಣೀರು ಸುರಿಸುತ್ತೇವೆ. ಆದರೆ ಮತ್ತೊಬ್ಬರ ಸಲುವಾಗಿ ಅಳುವ ಪ್ರವೃತ್ತಿ ಕಡಿಮೆ. ಹಾಗೆಯೇ ನಮ್ಮ ನಮ್ಮ ಯೂನಿಯನ್‌ಗಳ ಸಮಸ್ಯೆಗಳ ಸಲುವಾಗಿ ದೇಕಾದಷ್ಟು ಕಾಲ ಮುಷ್ಕರ ಹೂಡಲು, ಹೋರಾಡಲು ತಯಾರಿದ್ದೇವೆ. ಆದರೆ ಜನರ ಪ್ರಶ್ನೆ, ದೇಶದ ಪ್ರಶ್ನೆ ಬಂದಾಗ ಹಲವಾರು ಕುಂಟು ನೆಪಗಳನ್ನು ಮುಂದೆ ಮಾಡುತ್ತೇವೆ.

ನಲವತ್ತೆರಡು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಏಪ್ರಿಲ್ 15 ರಂದು ದಿಲ್ಲಿಯಲ್ಲಿ ಸಮಾವೇಶ ನಡೆಸಿ ನರಸಿಂಹರಾವ್ ಸರಕಾರದ ಹೊಸ ಆರ್ಥಿಕ ನೀತಿಯ ವಿರುದ್ಧ, ಕೋಮುವಾದದ ವಿರುದ್ಧ ಜೈಲ್ ಭರೋ ಹಾಗೂ ಭಾರತ್ ಬಂದ್‌ಗೆ ಕರೆ ಕೊಟ್ಟಿವೆ. ಬಿ.ಎಂ.ಎಸ್., ಐ.ಎನ್.ಟಿ.ಯು.ಸಿ.ಗಳನ್ನು ಬಿಟ್ಟು ಕೇಂದ್ರ, ರಾಜ್ಯ ನೌಕರರ ಸಂಘಟನೆಗಳನ್ನೊಳಗೊಂಡು ರೈಲ್ವೇ, ಪೋಸ್ಟಲ್, ನೌಕರದಾರರ ಸಂಘಟನೆಗಳು ಸೇರಿ ಈ ಭಾರತ ವ್ಯಾಪಿ ಹೋರಾಟಕ್ಕೆ ಕರೆಕೊಟ್ಟಿವೆ. ಎಲ್ಲಾ ಸಂಘಟನೆಗಳ ಪದಾಧಿಕಾರಿಗಳು ಮತ್ತೊಮ್ಮೆ ಸೇರಿ ಎಲ್ಲರ ಅಭಿಪ್ರಾಯ ಪಡೆದು ಸೆಪ್ಟೆಂಬರ್ 9 ರಂದು ಭಾರತ್ ಬಂದ್ ಆಗಸ್ಟ್ 19 ರಂದು ಜೈಲ್‌ಭರೋ ಕಾರ್ಯಕ್ರಮ ನಿರ್ಧರಿಸಿವೆ.

ಈ ಸಲದ ಭಾರತ ಬಂದ್ ನಿರ್ಣಯ ಹೆಚ್ಚಿನ ಮಹತ್ವ ಪಡೆದಿದೆ. ನರಸಿಂಹರಾವ್ ಸರಕಾರದ ಹೊಸ ಆರ್ಥಿಕ, ಕೈಗಾರಿಕಾ ನೀತಿ, ಐ.ಎಂ.ಎಫ್., ವಿಶ್ವಬ್ಯಾಂಕಿಗೆ ಶರಣಾಗುವ ಧೋರಣೆ, ಬಿಜೆಪಿ, ವಿ.ಹೆಚ್.ಪಿ., ಆರ್.ಎಸ್.ಎಸ್.ಗಳಂಥ ಮತೀಯ ಶಕ್ತಿಗಳಿಗೆ ಕುಮ್ಮಕ್ಕು ನೀಡುವ ಡಿಸೆಂಬರ್ 6 ರ ಘಟನೆಗೆ ಕಾರಣೀಭೂತವಾದ ನರಸಿಂಹರಾವ್ ಅವರ ಧೋರಣೆಗಳ ವಿರುದ್ಧ ಹೋರಾಡಲು ಕೇಂದ್ರ-ರಾಜ್ಯ ಸರಕಾರಗಳ ನೌಕರರು, ರೈಲ್ವೆ-ಪೋಸ್ಟ್ ಖಾತೆಯ ನೌಕರರು ಮುಂದೆ ಬಂದಿರುವುದು ಒಂದು ವಿಶೇಷ. ಇಷ್ಟು ದಿವಸ ಬಂದ್‌ಗಳಲ್ಲಿ ಸಂಘಟಿತ ಕಾರ್ಮಿಕರಷ್ಟೆ ಭಾಗವಹಿಸುತ್ತಿದ್ದರು. ಆದರೆ ಈ ಸಲ ರೈತ ಸಂಘ, ಕೃಷಿಕೂಲಿಕಾರ್ಮಿಕರ ಸಂಘ, ವಿದ್ಯಾರ್ಥಿ ಯುವಜನತೆಯ ಸಂಘಟನೆಗಳು ಮಹಿಳಾ ಸಂಘಟನೆಗಳು, ಭಾಗವಹಿಸುತ್ತಿರುವುದು ಹೆಚ್ಚಿನ ಮಹತ್ವದ್ದಾಗಿದೆ.

ರೈತ-ಕೃಷಿ ಕಾರ್ಮಿಕರ ಸಂಘಟನೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆ ರೋಕೋ, ಧರಣೆ, ರೈಲ್ ರೋಕೋ, ಕಾರ್ಯಕ್ರಮಗಳ ಮೂಲಕ ಭಾರತ ಬಂದ್‌ನ ಯಶಸ್ವಿಗೆ ದುಡಿಯುತ್ತಾರೆ. ವಿದ್ಯಾರ್ಥಿ ಯುವ ಜನತೆ ಹೈಸ್ಕೂಲ್, ಕಾಲೇಜುಗಳ ಬಂದ್‌ಗೆ ಹಾಗೆಯೇ ಸಾರ್ವಜನಿಕರು ಬಂದ್‌ನಲ್ಲಿ ಪಾಲ್ಗೊಳ್ಳುವಂತೆ ಮಾಡಲು ಶ್ರಮಿಸುತ್ತಾರೆ. ಇತರ ಸಾಮೂಹಿಕ ಸಂಘಟನೆಗಳು ಮುಷ್ಕರ ಮಾಡುತ್ತವೆ.

ಐ.ಎಂ.ಎಫ್. ಕರಾರುಗಳಿಗನುಸಾರ ಅಧಿಕಾರಗಳ, ನೌಕರರ ಸವಲತ್ತುಗಳಿಗೆ ಕಡಿವಾಣ ಹಾಕಲಾಗಿದೆ. ಆ ಕಾರಣದಿಂದಲೇ ಕಾರ್ಖಾನೆ, ಕಚೇರಿಗಳ ಅಧಿಕಾರಿಗಳೂ, ನೌಕರರ ಜೊತೆ ಸೇರಿ ಭಾರತ್‌ಬಂದ್‌ಗೆ ಸಿದ್ಧತೆ ನಡೆಸಿದ್ದಾರೆ.

ಡಂಕೆಲ್ ಸೂಚನೆ ದೇಶದ ರೈತರಿಗೆ, ಭಾರತದ ಒಕ್ಕಲಿತನಕ್ಕೆ ಮಾರಕವಾಗಿದೆ. ಯಾವ ಬೆಳೆಯನ್ನು ಯಾವ ಹೊಲದಲ್ಲಿ ಬೆಳೆಯಬೇಕೆಂಬ, ನಮ್ಮ ಭೂಮಿಗೆ ಅನುಕೂಲವಾದ ಬೀಜ ತಯಾರಿಸಬೇಕೆಂಬ ಸ್ವಾತಂತ್ರ್ಯವನ್ನು ನಮ್ಮ ರೈತರು ಕಳೆದುಕೊಳ್ಳಬೇಕಾಗಿದೆ. ರಸಗೊಬ್ಬರದ ಮೇಲಿನ ಸಬ್ಸಿಡಿ ನಿಲ್ಲಿಸಲಾಗಿದೆ. ಈ ಕಾರಣಗಳಿಂದಾಗಿ ರೈತ ಸಮುದಾಯ ಗ್ರಾಮಾಂತರ ಪ್ರದೇಶದಲ್ಲಿ ಭಾರತ್ ಬಂದ್ ಯಶಸ್ವಿಗಾಗಿ ತಯಾರಿ ನಡೆಸಿದೆ.

ದಿನನಿತ್ಯ ಬಳಕೆಯ ಅತ್ಯಾವಶ್ಯಕ ವಸ್ತುಗಳಾದ ಅಕ್ಕಿ, ಗೋಧಿ, ಜೋಳ, ಸಕ್ಕರೆ ಮೊದಲಾದವುಗಳ ಬೆಲೆಯನ್ನು ಆರು ತಿಂಗಳಿಗೊಮ್ಮೆ ಹೆಚ್ಚಿಸುತ್ತ ಸಾರ್ವಜನಿಕರನ್ನು ಸುಲಿಯಲಾಗುತ್ತಿದೆ. ಪೆಟ್ರೋಲ್, ಡೀಜಲ್, ಸಿಮೆಂಟ್, ಉಕ್ಕುಗಳ ಬೆಲೆ ಹೆಚ್ಚಳ, ರೈಲ್ವೆ, ಬಸ್ ಪ್ರಯಾಣ ದುಭಾರಿ ಕ್ರಮಗಳಿಂದಾಗಿ ಜನ ಬೇಸತ್ತಿದ್ದಾರೆ. ಭ್ರಷ್ಟಾಚಾರ-ಸ್ವಜನ ಪಕ್ಷಪಾತದ ಹಾವಳಿಗಳೆಲ್ಲ ಸಾರ್ವಜನಿಕರನ್ನು ಭಾರತ ಬಂದನ್ನು ಯಶಸ್ವಿಗೊಳಿಸಲು ಪ್ರಚೋದನೆ ನೀಡುತ್ತಿದೆ.

ಶಿಕ್ಷಣಕ್ಕಾಗಿ ಸಾಕಷ್ಟು ಹಣ ಮೀಸಲಿಡದೆ, ಸರಿಯಾದ ಪಠ್ಯಪುಸ್ತಕಗಳನ್ನೊದಗಿಸದೆ, ಶಿಕ್ಷಣ ಶುಲ್ಕ ಕಡಿಮೆ ಮಾಡದೆ, ವಿದ್ಯಾಭ್ಯಾಸಕ್ಕಾಗಿ ಮಕ್ಕಳಿಗೆ ಸರಿಯಾದ ವಾತಾವರಣ ನಿರ್ಮಿಸದೆ, ವಿದ್ಯಾರ್ಥಿಗಳೂ ಭಾರತ ಬಂದ್‌ನಲ್ಲಿ ಭಾಗವಹಿಸುವಂತೆ ಮಾಡಿದೆ.

ಮಹಿಳೆಯ.ರ ಬಾಲಕಿಯರ ಮೇಲೆ ಅಮಾನುಷ ಅತ್ಯಾಚಾರ ನಡೆದಿದೆ. ವರದಕ್ಷಿಣೆ ಪಿಡುಗಿನಿಂದಾಗಿ ಪ್ರತಿದಿವಸ ಸಾವಿರಾರು ಯುವತಿಯರು ಸಾವನ್ನಪ್ಪುತ್ತಿದ್ದಾರೆ. ಬೆಲೆ ಹೆಚ್ಚಳದಿಂದಾಗಿ ಗೃಹಿಣಿಯರು ಕಂಗಾಲಾಗಿದ್ದಾರೆ. ಮೂರು ವರ್ಷದ ಕೂಸುಗಳಿಂದ ಹಿಡಿದು ಎಲ್ಲರಿಗೂ ಡೊನೇಶನ್, ಪುಸ್ತಕ, ಸಮವಸ್ತ್ರ ಒದಗಿಸಲು ತಾಯಂದಿರು ಕಣ್ಣೀರಿಡುತ್ತಿದ್ದಾರೆ. ಆ ಕಾರಣದಿಂದಲೇ ಮಹಿಳೆಯರು ಭಾರತ್ ಬಂದ್ ಯಶಸ್ವಿಯಾಗಲೆಂದು ಹಾರೈಸುತ್ತಿದ್ದಾರೆ.

ಈ ಒಂದೆ ಕಾರ್ಮಿಕರಷ್ಟೆ ಬಂದ್‌ಗೆ ಶ್ರಮಿಸುತ್ತಿದ್ದರೆ ಸೆಪ್ಟೆಂಬರ್ 9 ಭಾರತ ಬಂದ್‌ಗೆ ಸಮಾಜದ ಎಲ್ಲಾ ವರ್ಗಗಳ ಜನತೆ ತಯಾರಿ ನಡೆಸುತ್ತಿದ್ದಾರೆ.

ಇದರ ಜೊತೆಯಲ್ಲಿಯೇ ಎಡ ಪಕ್ಷಗಳು, ಜನತಾದಳ, ಹಾಗೆಯೇ ರಾಷ್ಟ್ರೀಯ ರಂಗ ಸೆಪ್ಟೆಂಬರ್ 9ರ ಬಂದ್‌ಗೆ ಸಂಪೂರ್ಣ ಬೆಂಬಲ ನೀಡಿದೆ.

ಧಾರವಾಡದಲ್ಲಿ ಸಮಾವೇಶ

ಎಲ್ಲ ಕೇಂದ್ರೀಯ ಸಂಘಟನೆಗಳ ಸರ್ವಾನುಮತದ ಒಪ್ಪಿಗೆಯಿಂದ ಬಂದ್ ಕಾರ್ಯಕ್ರಮ ತೀವ್ರ ನಡೆಯುತ್ತಿರುವಾಗ ಹುಬ್ಬಳ್ಳಿಯಲ್ಲಿ ನಡೆದ ಧಾರವಾಡ ಜಿಲ್ಲಾ ಕಾರ್ಮಿಕ ಸಂಘಟನೆಗಳ ಸಮಾವೇಶದಲ್ಲಿ ಕೆ.ಎಸ್.ಆರ್.ಟಿ.ಸಿ. ಮುಖಂಡರು ತಮ್ಮ ಸಮಸ್ಯೆಗಳನ್ನೇ ತೋಡಿಕೊಂಡರು, ರೈಲ್ವೆ ಮುಖಂಡರು, ತಮ್ಮನ್ನೆದುರಿಸುವ ನೀತಿ ಕಟ್ಟಳೆಗಳನ್ನು ವಿವರಿಸಿದರು. ಸಿಐಟಿಯು ಮುಖಂಡರಾದ ಸಿತ್ಯಾನಂದ ಸ್ವಾಮಿಯವರು ಭಾರತ್ ಬಂದ್ ಕಾರ್ಯಕ್ರಮದ ಸಮಗ್ರ ಚಿತ್ರ ವಿವರಿಸಿದರೂ, ಕೆಲವರೆಲ್ಲ ತಮ್ಮ ಸಮಸ್ಯೆಗಳ ಸಲುವಾಗಿಯೇ ಕಣ್ಣೀರು ಸುರಿಸಿದರು. ಎನ್.ಕೆ. ಉಪಾಧ್ಯರರು ಸಮಾರೋಪ ಭಾಷಣ ಮಾಡುತ್ತಾ ಕೆ.ಎಸ್.ಆರ್.ಟಿ.ಸಿ., ರೈಲ್ವೇ ಟೆಲಿಕಾಮ್ ಮತ್ತಿತರ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳು ಕೇಂದ್ರ ಸರಕಾರದ ಆರ್ಥಿಕ ರಾಜಕೀಯ ನೀತಿಯಿಂದಾಗಿ ಉಂಟಾಗಿರುವುದರಿಂದ ನರಸಿಂಹರಾವ್ ಸರಕಾರದ ವಿರುದ್ಧ ಹೋರಾಟ ಪ್ರಮುಖವಾಗಿದೆಂದೂ, ಟ್ರಾನ್ಸ್‌ಪೋರ್ಟ್, ರೈಲ್ವೇ, ಟೆಲಿಕಾಂ, ನೌಕರರು ಮುಷ್ಕರ ಮಾಡಿದರೆ ಮಾತ್ರ ರೈಲ್ವೇ-ಪೋಸ್ಟ್ ಒಂದಾದರೆ ಮಾತ್ರ ಕೇಂದ್ರ ಸರಕಾರಕ್ಕೆ ಬಿಸಿ ತಟ್ಟುವುದರಿಂದ ಈ ವಿಭಾಗಗಳ ಕೆಲಸಗಾರರು ಭಾರತ್ ಬಂದ್‌ನಲ್ಲಿ ಪ್ರಮುಖ ಪಾತ್ರವಹಿಸುವ ಅಗತ್ಯವನ್ನು ವಿವರಿಸಿ ನಿಮ್ಮ ಸಮಸ್ಯೆಗಳಿಗೆ ಮಾತ್ರ ನೀವು ಕಣ್ಣೀರು ಸುರಿಸಿದರೆ ಇಡೀ ದೇಶದ ಜನರು ಎದುರಿಸುತ್ತಿರುವ ಸಮಸ್ಯೆಗಳಿಗೆ ಕಣ್ಣೀರು ಸುರಿಸುವವರಾರು, ಆದರಿಂದ ಭಾರತ್ ಬಂದ್ ಯಶಸ್ವಿಗೆ ಎಲ್ಲರ ಪಾಲ್ಗೊಳ್ಳುವಿಕೆ ಅತ್ಯಗತ್ಯ ಎಂದು ಹೇಳಿದರು.

ಸಂಘ ಪರಿವಾರ ಫ್ಯಾಸಿಸ್ಟ್ ಗೂಂಡಾಗಿರಿ

ಉತ್ತರ ಪ್ರದೇಶದ ಫೈಜಾಬಾದ್‌ನಲ್ಲಿ ಸಫ್ದರ್ ಹಾಶ್ಮಿ ಸ್ಮಾರಕ ಟ್ರಸ್ಟ್ (ಸಹಮತ್) ಏರ್ಪಡಿಸಿದ ಪ್ರದರ್ಶನವದಲ್ಲಿ ಹಲವಾರು ಪೋಸ್ಟರುಗಳು ಹಾಗೂ ಪ್ರದರ್ಶನ ವಸ್ತುಗಳನ್ನು ಬಿಜೆಪಿ-ಆರ್.ಎಸ್.ಎಸ್. ಮಂದಿ ಆಗಸ್ಟ್ 12 ರಂದು ಹಾಳುಗೆಡವಿದರು. ಅವರ ಈ ಗೂಂಡಾಗಿರಿಯನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿ, ಹಾಡುಹಗಲೇ ನಲ್ಲೇ ಪೋಲೀಸರ ಎದುರೇ ಇದು ನಡೆದಿರುವುದು ಆಡಳಿತವೂ ಈ ಗೂಂಡಾಗಿರಿಯಲ್ಲಿ ಶಾಮೀಲಾಗಿರುವುದಕ್ಕೆ ಸಾಕ್ಷಿ ಎಂದು ಪಿ. ಖೇದ ವ್ಯಕ್ತಪಡಿಸಿದೆ.

ಸ್ವಾತಂತ್ರ್ಯ ದಿನ ಸಂಧರ್ಭದಲ್ಲಿ ಆಗಸ್ಟ್ 14-15 ರಂದು 'ಸಹಮತ್' ಅಯೋಧ್ಯೆಯಲ್ಲಿ ಒಂದು ಕಾರ್ಯಕ್ರಮವನ್ನು ಸಂಘಟಿಸಿತ್ತು. ಇದನ್ನು ಅಸ್ತವ್ಯಸ್ತಗೊಳಿಸುವುದಾಗಿ ಕೂಡಾ ವಿ.ಹೆಚ್.ಪಿ. ಭಜರಂಗದಳ ಬೆದರಿಕೆ ಹಾಕಿದವು. ಉತ್ತರ ಪ್ರದೇಶ ಆಡಳಿತ ಬಹಳ ದಿನಗಳಿಂದ ಈ ಶಕ್ತಿಗಳು ಅಯೋಧ್ಯೆಯಲ್ಲಿ ಸ್ವೇಚ್ಛಾಚರವ ನಡೆಸಲು ಅವಕಾಶ ನೀಡುತ್ತಾ ಬಂದಿದೆ. ಜಿಲ್ಲಾ ಆಡಳಿತ ಬಿಗಿ ಕ್ರಮಗಳನ್ನು ಕೈಗೊಳ್ಳಬೇಕೆಂದು ಪೊಲಿಟ್‌ಬ್ಯೂರೋ ಆಗಸ್ಟ್ 13 ರಂದು ನೀಡಿದ ಹೇಳಿಕೆಯಲ್ಲಿ ಆಗ್ರಹಪಡಿಸಿತ್ತು.

ಕಾಂಗ್ರೆ ಪಕ್ಷದ ಬೀದಿ ಜಗಳ

ಕರ್ನಾಟಕದ ಕಾಂಗ್ರೆಸನಲ್ಲಿ ಬೀದಿ ಜಗಳ ದಿನ ನಿತ್ಯದ ಮಾತಾಗಿದೆ. ಮೂರು ವರ್ಷದಲ್ಲಿ ಮೂರು ಮುಖ್ಯಮಂತ್ರಿಗಳನ್ನು ಕಂಡಮೇಲೂ ಕಾಂಗ್ರೆ ಪಕ್ಷದೊಳಗಿನ ಸಂದರ್ಭಸಾಧಕರಿಗೆ ತೃಪ್ತಿಯಾಗಿಲ್ಲ.

ಇತ್ತೀಚಿಗೆ ಬಹಿರಂಗ ಸಭೆಯಲ್ಲಿ ಕಾಂ. ಸೂರಿಯವರು ಕೇಳಿದಂತೆ ಕಾಂಗ್ರೆ ಎಂ.ಎಲ್.ಎಗಳು-ಭಿನ್ನಮತೀಯರು-ಮೊಯ್ಲಿ ಮತೀಯರು ಎಂ.ಪಿ.ಗಳು ಇವರೆಲ್ಲಾ ಕಚ್ಚಾಡುತ್ತಿರುವುದು ಯಾತಕ್ಕಾಗಿ? ಕರ್ನಾಟಕದಲ್ಲಿ ಬರಗಾಲ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವುದಕ್ಕಾಗಿಯೋ, ಕೃಷ್ಣಾ ನೀರಿನ ಬಳಕೆ ಬಗ್ಗೆಯೋ, ವಿಜಯನಗರ ಉಕ್ಕಿನ ಕಾರಖಾನೆ ಸ್ಥಾಪನೆಗಾಗಿಯೋ, ವಿದ್ಯುತ್ ಉತ್ಪಾದನೆಗಾಗಿಯೋ, ಕರ್ನಾಟಕದ ಅಭಿವೃದ್ಧಿಯ ಯಾವ ಕ್ರಮಕ್ಕಾಗಿ ಈ ಕಿತ್ತಾಟ?

ಕೇವಲ ಜನಗಳ ದುಡ್ಡನ್ನು ಜೇಬಿಗಿಳಿಸುವುದರ ಪಾಲಿಗಾಗಿ ಕಾಗೆಗಳಂತೆ ಕಿತ್ತಾಡುತ್ತಿರುವ ಈ ಶಾಸಕವರೇಣ್ಯರು ಈ ದೇಶಕ್ಕೆ ರಾಜ್ಯಕ್ಕೆ ಬಂದಿರುವ ಅಪಾಯದ ಬಗ್ಗೆ ಎಂದಾದರೂ ಬಾಯಿ ಬಿಟ್ಟದ್ದಾರೆಯೇ?

ಕರ್ನಾಟಕದಲ್ಲಿ ಇಲ್ಲಿಯವರೆಗೂ ಎಡಪಕ್ಷಗಳನ್ನುಳಿದ ಜಾತ್ಯಾತೀತ ಪಕ್ಷಗಳು ಯಾವುವೂ ಕೋಮುವಾದಿಗಳಿಗೆ ಎದುರು ಸೆಣಸದಿರುವುದು ಅವರ ಅಟ್ಟಹಾಸಕ್ಕೆ ಕಾರಣವಾಗಿದೆ. ನಾನೇ ಅಪ್ರತಿಮ ಜಾತ್ಯಾತೀತ ಪಕ್ಷ ಅಲ್ಪಸಂಖ್ಯಾತರ ಸಂರಕ್ಷಕನೆಂದು ಬೀಗುವ ಕಾಂಗ್ರೆ ಪಕ್ಷಕ್ಕೆ ಕೋಮುವಾದಿಗಳು ಒಡ್ಡುತ್ತಿರುವ ಅಪಾಯದ ಅರಿವು ಮೂಡಿದೆಯೇ?

ಮುಂದೆ ಕರ್ನಾಟಕದಲ್ಲಿ ನಾವೇ ಆಳುವವರು ಎಂದು ಬಿಜೆಪಿ ಅಧಿಕಾರಶಾಹಿಯನ್ನು ಬೆದರಿಸುತ್ತಿರುವ, ತಮ್ಮ ತಮ್ಮೊಳಗೆ ಕಚ್ಚಾಡಿ ಜನರಿಗೆ ಅಸಹ್ಯವನ್ನುಂಟುಮಾಡುತ್ತಿರುವ ಈ ನಾಯಕರು ಅದನ್ನು ಸೆಣಸುವ ಮನಸ್ಸು ಮಾಡಿಯಾರೇ? ಯಲಹಂಕದ ಚುನಾವಣೆಯ ಫಲಿತಾಂಶವೂ ಇವರ ಕಣ್ಣು ತೆರೆಸಿಲ್ಲವೆ?

ವೀರಪ್ಪ ಮೊಯಿಲಿಯವರು ಅಧಿಕಾರಕ್ಕೆ ಬಂದು ಅನೇಕ ಒಳ್ಳೆಯ ಕ್ರಮಗಳನ್ನು ತೆಗೆದುಕೊಳ್ಳುವ ಘೋಷಣೆಗಳನ್ನು ಮಾಡತೊಡಗಿದಾಗ ಅನೇಕರಿಗೆ ಕಾಂಗ್ರೆ ಸರ್ಕಾರ ಬಂಗಾರಪ್ಪನವರ ಅತಿಭ್ರಷ್ಟತೆಯಿಂದ ಸ್ವಚ್ಛತೆಗೆ ಧುಮುಕಿಬಿಟ್ಟಿತೇ ಎಂದು ಮೂಗಿನ ಮೇಲೆ ಬೆರಳೇರಿಸುವಂತೆ ಆಗಿರಬಹುದು. ಒಬ್ಬ ವ್ಯಕ್ತಿಯ ಬದಲಾವಣೆಯಿಂದ ಇಂತಹ ಮಾರ್ಪಾಟು ಸಾಧ್ಯವೇ ಎಂದು ಅನೇಕರು ಯೋಚಿಸಿರಬಹುದು. ಆದರೆ ಕಾಂಗ್ರೆ ಮಂತ್ರಿ ಮಂಡಲದ ವಿಸ್ತರಣೆಯಲ್ಲಿ ಕಾಸಿಗೊಬ್ಬ ಕೊಸರಿಗೊಬ್ಬ ಮಂತ್ರಿ ಹುಟ್ಟಿಕೊಂಡಾಗ, ಆ ಮಂತ್ರಿಗಳ ಸ್ವರೂಪವನ್ನೇ ನೋಡಿದಾಗ ಇದು ಅದೇ ಕಾಂಗ್ರೆ ಪಕ್ಷವಲ್ಲದೇ ಮತ್ತೇನು? ಎನ್ನಿಸಿತು. ಮತ್ತೇ ಈ ಸಂಪುಟದಲ್ಲಿ ಹಲವು ಮಂತ್ರಿಗಳ ಮೇಲೆ ಆಪಾದನೆಯ ಸುರಿಮಳೆಯಾದಾಗ, ನಂತರ ಈ ಭಿನ್ನಮತವೆಂಬ ಸುಂಟರಗಾಳಿ ಆಗ ಏಳುವುದು ಈಗ ಮರೆಯಾಗುವುದು ಮತ್ತೆ ಭುಗಿಲೇಳುವುದು ನಡೆದಾಗ ಬಂಗಾರಪ್ಪನವರ ಸರ್ಕಾರಕ್ಕೆ ರಾಜ್ಯದಲ್ಲೆಲ್ಲಾ ಛೀ, ಥೂ, ಎಂದರೂ ಶಾಸಕಾಂಗದಲ್ಲಿ ನನಗೆ ಬಲವಿದೆ ಎಂದು ಅವರು ತೊಡೆ ತಟ್ಟುತ್ತಿದ್ದುದಕ್ಕೆ ಕಾರಣ ಗೊತ್ತಾಯಿತು. ಇದು ಮತ್ತೆ ಅದೇ ಹಳೆಯ ಕಾಂಗ್ರೆ ಪಕ್ಷ ಎಂಬುದು ಎಲ್ಲರಿಗೂ ಖಚಿತವಾಗುವಂತಾಯಿತು.

ರಾಜ್ಯದಲ್ಲಿ ಸ್ವಚ್ಛ ಆಡಳಿತ ನೀಡುತ್ತೇನೆ, ಕ್ಯಾಪಿಟೇಷನ್, ಎಕ್ಸೈಸ್ ಲಾಬಿಗಳನ್ನು ಕೊಂಬು ಹಿಡಿದು ಬಗ್ಗಿಸುತ್ತೇವೆ ಎಂದೆಲ್ಲಾ ಮಾತನಾಡುವ ವೀರಪ್ಪಮೊಯಿಲಿ ತಾವು ಉಳಿದುಕೊಳ್ಳುವುದಕ್ಕೆ ಭಾರತ ಕಂಡ ಪ್ರಧಾನಿಗಳಲ್ಲೇ ಅತಿ ಭ್ರಷ್ಟರೆದು ಹೆಸರಾದ ನರಸಿಂಹರಾಯರ ಬಾಲ ಬಡಿಯುವ, ಅವರನ್ನು ರಕ್ಷಿಸುವ ಪ್ರಯತ್ನದಲ್ಲಿ ತೊಡಗುವುದು ಕಾಂಗ್ರೆಯೊಳಗಿನ ವಿಪರ್ಯಾಸಗಳಲ್ಲೊಂದು.

ಕರ್ನಾಟಕದ ಅಭಿವೃದ್ಧಿಯ ಮಾತನ್ನಾಡುತ್ತಲೇ ಕರ್ನಾಟಕದ, ದೇಶದ ಜನರಿಗೆ ಕಂಟಕವಾಗಿರುವ ಹೊಸ ಆರ್ಥಿಕ ನೀತಿಗಳನ್ನು ಉತ್ಸಾಹದಿಂದ ಜಾರಿ ಮಾಡಲೆಳಸುವುದು ಕೂಡ ವೀರಪ್ಪಮೊಯಿಲಿಯವರ ವಿಪರ್ಯಾಸಗಳಲ್ಲೊಂದಾಗಿದೆ. ಈ ವಿಪರ್ಯಾಸಗಳಿಂದ ಬಿಡಿಸಿಕೊಂಡು ಕರ್ನಾಟಕದ ಅಭಿವೃದ್ಧಿ, ದೇಶದ ಸಮಸ್ಯೆಗಳ ಸಲುವಾಗಿ ಭಿನ್ನಾಭಿಪ್ರಾಯವಿದಕ್ಕಾಗಿ ಎಲ್ಲ ಕದನವೆನ್ನುವ ಸ್ಥಿತಿ ಬರುವವರೆಗೂ ಕಾಂಗ್ರೆಗೆ ಯಾವುದೇ ಉಳಿಗಾಲವಿಲ್ಲ.

-- ಕಾಂ. ಜಿ.ಎನ್. ನಾಗರಾಜ್

ಉತ್ಪಲದತ್ತರಿಗೊಂದು ಶ್ರದ್ಧಾಂಜಲಿ

ಮುಖದಲ್ಲಿ ಮುಯಸ್ಸು
ಕಣ್ಣಲ್ಲಿ ಕನಸು
ಮೂಗಡಿಯಲ್ಲಿ ಮುನಿಸು
ಕಾಣದಾದ ದಿವಸ

ಮಾತೊಳಗಿನ ಮೌನ
ಹಾಡೊಳಗಿನ ಧ್ಯಾನ
ನೀರೊಳಗಿನ ಮೀನ
ಬೇರೆ ಮಾಡಿದ ದಿವಸ

ನಗುವೊಳಗಿನ ನೋವು
ದಿನದೊಳಗಿನ ಸಾವು
ಎದೆಯೊಳಗಿನ ಕಾವು
ಬಯಲಾಗದ ದಿವಸ

ಬವಣೆಯ ಹೂ ಹೆಣೆದು
ಬದುಕಿನ ಮುಡಿಗೆ ಮುಡಿದು
ರೋಷಗಳಿಗೆ ಬಣ್ಣ ಬಳಿದು
ರಂಗ ಕಟ್ಟಿದ ದಿವಸ

ಮಾಯ ಲೋಕವ ಹೊಕ್ಕು
ಕೇಳಿ ಕೇಳಿ ಇರುಳ ಬಿಕ್ಕು
ಮರೆಯದೆ ಭೂಮಿಯ ದಿಕ್ಕು
ತಿರುಗಿ ತಿರುಗಿ ಬರುವ ದಿವಸ

ನೀ
ಹೊರಡುತ್ತಿದೆ.
'ಸೂರ್ಯ ಶಿಕಾರಿ'ಗೆ
ಮಲಗಿದಾಗ ಬಲು
ಜಾಣರೆಲ್ಲ
ವಿಷಾದ ಮಹಲಲ್ಲಿ ತಣ್ಣಗೆ!

ಹಾಗೆ-
ತಂದ ಬಾಳ ಬುತ್ತಿ
ಹೋಗದಂತೆ ಎಂದೂ ಬತ್ತಿ
ನೀ
ಪಳಗಿಸಿದ ಕೆಂಪು ಕುದುರೆ
ಹತ್ತಿ
ಹೊರಟರೆ ಕಾಲ
ಲೋಕದ ಸುತ್ತ
ಜನ ಮರೆಯದೆ ಹೇಳುತ್ತಾರೆ
ಬಂದ ಬಂದ ಉತ್ಪಲ್‌ದತ್ತ.

-ಘರಾಜ್

ಎಡರಂಗ ಮತ್ತಷ್ಟು ಗಟ್ಟಿಗೊಳ್ಳುತ್ತದೆ

– ಜ್ಯೋತಿಬಸು

ಇತ್ತೀಚಿನ ರಾಜ್ಯಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರಣವ್ ಮುಖರ್ಜಿಯವರಿಗೆ ಕೆಲವು ಎಡರಂಗ ಶಾಸಕರು ಮತನೀಡಿರುವ ಹಿನ್ನೆಲೆಯಲ್ಲಿ ಎಡರಂಗ ಮುರಿದರೆ ಅಥವಾ ಮುರಿದು ಬೀಳಲಾರಂಭಿಸಿದೆ ಎಂಬ ಮಾತು ಬುಡವಿಲ್ಲದ್ದು ಎಂದು ಇನ್ನೊಂದು ಪ್ರಶ್ನೆಗೆ ಉತ್ತರಿಸುತ್ತಾ ಜ್ಯೋತಿಬಸು ಹೇಳಿದರು. ಆ ಎಡರಂಗ ಶಾಸಕರ ಈ ಕೆಲಸದಿಂದಾಗಿ ಎಡರಂಗ ಇನ್ನಷ್ಟು ಬಲಗೊಳ್ಳುತ್ತದೆ ಎಂದು ಅವರು ಹೇಳಿದರು. ಪಶ್ಚಿಮಬಂಗಾಳದಿಂದ ಆರನೇ ರಾಜ್ಯಸಭಾ ಸ್ಥಾನಕ್ಕೆ ಅಭ್ಯರ್ಥಿಯನ್ನು ನಿಲ್ಲಿಸುವ ಎಡರಂಗ [illegible]ರ್ಧಾರ ಸರಿಯಾಗಿತ್ತು. ಇದರಿಂದ ಒಳಗೇ [illegible]ರುವ ಶತ್ರುಗಳನ್ನು ಬಯಲಿಗೆಳೆಯುವುದು ಸಾಧ್ಯವಾಯಿತು ಎಂದು ಅವರು ಅಡಗಿರುವ ಶತ್ರುಗಳಿಗಿಂತ ನೇರವಾಗಿ ಎದುರಿಸುವ ಶಕ್ತಿಗಳಿರುವುದೇ ಒಳ್ಳೆಯದು ಎಂದರು. ಒಂದು ರಾಜ್ಯ ಸಭಾ ಸ್ಥಾನ ಪಡೆಯುವಷ್ಟು ಸದಸ್ಯ ಬಲ ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ಕಾಂಗ್ರೆಸ್ (ಐ) ಗಿದ್ದರೂ ಅದರ ಆಂತರಿಕ ಕಿತ್ತಾಟದಿಂದಾಗಿ ಈ ಬಗ್ಗೆ ಭರವಸೆ ಅವರಲ್ಲಿಲ್ಲ. ಆದ್ದರಿಂದ ಅವರು ಇತರರ ಬಳಿಯೂ ಹೋದರು ಎಂದು ಜ್ಯೋತಿಬಸು.

ಸಂಸದೀಯ ಪ್ರಜಾಸತ್ತೆಗೆ ಅಪಾಯ ಯಾರಿಂದ?

ಸಿಪಿಐ(ಎಂ) ಕೊನೆಗೂ ಸಂಸದೀಯ ವ್ಯವಸ್ಥೆಯೊಳಗೆ ಕೆಲಸ ಮಾಡುವುದನ್ನು ಸ್ವೀಕರಿಸಿತೇ ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಜ್ಯೋತಿಬಸುರವರು ಇದರಲ್ಲಿ "ಕೊನೆಗೂ " ಎಂಬುದು ಹೇಗೆ ಅರ್ಥ ಹೀನ ಎಂಬುದನ್ನು ವಿವರಿಸಿದರು. ನಮ್ಮ ಪಕ್ಷದ ಕಾರ್ಯಕ್ರಮದಲ್ಲಿಯೇ ನಾವು ಸಂಸದೀಯ ಪ್ರಜಾಪ್ರಭುತ್ವವನ್ನು ಹಾಗೂ ಅದು ನೀಡುವ ಸೌಲಭ್ಯಗಳನ್ನು ಪಕ್ಷ ತನ್ನ ಮುನ್ನಡೆಗೆ ಬಳಸುತ್ತದೆ ಎಂದು ಸ್ಪಷ್ಟವಾಗಿ ಹೇಳಿದ್ದೇವೆ. ಜತೆಗೆ ಒಂದು ಎಚ್ಚರಿಕೆಯನ್ನು ಕೊಟ್ಟಿದ್ದೆವು- ಅದೇನೆಂದರೆ ಸಂಸದೀಯ ವ್ಯವಸ್ಥೆಗೆ ಬೆದರಿಕೆ ಕಮ್ಯುನಿಸ್ಟರಿಂದ ಬರುವುದಿಲ್ಲ. ಆಳುವ ವರ್ಗಗಳಿಂದಲೇ ಬರುತ್ತದೆ ಎಂದಿದ್ದೆವು ಎಂದೂ ಈ ಸಂದರ್ಭದಲ್ಲಿ ನೆನಪಿಸಿದರು ಜ್ಯೋತಿಬಸು.

ಕಲ್ಕತ್ತೆಯಲ್ಲಿಯುವ ಕಾಂಗ್ರೆಸ್ ಕಾರ್ಯಕರ್ತರು ರೈಟರ್ಸ್ ಬಿಲ್ಡಿಂಗ್ ಮುತ್ತಿಗೆಯ ಹೆಸರಲ್ಲಿ ಹಿಂಸಾಚಾರಕ್ಕಿಳಿದಾಗ ನಡೆದ ಪೋಲೀಸ್ ಗೋಳೀಬಾರಿನ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವ ಪ್ರಶ್ನೆಯೇ ಇಲ್ಲ ಪ್ರಶ್ನೆ ಒಂದಕ್ಕೆ ಪಶ್ಚಿಮಬಂಗಾಳ ಮುಖ್ಯಮಂತ್ರಿ ಹಾಗೂ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಜ್ಯೋತಿಬಸು ಪುನರುಚ್ಚರಿಸಿದರು. ಅವರು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹಾಗೂ ಕೇಂದ್ರ ಸಮಿತಿ ಸಭೆಗಾಗಿ ಬೆಂಗಳೂರಿನಲ್ಲಿದ್ದಾಗ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಆಹ್ವಾನದ ಮೇರೆಗೆ ಆಗಸ್ಟ್ 22, 1993 ರಂದು ಭಾಗವಹಿಸಿದ ಪತ್ರಿಕಾ ಸಮ್ಮೇಳನದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರ ನೀಡುತ್ತಾ ಹೇಳಿದರು.

ಒಂದು ಸಂಸದೀಯ ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷಗಳ ಪ್ರತಿಭಟನೆಗಳು, ಮತಪ್ರದರ್ಶನಗಳು ಹಾಗೂ ಕಾನೂನು ಉಲ್ಲಂಘನೆಗಳಿಗೂ ಅವಕಾಶವಿದೆ. ಆದರೆ ಇದರಪ್ಟು ಯಾರಾದರೂ ಕಾನೂನನ್ನು ತಮ್ಮ ಕೈಗೆ ತಗೊಳ್ಳಬಹುದೆಂದು ಅರ್ಥವಲ್ಲ. ಆ ದಿನ ಅವರು ಮಾಡಿದ್ದು ಅದೇ. ಅವರು ದೊಣ್ಣೆಗಳು, ಪೈಪುಗಳು, ಗನ್ನುಗಳು ಹಾಗೂ ಬಾಂಬುಗಳಿಂದ ಸಜ್ಜಿತರಾಗಿ ಚುನಾಯಿತ ಸರಕಾರವನ್ನು ಎದುರಿಸಲು, ಪಶ್ಚಿಮಬಂಗಾಳ ಸರಕಾರದ ಅಧಿಕಾರಸ್ಥಾನವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದರು. ಉದ್ರೇಕಕಾರಿ ಚಟುವಟಿಕೆ ನಡೆಸಿ ನಂತರ 356 ನೇ ಕಲಮನ್ನು ಬಳಸಿ ಚುನಾಯಿತ ರಾಜ್ಯ ಸರಕಾರವನ್ನು ವಜಾ ಮಾಡಬೇಕೆಂದು ಕೇಂದ್ರವನ್ನು ಅವರು ಒತ್ತಾಯಿಸುತ್ತಿದ್ದಾರೆ ಎಂದ ಜ್ಯೋತಿಬಸುರವರು ಒಂದೆ 10-12 ಸಂದರ್ಭಗಳಲ್ಲಿ ನ್ಯಾಯಾಂಗ ತನಿಖೆ ನಡೆಸಿದ್ದೇನೆ. ಸಾವುಗಳು ಸಂಭವಿಸಿದ ಘಟನೆಗಳ ನ್ಯಾಯಾಂಗ ತನಿಖೆಯನ್ನು ನಡೆಸಲಾಗಿದೆ ಎಂದ ಅವರು ಈಗ ಯಾಕೆ ಹಾಗೆ ಮಾಡುತ್ತಿಲ್ಲ ಎಂದು ವಿವರಿಸುತ್ತಾ "ಒಂದು ಸಶಸ್ತ್ರ ದಂಗೆ ನಡೆಸಿ, ಅದರಲ್ಲಿ ನೀವು ವಿಫಲಗೊಂಡಾಗ ಅದೇಕೆ ನೀವು ವಿಫಲಗೊಂಡಿರಿ ಎಂದು ನ್ಯಾಯಾಂಗ ತನಿಖೆ ನಡೆಸಿ ಎಂದು ನೀವು ಕೇಳಲು ಸಾಧ್ಯವೇ?" ಎಂದರು ಜ್ಯೋತಿಬಸು.

ಸಹಮತ್ ಅಯೋಧ್ಯ ಪ್ರದರ್ಶನ

'ಸಹಮತ್' ನವರು ಏರ್ಪಡಿಸಿದ ಪ್ರದರ್ಶನಕ್ಕೆ ಸಂಬಂಧಪಟ್ಟ ವಿವಾದದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಜ್ಯೋತಿ ಬಸುರವರು ರಾಮಾಯಣ ಮಹಾಕಾವ್ಯದ ವಿವಿಧ ಆವೃತ್ತಿಗಳ ಬಗ್ಗೆ ನಮ್ಮ ದೇಶದಲ್ಲಿ ಬಹಳಷ್ಟು ಜನಕ್ಕೆ ತಿಳಿದಿಲ್ಲ ಅದರ ಬೌದ್ಧ ಇತ್ಯಾದಿ ಆವೃತ್ತಿಗಳ ಬಗ್ಗೆ ತಿಳಿದಿಲ್ಲ. ಅದೇಕೆ ಇತಿಹಾಸದ ಬಗ್ಗೆಯೂ ಗೊತ್ತಿಲ್ಲ. ಆದರೂ ಇದನ್ನು ತಪ್ಪಿಸಬಹುದಿತ್ತು. ಏಕೆಂದರೆ ಬಿಜೆಪಿ ಇಂತಹವನ್ನೆಲ್ಲಾ ತನ್ನ ಲಾಭಕ್ಕೆ ಬಳಸಿಕೊಳ್ಳುತ್ತದೆ ಎಂದು ಅವರು ಹೇಳಿದರು.

ಉತ್ತರ ಪ್ರದೇಶ ಚುನಾವಣೆ -ಯಾವ ರೀತಿಯ ಮೈತ್ರಿ?

ಮುಂಬರುವ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗಳಲ್ಲಿ ರಚನೆಗೊಳ್ಳುವ ಮೈತ್ರಿ ಎಂತಹದು? ಇದು ಎಲ್ಲರ ಮನಸ್ಸಿನಲ್ಲಿರುವ ಪ್ರಶ್ನೆ. ಈ ಬಗ್ಗೆ ಹೇಳುತ್ತಾ ಜ್ಯೋತಿಬಸುರವರು ಉತ್ತರ ಪ್ರದೇಶದಲ್ಲಿ ಮುಲಾಯಂ ಸಿಂಗ್ ಒಂದು ಪ್ರಮುಖ ಶಕ್ತಿ ಎಂದರು. ನಮಗನಿಸುತ್ತದೆ -ಅಲ್ಲಿ ಬಿಜೆಪಿ ಮುನ್ನಡೆಗೆ ಅವಕಾಶಕೊಡಬಾರದೆಂದಾದರೆ ಜಾತ್ಯಾತೀತ ಶಕ್ತಿಗಳು ಅಂದರೆ ಎಡಪಕ್ಷಗಳು ಹಿಂದಿನ ಜನತಾದಳದ ವಿವಿಧ ಗುಂಪುಗಳು-ವಿ.ಪಿ.ಸಿಂಗ್, ಅಜಿತ್‌ಸಿಂಗ್, ಮುಲಾಯಂ ಸಿಂಗ್ ಒಟ್ಟಾಗಿ ನಿಲ್ಲಬೇಕು ನಮ್ಮ ಈ ಅಭಿಪ್ರಾಯವನ್ನು ಗಮನಕ್ಕೆ ತಗೊಳ್ಳಬೇಕೆಂದು ತಾವು ಮುಲಾಯಂಸಿಂಗ್‌ಗೆ ಹೇಳಿರುವುದಾಗಿ ಜ್ಯೋತಿಬಸು ಹೇಳಿದರು. ಮುಲಾಯಂ ಸಿಂಗ್ ಕಾಂಗ್ರೆಸ್(ಐ) ನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಾರೆಯೇ ಎಂಬ ಇನ್ನೊಂದು ಪ್ರಶ್ನೆಗೆ ಉತ್ತರಿಸುತ್ತಾ ತನಗೆ ಈ ಬಗ್ಗೆ ತಿಳಿಯದು ಎಂದರು. ಆ ದಿನದ ಪತ್ರಿಕಾಸುದ್ದಿಗಳತ್ತ ಗಮನ ಸೆಳೆಯುತ್ತಾ ಮುಲಾಯಂ ಕಾಂಗ್ರೆಸ್(ಐ) ನೊಡನೆ ಯಾವುದೇ ಮೈತ್ರಿ ಸಾಧ್ಯವಿಲ್ಲ ಎಂದಿದ್ದಾರೆ ಎಂದೂ ವರದಿಯಾಗಿದೆ ಎಂದರು. ಪಶ್ಚಿಮಬಂಗಾಳದ ಪಂಚಾಯತು ಚುನಾವಣೆಗಳಿಗೆ ನೋಡಿದಂತೆ ಕಾಂಗ್ರೆಸ್ (ಐ) ಬಿಜೆಪಿಯೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದೇ ಎಂದು ಕೇಳಿದಾಗ ಕಾಂಗ್ರೆಸ್(ಐ) ಜಾತ್ಯಾತೀತತೆ ಬಗ್ಗೆ ಮಾತನಾಡಿದರೂ ಅದರ ಕಾರ್ಯಗಳು ಜಾತ್ಯತೀತತೆಯ ಹತ್ತಿರವೂ ಸುಳಿದಿಲ್ಲ ಎಂದರೂ ಈ ಪ್ರಶ್ನೆಗೆ ಉತ್ತರ ಕೊಡಬೇಕಾದವರು ಕಾಂಗ್ರೆಸ್ (ಐ), ನಾನಲ್ಲ ಎಂದರು ಜ್ಯೋತಿಬಸು.

ಅಸಂಘಟಿತ ಕಾರ್ಮಿಕರ ಹೋರಾಟದ ಹೊಸ ಘಟ್ಟ

ಪಾರ್ಲಿಮೆಂಟ್ ಚಲೋ ಮಾರ್ಚ್ 1994

ಜುಲೈ 14 ರಂದು ದೇಶಾದ್ಯಂತ ಸಿಐಟಿಯು ನೇತೃತ್ವದಲ್ಲಿ ನಡೆದ ಅಸಂಘಟಿತ ಕಾರ್ಮಿಕರ ಒಂದು ದಿನದ ಮುಷ್ಕರ ಅನುಭವವನ್ನು ಪರಾಮರ್ಶಿಸಿದ ಅಸಂಘಟಿತ ಕಾರ್ಮಿಕರ ಅಖಿಲ ಭಾರತ ಸಮನ್ವಯ ಸಮಿತಿಯ ಸಭೆ ಮುಂದಿನ ಕಾರ್ಯಾಚರಣೆಯ ಕಾರ್ಯಕ್ರಮವನ್ನು ರೂಪಿಸಿದೆ.

ವಿವಿಧ ರಾಜ್ಯಗಳಲ್ಲಿ ವಿವಿಧ ಅಸಂಘಟಿತ ವಲಯಗಳಿಗೆ ಸೇರಿದ 70 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಈ ಮುಷ್ಕರದಲ್ಲಿ ಭಾಗವಹಿಸಿದರು ಎಂದು ಆಗಸ್ಟ್ 25 ರಂದು ಸೇರಿದ ಈ ಸಮನ್ವಯ ಸಮಿತಿಯ ಸಭೆಗೆ ವರದಿ ಮಾಡಲಾಯಿತು. ಇವರಲ್ಲಿ 40 ಲಕ್ಷ ಕಾರ್ಮಿಕರು ಪಶ್ಚಿಮಬಂಗಾಳವೊಂದರಲ್ಲೇ ಭಾಗವಹಿಸಿದರು. ದಿಲ್ಲಿ, ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶ ಹಾಗೂ ಪಂಜಾಬಿನಲ್ಲೂ ಮುಷ್ಕರ ವ್ಯಾಪಕವಾಗಿ ನಡೆಯಿತು. ಉತ್ತರ ಪ್ರದೇಶ, ಬಿಹಾರ, ರಾಜಸ್ತಾನದ ಕೆಲವು ಭಾಗಗಳು, ಹರ್ಯಾಣಾ, ಮಧ್ಯಪ್ರದೇಶ, ಗುಜರಾತ್, ಒರಿಸ್ಸಾ ಇತ್ಯಾದಿಗಳಲ್ಲೂ ಯಶಸ್ವಿ ಮುಷ್ಕರಗಳು ನಡೆದವು. ಇಟ್ಟಿಗೆಗೂಡು, ಕಲ್ಲುಗಣಿ, ಸಣ್ಣ ಚರ್ಮದ ಹದ ಮಾಡುವ ಉದ್ದಿಮೆಗಳು, ಸಣ್ಣ ಅಂಗಡಿಗಳು, ಹೋಸ್ಯರಿ, ಕಾಂಟ್ರಾಕ್ಟ್, ಕ್ಯಾಸುವಲ್ ಕಾರ್ಮಿಕರು, ಹೋಟೆಲ್ ಕಾರ್ಮಿಕರು, ಗೇರು, ಹೆಂಚು ಹೆಡ್ ಲೋಡ್ ಕಾರ್ಮಿಕರು, ಬೀದಿ ವ್ಯಾಪಾರಿಗಳು, ಬೇಕರಿ ಕಾರ್ಮಿಕರು, ಸಣ್ಣ ಮುದ್ರಣಾಲಯಗಳ ಕಾರ್ಮಿಕರು, ಸೆರಾಮಿಕ್ಸ್, ಬುಕ್ ಬೈಂಡಿಂಗ್, ಬೆಂಕಿ ಪೆಟ್ಟಿಗೆ, ಸಿಡಿಮದ್ದುಗಳ ಕಾರ್ಮಿಕರು, ಸಣ್ಣ ಇಂಜಿನಿಯರಿಂಗ್ ಉದ್ದಿಮೆಗಳ ಕಾರ್ಮಿಕರು ಇತ್ಯಾದಿ ವಿವಿಧ ಉದ್ದಿಮೆಗಳ ಕಾರ್ಮಿಕರು ಇವರಲ್ಲಿ ಭಾಗವಹಿಸಿದರು.

ಅಸಂಘಟಿತ ಕಾರ್ಮಿಕರ 22 ಬೇಡಿಕೆಗಳ ಈಡೇರಿಕೆಗಾಗಿ ಮುಂದಿನ ಘಟ್ಟದ ಹೋರಾಟ ಕಾರ್ಯಕ್ರಮಗಳನ್ನು ಈ ಸಭೆ ರೂಪಿಸಿತು. ಸೆಪ್ಟೆಂಬರ್ 1 ರಿಂದ ಆರಂಭವಾಗುವ ಈ ಹೋರಾಟ ಕಾರ್ಯಕ್ರಮ ಮಾರ್ಚ್ ತಿಂಗಳಲ್ಲಿ ಪಾರ್ಲಿಮೆಂಟ್ ಚಲೋದೊಂದಿಗೆ ಕೊನೆಗೊಳ್ಳುತ್ತದೆ. ಹೋರಾಟದ ಕಾರ್ಯಕ್ರಮ ಹೀಗಿದೆ.

1. *ಸೆಪ್ಟೆಂಬರ್ 1 ರಿಂದ ಅಕ್ಟೋಬರ್ 31* : ರಾಜ್ಯ ಜಿಲ್ಲಾ ಹಾಗೂ ಘಟಕ ಮಟ್ಟಗಳಲ್ಲಿ ಪ್ರಚಾರ - ಪ್ರತಿಭಟನೆ
2. *ನವಂಬರ್ 1 ರಿಂದ ಡಿಸೆಂಬರ್ 31* : ಘಟಕ, ಜಿಲ್ಲಾ, ರಾಜ್ಯಮಟ್ಟಗಳಲ್ಲಿ ಸಮಾವೇಶಗಳು.
3. *ಜನವರಿ 1 ರಿಂದ ಜನವರಿ 31* : ರಾಜ್ಯ ಜಿಲ್ಲಾ ಮಟ್ಟಗಳಲ್ಲಿ ಮತಪ್ರದರ್ಶನ, ಧರಣಿ, ರಾಜ್ಯ ಮುಖ್ಯಮಂತ್ರಿಗಳಿಗೆ ಮನವಿ ಪತ್ರ.
4. *ಫೆಬ್ರವರಿ 1 ರಿಂದ ಫೆಬ್ರವರಿ 28* : ರಾಜ್ಯದ ರಾಜಧಾನಿಗಳಲ್ಲಿ ರ್‍ಯಾಲಿ
5. *ಮಾರ್ಚ್ 1994* : ನವದೆಹಲಿಯಲ್ಲಿ ಸಂಸತ್ತಿನ ಎದುರು ಬೃಹತ್ ರ್‍ಯಾಲಿ

ಸಿಐಟಿಯು ನಿಯೋಗವೊಂದು ಲೋಕಸಭೆಯ ಅಧ್ಯಕ್ಷರನ್ನು ಆಗಸ್ಟ್ 26 ರಂದು ಭೇಟಿ ಮಾಡಿ ತಮ್ಮ ಸಮಸ್ಯೆಗಳನ್ನು ಹಾಗೂ ಬೇಡಿಕೆಗಳನ್ನು 'ಮನವಿಗಳ ಸಮಿತಿ'ಯಲ್ಲಿ ಚರ್ಚಿಸಬೇಕೆಂದು ದೇಶಾದ್ಯಂತ 2.5 ಲಕ್ಷ ಕಾರ್ಮಿಕರು ಸಹಿ ಹಾಕಿರುವ ಮನವಿಯನ್ನು ಅರ್ಪಿಸಿತು. ಲೋಕಸಭೆಯಲ್ಲಿ ಸಿಪಿಐ(ಎಂ) ಮುಖಂಡರಾದ ಸೋಮನಾಥ ಚಟರ್ಜಿ ಈ ನಿಯೋಗದ ನೇತೃತ್ವವನ್ನು ವಹಿಸಿದ್ದರು. ಇತರ ಎಂ.ಪಿ. ಗಳಲ್ಲದೆ ಸಿಐಟಿಯು ಕಾರ್ಯದರ್ಶಿ ಪಿ.ಕೆ. ಗಂಗೂಲಿ, ವಿ.ಜೆ.ಕೆ. ನಾಯರ್ (ಕರ್ನಾಟಕ). ಮೃಣಾಲ್ ದಾಸ್ (ಪಶ್ಚಿಮ ಬಂಗಾಳ) ವಿ. ಕಾರ್ಮೇನಾ, (ತಮಿಳುನಾಡು), ಮೋಹನ್‌ಲಾಲ್ (ದಿಲ್ಲಿ) ಸತ್ಪಾಲ್ ಭಾರತಿ (ಪಂಜಾಬ್) ಹಾಗೂ ವಿಜಯ್ ರಾವತ್ (ಉತ್ತರ ಪ್ರದೇಶ) ಈ ನಿಯೋಗದಲ್ಲಿದ್ದರು.

ಸಿಪಿಐ(ಎಂ) - ಸಿಪಿಐ ಸಮನ್ವಯ ಸಮಿತಿ ರಚನೆ

ಕರ್ನಾಟಕ ರಾಜ್ಯದ ಜನತೆಯ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸಿ ಹೆಚ್ಚು ಚುರುಕಿನಿಂದ ಶ್ರಮಿಸಲು ಈ ಎರಡೂ ಪಕ್ಷಗಳ ತಲಾ 3 ಪ್ರತಿನಿಧಿಗಳುಳ್ಳ ರಾಜ್ಯಮಟ್ಟದ ಸಮನ್ವಯ ಸಮಿತಿ ರಚಿಸಲು ನಿರ್ಧರಿಸಲಾಗಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿ. ರಾಮಚಂದ್ರರಾವ್ ಹಾಗೂ ಸಿಪಿಐ ರಾಜ್ಯ ಕಾರ್ಯದರ್ಶಿ ಎಂ.ಸಿ. ವೆಂಕಟರಾಮ್ ಸೆಪ್ಟೆಂಬರ್ 1 ರಂದು ನೀಡಿರುವ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ. ರಾಜ್ಯದ ಸಾರಿಗೆ ಕಾರ್ಮಿಕರ ಬೇಡಿಕೆಗಳಿಗೆ ಮತ್ತು ಕೇಂದ್ರ ಸರ್ಕಾರದ ಆರ್ಥಿಕ ಮತ್ತು ಕೈಗಾರಿಕಾ ನೀತಿಗಳು ಹಾಗೂ ಕೋಮುವಾದದ ವಿರುದ್ಧ ಸೆಪ್ಟೆಂಬರ್ 9 ರಂದು ನಡೆಯಲಿರುವ ಮುಷ್ಕರ ಮುರಿಯಲು ಅದನ್ನು ನಿಷೇಧಿಸುವ ಬೆದರಿಕೆ ಹಾಕಿರುವುದನ್ನು ಈ ಸಂದರ್ಭದಲ್ಲಿ ನಡೆದ ಎರಡೂ ಪಕ್ಷಗಳ ರಾಜ್ಯ ಸಮಿತಿಗಳ ಸಭೆ ಉಗ್ರವಾಗಿ ಖಂಡಿಸಿದೆ.

ಸೆ. 9 ರಾಜ್ಯಾದಾದ್ಯಂತ ಶಾಲಾಕಾಲೇಜು ಬಂದ್

ಕೇಂದ್ರ ಸರಕಾರದ ಹೊಸ ಆರ್ಥಿಕ ನೀತಿಯ ಭಾಗವಾಗಿ ಜಾರಿಗೊಳ್ಳುತ್ತಿರುವ ನೂತನ ಶಿಕ್ಷಣ ನೀತಿಯನ್ನು ವಿರೋಧಿಸಿ ಹಾಗೂ ಕೋಮುವಾದದ ವಿರುದ್ಧ ಸೆಪ್ಟೆಂಬರ್ 9 ರಂದು ರಾಜ್ಯದಾದ್ಯಂತ ಶಾಲಾ-ಕಾಲೇಜು ಬಂದ್ ಮಾಡುವ ಮೂಲಕ 'ಭಾರತ ಬಂದ್' ಯಶಸ್ವಿಗೊಳಿಸಬೇಕೆಂದು ಎಸ್.ಎಫ್.ಐ. ರಾಜ್ಯ ಸಮಿತಿ ವಿದ್ಯಾರ್ಥಿ ವೃಂದವನ್ನು ವಿನಂತಿಸಿದೆ.

ಈ ವಿಷಯವನ್ನು ಸೆಪ್ಟೆಂಬರ್ 9, 1993 ರಂದು ಬೆಂಗಳೂರಿನಲ್ಲಿ ನಡೆದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಾ ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ ಶಾಂತಾರಾಮ ನಾಯಕ್ ಹಾಗೂ ಸಹ ಕಾರ್ಯದರ್ಶಿ ಕೆ. ಪ್ರಕಾಶ್ ತಿಳಿಸಿದರು.

ಶಿಕ್ಷಣಕ್ಕೆ ಬಜೆಟ್‌ನಲ್ಲಿ ಹಣ ವರ್ಷದಿಂದ ವರ್ಷಕ್ಕೆ ಕಡಿತವಾಗುತ್ತಿದ್ದು ಕಳೆದ ವರ್ಷ ಕೇವಲ ಶೇ. 1.99 ನ್ನು ಮಾತ್ರ ಮೀಸಲಿಡಲಾಗಿದೆ. ಖಾಸಗೀಕರಣ ಹೆಚ್ಚಿಸಿ "ಹಣ ಉಳ್ಳವರಿಗೆ ಮಾತ್ರ ಶಿಕ್ಷಣ" ಎನ್ನುವಂತಾಗುತ್ತಿದೆ. ಅವೈಜ್ಞಾನಿಕ, ಅವಾಸ್ತವ ಸಂಗತಿಗಳಿಂದ ತುಂಬಿರುವ ಶಿಕ್ಷಣವು ಜೀವನದ ಸಂಬಂಧವನ್ನು ಕಳೆದುಕೊಂಡಿದೆ. ಇತಿಹಾಸವನ್ನು ತಿರುಚಲಾಗುತ್ತಿದೆ.

ಈ ಮೇಲುವರ್ಗಗಳ ಪರವಾದ ಶಿಕ್ಷಣ ನೀತಿಯನ್ನು ರದ್ದುಗೊಳಿಸಲು ಹಾಗೂ ಶಿಕ್ಷಣಕ್ಕೆ ವಾರ್ಷಿಕ ಬಜೆಟ್‌ನಲ್ಲಿ ಶೇ. 10 ರಷ್ಟು ಹಣ ಮೀಸಲಿಡಬೇಕೆಂದು ಒತ್ತಾಯಿಸಿ ಈ ಮುಷ್ಕರ ನಡೆಯುತ್ತಿರುವುದಾಗಿ ತಿಳಿಸಿದರು.

ವೃತ್ತಿ ಶಿಕ್ಷಣಕ್ಕೆ ವಿದ್ಯಾರ್ಥಿಗಳ ಪ್ರವೇಶ ಪಟ್ಟಿಯನ್ನು ಕೂಡಲೇ ಬಿಡುಗಡೆಗೊಳಿಸಬೇಕು ಹಾಗೂ ಪ್ರೌಢಶಿಕ್ಷಣದಲ್ಲಿ 'ಹಿಂದಿ'ಯನ್ನು 50 ಅಂಕಗಳಿಂದ 100 ಅಂಕಗಳಿಗೆ ಹೆಚ್ಚಿಸಿರುವುದು ತಕ್ಷಣ ವಾಪಸ್ಸಾಗಬೇಕೆಂದು ಒತ್ತಾಯಿಸಿ ರಾಜ್ಯದಲ್ಲಿ ವಿದ್ಯಾರ್ಥಿಗಳ ಮುಷ್ಕರಕ್ಕೆ ಕರೆ ನೀಡಲಾಗಿದ್ದು, ರಾಜ್ಯದಲ್ಲಿ ಡಿ.ಎಸ್.ಎಫ್. ಸಹ ಈ ಮುಷ್ಕರಕ್ಕೆ ಬೆಂಬಲಿಸಿರುವುದಾಗಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಭಟ್ಟಾಚಾರ್ಯ ರಾಜೀನಾಮೆ ಸ್ವೀಕರಿಸಲು ಪ.ಬಂಗಾಳ ರಾಜ್ಯ ಸಮಿತಿ ಶಿಫಾರಸು

ಸಿಪಿಐ(ಎಂ)ನ ಪಶ್ಚಿಮಬಂಗಾಳದ ಕಾರ್ಯದರ್ಶಿ ಮಂಡಳಿ ಸುದ್ದಿ ಪ್ರಸಾರ, ಸಾಂಸ್ಕೃತಿಕ ಹಾಗೂ ನಗರಾಭಿವೃದ್ಧಿ ಮಂತ್ರಿ ಬುದ್ಧದೇವ ಭಟ್ಟಾಚಾರ್ಯ ಅವರು ಎಡರಂಗ ಮಂತ್ರಿಮಂಡಳಕ್ಕೆ ನೀಡಿದ ರಾಜೀನಾಮೆಯನ್ನು ಸ್ವೀಕರಿಸಬೇಕೆಂದು ಮುಖ್ಯಮಂತ್ರಿ ಜ್ಯೋತಿಬಸುರವರಿಗೆ ಶಿಫಾರಸು ಮಾಡಿದೆ.

ಆಗಸ್ಟ್ 31 ರಂದು ಸಭೆ ಸೇರಿದ ಸೆಕ್ರೆಟಾರಿಯೆಟ್ ಈ ಸಂಬಂಧದಲ್ಲಿ ಭಟ್ಟಾಚಾರ್ಯ ಅವರ ಪತ್ರವನ್ನು ಚರ್ಚಿಸಿತು. ಈಗಿನ ಸನ್ನಿವೇಶದಲ್ಲಿ ರಾಜೀನಾಮೆ ನೀಡಿರುವುದು ಸರಿಯಲ್ಲ ಎಂದು ಸೆಕ್ರೆಟಾರಿಯೆಟ್ ಅಭಿಪ್ರಾಯಪಟ್ಟಿರುವುದಾಗಿ ನಂತರ ನೀಡಿದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ನಂತರ ಪತ್ರಕರ್ತರನ್ನುದ್ದೇಶಿಸಿ ಮಾತನಾಡುತ್ತಾ ರಾಜೀನಾಮೆ ಕೊಟ್ಟ ರೀತಿ ಸರಿಯಲ್ಲ, ಈ ಬಗ್ಗೆ ಹೆಚ್ಚು ಚರ್ಚೆ ನಡೆಸಬಹುದಾಗಿತ್ತು ಎಂದರು. ರಾಜೀನಾಮೆಯ ಹಿಂದಿನ ಕಾರಣದ ಬಗ್ಗೆ ಕೇಳಿದಾಗ ವೈಯುಕ್ತಿಕ ಕಾರಣದಿಂದಾಗಿ ಎಂದು ಶೈಲೇನ್ ದಾಸ್ ಗುಪ್ತಾ ತಿಳಿಸಿದರು.

ಭಟ್ಟಾಚಾರ್ಯ ಕೇಂದ್ರಸಮಿತಿಯ ಹಾಗೂ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರು. ಪಕ್ಷದಲ್ಲಿ ಅವರಿಗೆ ದೊಡ್ಡ ಜವಾಬ್ದಾರಿಗಳಿವೆ ಎಂದ ಶೈಲೇನ್ ದಾಸ್‌ಗುಪ್ತಾ ಅವರು ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರ ನೀಡುತ್ತಾ ಕಮ್ಯುನಿಸ್ಟ್ ಪಕ್ಷದೊಳಗೆ ಮುಖ್ಯವಾಗಿ ಪಕ್ಷದ ಚುನಾಯಿತ ಸ್ಥಾನಗಳಲ್ಲಿ ಅನುಸರಿಸಬೇಕಾದ ಕೆಲವು ವಿಧಾನಗಳು, ಶಿಸ್ತು ಇವೆ ಎಂದರು.

ಈ ಇಡೀ ವ್ಯವಹಾರದಿಂದಾಗಿ ಪಕ್ಷಕ್ಕೆ ತೊಂದರೆಯಾಗುತ್ತದೆ, ಆದರೆ ಅವನ್ನು ಎದುರಿಸಿ ನಿಲ್ಲುವಷ್ಟು ಪಕ್ಷ ಬಲಶಾಲಿಯಾಗಿದೆ ಎಂದು ಅವರು ಹೇಳಿದರು.

ಪೊಲಿಟ್‌ಬ್ಯೂರೋ ಶೋಕ

ಅಗಲಿದ ಸಂಗಾತಿ ಅಚಿಂತ್ಯ ಭಟ್ಟಾಚಾರ್ಯ

ಸಿಪಿಐ(ಎಂ)ನ ಕೇಂದ್ರ ಸಮಿತಿಯ ಸದಸ್ಯ ಕಮ್ಯುನಿಸ್ಟ್ ಚಳುವಳಿಯ ಧೀಮಂತ ನಾಯಕ ಅಚಿಂತ್ಯ ಭಟ್ಟಾಚಾರ್ಯ ಇನ್ನಿಲ್ಲ. ಇದೇ 1993ರ ಆಗಸ್ಟ್ 24 ರಂದು ಅವರು ಕಲ್ಕತ್ತದ ಆಸ್ಪತ್ರೆಯೊಂದರಲ್ಲಿ ನಿಧನ ಹೊಂದಿದರು. ಅವರಿಗೆ 79 ವರ್ಷ ವಯಸ್ಸಾಗಿತ್ತು.

ಸಿಪಿಐ(ಎಂ)ನ ಪೊಲಿಟ್‌ಬ್ಯೂರೋ [illegible] ಭಟ್ಟಾಚಾರ್ಯರ ನಿಧನಕ್ಕೆ ಅತೀವ ಶೋಕ ವ್ಯಕ್ತಪಡಿಸಿದೆ.

ಅವಿಭಜಿತ ಬಂಗಾಳದ ಸಿಲ್‌ಹೆಟ್‌ನಲ್ಲಿ ಜನಿಸಿದ ಭಟ್ಟಾಚಾರ್ಯ ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದರು. 1936 ರಲ್ಲಿ ಕಮ್ಯುನಿಸ್ಟ್ ಪಕ್ಷದ ಸಂಪರ್ಕದಲ್ಲಿ ಬಂದ ಅವರು ಇಂದಿನ ಅಸ್ಸಾಮ್ ಪ್ರದೇಶದಲ್ಲಿ ಕಮ್ಯುನಿಸ್ಟ್ ಚಳುವಳಿ ಕಟ್ಟಿದ ನೇತಾರ.

ಚಹಾ ತೋಟಗಳ ಕಾರ್ಮಿಕರ ಸಂಘಟನೆಗೆ ದುಡಿದ ಭಟ್ಟಾಚಾರ್ಯ ಕಾಚಾರ್ ಜಿಲ್ಲೆಯ ಪಕ್ಷದ ಕಾರ್ಯದರ್ಶಿಯಾದರು. ಸುರ್ಮಾ ಕಣಿವೆಯ ರೈತ ಹೋರಾಟದ ಪ್ರಮುಖ ನಾಯಕರಾದ ಅವರು ಅವಿಭಜಿತ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯ ಕಾರ್ಯದರ್ಶಿ ಮಂಡಳಿಯ ಸದಸ್ಯರೂ ಆದರು. ಅನಂತರ ಪರಿಷ್ಕರಣವಾದದ ವಿರುದ್ಧ ನಿರಂತರ ಹೋರಾಟ ಮಾಡಿದರು 1964 ರಲ್ಲಿ ನಡೆದ ಸಿಪಿಐ(ಎಂ)ನ ಏಳನೇ ಮಹಾಧಿವೇಶನದಲ್ಲಿ ಅವರು ಕೇಂದ್ರ ಸಮಿತಿಯ ಸದಸ್ಯರಾದರು. ಅಸ್ಸಾಂ ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿ ಅವರು 1964 ರಿಂದ 1980 ರವರೆಗೂ ಕಾರ್ಯನಿರ್ವಹಿಸಿದರು. ಈ ಸಂದರ್ಭದಲ್ಲಿ ಅವರು ಸಾಮೂಹಿಕ ಚಳುವಳಿಗಳನ್ನು ಕಟ್ಟಿದರು. [illegible] ದೇಶೀಯರ ಸಮಸ್ಯೆಗಳ ಬಗ್ಗೆ [illegible] ಹೊಂದಿದ್ದ ಅವರು ಮಾರ್ಕ್ಸ್‌ವಾದೀ ಸಿದ್ಧಾಂತದಲ್ಲೂ [illegible] ವಿಶ್ವಾಸ ಹೊಂದಿದ್ದರು.

ಸಿಪಿಐ(ಎಂ) ಸಾಮೂಹಿಕ ನಾಯಕತ್ವದ ಸಂದರ್ಭದಲ್ಲಿ ಭಟ್ಟಾಚಾರ್ಯರ ಸಾವು [illegible].

ಪೊಲಿಟ್‌ಬ್ಯೂರೋ ಅವರಿಗೆ [illegible] ಅವರ ಹೆಂಡತಿ ಮತ್ತು ಮಕ್ಕಳಿಗೆ ಸಹಾನುಭೂತಿ [illegible]ಸಿದೆ.

ನೆಹರೂ ದಾರಿಯಿಂದ ಪಲಾಯನವೇತಕೆ?

ಖಾಸಗೀಕರಣ-ಉದಾರೀಕರಣ ಜಾಗತೀಕರಣ ಈಗಿನ ಕಾಂಗ್ರೆಸ್ ಸರಕಾರದ ಮಂತ್ರ. ಇದು ನೆಹರೂ ಕಾಲದ ಕಾಂಗ್ರೆಸ್ ನೀತಿಗೆ ವಿರುದ್ಧವಾದದ್ದು. ಕಾಂಗ್ರೆಸ್‌ನ ಈ ತಿಪ್ಪರಲಾಗಕ್ಕೆ ಏನು ಕಾರಣ? ನೆಹರೂ ಕಾಲದ 'ಯೋಜಿತ ಬೆಳವಣಿಗೆ'ಗೆ ದೇಶದಲ್ಲಿ ಒಂದು ರೀತಿಯ ಒಮ್ಮತವಿತ್ತು. ಈಗಿನ ಸರಕಾರದ ನೀತಿಗೆ ಒಮ್ಮತ ರೂಪಿಸಲು ಸರ್ಕಾರದ ಬೂರ್ಜ್ವಾ ವರ್ಗಗಳ ತುತ್ತೂರಿ ಹಗಲಿರುಳು ದುಡಿಯುತ್ತಿದೆ. ಆದರೆ ಯಾಕೆ ತಿಪ್ಪರಲಾಗ? ಇದು ಈ ತುತ್ತೂರಿಗಳು ಹೇಳುವಂತೆ ಜಗತ್ತಿನ ಎಲ್ಲೆಡೆ ಕಂಡುಬರುತ್ತಿರುವ ಧೋರಣೆಯೆ? ಇದರ ಹಿಂದಿನ ಹೂರಣವೇನು? ಈ ನೀತಿ ನಮ್ಮ ಆಳುವ ವರ್ಗದ ಸ್ವಭಾವದಲ್ಲಿ ಬದಲಾವಣೆಯ ಸಂಕೇತವೇ? ಈ ನೀತಿ ಎಷ್ಟರಮಟ್ಟಿಗೆ ಫಂಡ್-ಬ್ಯಾಂಕ್ ಕೊಟ್ಟ ಕೈ ತಿರುಚುವಿಕೆಯಿಂದ ಅಂಗೀಕರಿಸಿದ್ದು? ಈ ನೀತಿ ಮಧ್ಯಮವರ್ಗ, ಸಣ್ಣ ಬಂಡವಾಳಶಾಹಿಗೆ ಅನನುಕೂಲವಾಗಿದ್ದರೂ ಅವರ ಬೆಂಬಲ ಯಾಕೆ ಸಿಗುತ್ತಿದೆ? ಈ ಪ್ರಶ್ನೆಗಳಿಗೆ ಉತ್ತರಿಸಿರುವ ಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್‌ರ ಲೇಖನದ ಸಾರಾಂಶ.

ಸಾರ್ವಜನಿಕ ಕ್ಷೇತ್ರದ ಕಾರ್ಖಾನೆಗಳ ಖಾಸಗೀಕರಣ, ಬೇರೆ ಬೇರೆ ರೀತಿಯ ಸಬ್ಸಿಡಿಗಳಲ್ಲಿ ಕಡಿತ, ಹಲವಾರು ಕ್ಷೇತ್ರಗಳಲ್ಲಿ ಸರ್ಕಾರಿ ನಿಯಂತ್ರಣದ ಸಡಿಲಿಸುವಿಕೆ- ಇವೆಲ್ಲಾ ನೀತಿಗಳು ಯಾವುದೇ ದೇಶದ ಜೀವನದಲ್ಲಿ (ಮುಖ್ಯವಾಗಿ ಆರ್ಥಿಕ) ಸರ್ಕಾರದ ಪಾತ್ರ ಕಡಿಮೆ ಮಾಡುವತ್ತ ಆರಂಭವಾಗಿರುವ ಹೊಸ ಧೋರಣೆ ಎಂದು ಈ ನೀತಿಗಳ ಬೆಂಬಲಿಗರೂ, ವಿರೋಧಿಗಳು, ಇಬ್ಬರೂ ಹೇಳುತ್ತಿದ್ದಾರೆ. ಆದರೆ ಇದು ನಿಜವಲ್ಲ. ಅಮೇರಿಕ, ಬ್ರಿಟನ್‌ಗಳ ಮಾಜಿ ನಾಯಕರುಗಳಾದ ರೇಗನ್-ಥ್ಯಾಚರ್ ಆರಂಭಿಸಿದ ನೀತಿಗಳು ಬೂರ್ಜ್ವಾವರ್ಗದ ಸರ್ಕಾರ ಮಧ್ಯ ಪ್ರವೇಶದಿಂದ ಹಿಂತೆಗೆಯುತ್ತಿರುವ ಉದ್ದೇಶ ಹೊಂದಿಲ್ಲ. ಬೂರ್ಜ್ವಾವರ್ಗದ ಮಧ್ಯಪ್ರವೇಶದ ಸ್ವರೂಪ ಬದಲಾಗಿದೆ ಅಷ್ಟೇ. ಇದು ಬಂಡವಾಳಶಾಹಿಗೆ ನೇರವಾಗಿ ಪರವಾದ ನೀತಿಗಳನ್ನು ಅನುಸರಿಸುವತ್ತ ಬದಲಾವಣೆ.

ಈ ನೀತಿಗಳ ಪರಿಣಾಮ ಮೂರು ರೀತಿ ಇದ್ದು- ಬಂಡವಾಳಶಾಹಿಯ ವಿರುದ್ಧ ಕಾರ್ಮಿಕ ವರ್ಗದ ಪರಿಸ್ಥಿತಿಯನ್ನು ದುರ್ಬಲಗೊಳಿಸುವಂತಹದು, ಸಣ್ಣ ಬಂಡವಾಳಶಾಹಿ ದಿವಾಳಿಯಾಗುವ ಮೂಲಕ ದೊಡ್ಡ ಬಂಡವಾಳಿಗರಲ್ಲಿ ಬಂಡವಾಳ ಹೆಚ್ಚೆಚ್ಚು ಕೇಂದ್ರೀಕರಣ ಹಾಗೂ ಕೈಗಾರಿಕಾ ಬಂಡವಾಳಶಾಹಿಗಳಿಗಿಂತ ಹಣಕಾಸು ಬಂಡವಾಳಶಾಹಿಯನ್ನು ಬಲಪಡಿಸುವುದು. ಬಡವರಿಗೆ ಅನುಕೂಲಕರವಾದ ಸಾಮಾಜಿಕ ಕಲ್ಯಾಣ ಯೋಜನೆಗಳಲ್ಲಿ ಕಡಿತ, ಶ್ರೀಮಂತರಿಗೆ ಅನುಕೂಲವಾಗುವ ನೇರ ತೆರಿಗೆಗಳಲ್ಲಿ ಕಡಿತ ನೇರವಾಗಿ ಪರೋಕ್ಷ ಆರ್ಥಿಕ ಚಟುವಟಿಕೆಗಳಲ್ಲಿ ಕಡಿತಕ್ಕೆ ಕಾರಣವಾಗುತ್ತದೆ. ಇದರಿಂದ ನಿರುದ್ಯೋಗ ಇನ್ನಷ್ಟು ಉಲ್ಬಣಗೊಳ್ಳುತ್ತದೆ. ಆದರೆ ಆರ್ಥಿಕ ಚಟುವಟಿಕೆಗಳಲ್ಲಿ ಕಡಿತ ಹಣಕಾಸು ಬಂಡವಾಳ(ಬ್ಯಾಂಕಿಂಗ್ ಉದ್ಯಮ ಇತ್ಯಾದಿ) ಕ್ಕೆ ಲಾಭಕರವಲ್ಲ. ಸರ್ಕಾರಿ ಕ್ಷೇತ್ರದ ಕೈಗಾರಿಕೆಗಳ ಖಾಸಗೀಕರಣಕ್ಕೆ, ಸರ್ಕಾರಿ ಶೇರುಗಳ ಕೊಳ್ಳುವಿಕೆಗೆ ಸಾಲ ಕೊಡುವ ಮೂಲಕ ಹಣಕಾಸು ಒದಗಿಸುವುದು ಬ್ಯಾಂಕುಗಳು. ಸರ್ಕಾರಿ ಶೇರುಗಳ ರೂಪದಲ್ಲಿರುವ ಹಣಕ್ಕಿಂತ, ಈ ಸಾಲದ ಮೇಲೆ ಬರುವ ಬಡ್ಡಿ ಬ್ಯಾಂಕ್‌ಗಳಿಗೆ ಲಾಭದಾಯಕ. ಹೀಗೆ ಖಾಸಗೀಕರಣ ಹಣಕಾಸು ಬಂಡವಾಳವನ್ನು ಬಲಪಡಿಸುತ್ತದೆ. ಆದರೆ ಆರ್ಥಿಕ ಚಟುವಟಿಕೆ ಕುಂಠಿತವಾಗುವುದರಿಂದ ಸಣ್ಣ ಬಂಡವಾಳಶಾಹಿಗಳ ಲಾಭಕ್ಕೆ ಏಟು ಬೀಳುತ್ತದೆ. ಗುತ್ತೇದಾರಿ ಬಂಡವಾಳಶಾಹಿ ಅದನ್ನು ನುಂಗಿ ಹಾಕುತ್ತದೆ ಹೀಗೆ ಬಂಡವಾಳದ ಕೇಂದ್ರೀಕರಣವಾಗುತ್ತದೆ.

ಈ ಎಲ್ಲಾ ಪರಿಣಾಮಗಳು ಆಕಸ್ಮಿಕವಲ್ಲ. ಖಾಸಗೀಕರಣ, ಉದಾರೀಕರಣದ ಉದ್ದೇಶವೇ ಅದು. ಆ ಮೂಲಕ ಗುತ್ತೇದಾರಿ ಬಂಡವಾಳಶಾಹಿಯ ಕೈ ಬಲಪಡಿಸುವುದು.

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬಂಡವಾಳಶಾಹಿಗಳು ಮುಕ್ತ ಪೈಪೋಟಿಯಲ್ಲಿ ತೊಡಗಿರುತ್ತಾರೆ, ಇದರಿಂದಾಗಿ ಉತ್ಪಾದನೆಯ ದಕ್ಷತೆ ಹೆಚ್ಚು ಎಂದು ಬಂಡವಾಳಶಾಹಿ ಬೆಂಬಲಿಗರ ಅಂಬೋಣ. ಆದರೆ ಮುಕ್ತ ಪೈಪೋಟಿ ಎಂಬುದು ಬಂಡವಾಳಶಾಹಿಯ ಆರಂಭದ ದಿನಗಳಲ್ಲಿ ಮಾತ್ರ ಇತ್ತು. ಮುಕ್ತ ಪೈಪೋಟಿಯಿಂದ ಗುತ್ತೇದಾರಿ ಬಂಡವಾಳಶಾಹಿ ವ್ಯವಸ್ಥೆಯಾಗಿ ಬದಲಾಗುತ್ತಿದ್ದಂತೆ, ಈ ವರ್ಗದ ಸರ್ಕಾರದ ಮಧ್ಯಪ್ರವೇಶವೂ ಆರಂಭವಾಯಿತು. ಈ ವರ್ಗದ ಹಿತಾಸಕ್ತಿಗಳನ್ನು ಕಾಪಾಡುವ ನೀತಿಗಳನ್ನು ಜಾರಿಗೆ ತರುವಲ್ಲಿ ಸರ್ಕಾರ ಸಕ್ರಿಯ ಪಾತ್ರವಹಿಸುತ್ತಿತ್ತು. ಆದ್ದರಿಂದ 20 ನೇ ಶತಮಾನದ ಬಂಡವಾಳಶಾಹಿಯಲ್ಲಿ ಸರ್ಕಾರಿ ಮಧ್ಯಪ್ರವೇಶ ಹೊಸದಲ್ಲ. ಇದನ್ನು ಲೆನಿನರೇ 20 ನೇ ಶತಮಾನದ ಆದಿಯಲ್ಲಿ ತೋರಿಸಿಕೊಟ್ಟಿದ್ದರು.

ಆದರೆ ಎರಡನೇ ಮಹಾಯುದ್ಧದ ನಂತರದ ಅವಧಿಯಲ್ಲಿ ಗುತ್ತೇದಾರಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಮಹತ್ತರ ಬದಲಾವಣೆಗಳಾದವು. 1930ರ ಮಹಾ ಕುಸಿತ, ಮಹಾಯುದ್ಧದ ನಂತರ ನಡೆದ ವಸಾಹತುಗಳ ಸ್ವಾತಂತ್ರ್ಯ ಹೋರಾಟಗಳ ಫಲವಾಗಿ ಕೈನ್ಸ್ ಎಂಬ ಅರ್ಥಶಾಸ್ತ್ರಜ್ಞನ ಸಲಹೆಯಂತೆ ಸರ್ಕಾರ ದೊಡ್ಡ ರೀತಿಯಲ್ಲಿ ಆರ್ಥಿಕ ವಿಷಯಗಳಲ್ಲಿ ಮಧ್ಯಪ್ರವೇಶಿಸುವುದರಿಂದ ಮಾತ್ರವೇ ಆಗಾಗ ಬಿಕ್ಕಟ್ಟು ಬರುವುದನ್ನು ತಡೆಯಲು ಸಾಧ್ಯ ಎಂಬ ಧೋರಣೆ ಬಲಗೊಂಡಿತು. ಆದರೆ ಈ ರೀತಿಯ ಸರ್ಕಾರದ ಮಧ್ಯಪ್ರವೇಶ ಗುತ್ತೇದಾರಿ ಬಂಡವಾಳಶಾಹಿ ತನ್ನ ಹಿತಾಸಕ್ತಿಗಳಿಗೆ ಮಾತ್ರವೇ ರೂಪಿಸಿದ್ದಲ್ಲ. ಕಳೆದ ಸುಮಾರು 40 ವರ್ಷಗಳಲ್ಲಿ ಅದು ತನ್ನ ಅಧಿಪತ್ಯ ಉಳಿಸಿಕೊಳ್ಳಲು 'ಕಲ್ಯಾಣ ರಾಜ್ಯ' ದ ಪರಿಕಲ್ಪನೆಯನ್ನು ರೂಪಿಸಿತು. ಸಾಮಾಜಿಕ ಭದ್ರತಾ ವೆಚ್ಚಗಳು, ಸರ್ಕಾರಿ ಕ್ಷೇತ್ರದ ವಿಸ್ತಾರ ಕಡಿಮೆ ಮಟ್ಟದ ನಿರುದ್ಯೋಗ ಇವೆಲ್ಲಾ 'ಕಲ್ಯಾಣ ರಾಜ್ಯ'ದ ಭಾಗ. ಇದನ್ನು ಗುತ್ತೇದಾರಿ ಬಂಡವಾಳಶಾಹಿ ಕೊಡಬೇಕಾಗಿ ಬಂದದ್ದು , ಆಗಿನ ಪ್ರಬಲ ಸಮಾಜವಾದಿ ವ್ಯವಸ್ಥೆಯ ಹಾಗೂ ಆಂತರಿಕವಾಗಿ ಬೆಳೆಯುತ್ತಿದ್ದ ಕಾರ್ಮಿಕ ಹೋರಾಟಗಳ ಸವಾಲು ಎದುರಿಸಲು. ಇದು ಗುತ್ತೇದಾರಿ ಹಣಕಾಸು ಬಂಡವಾಳ ತನ್ನ ಅಧಿಪತ್ಯ ಉಳಿಸಿಕೊಳ್ಳಲು ಬೇರೆ ವರ್ಗಗಳಿಗೆ ಕೊಟ್ಟ ರಿಯಾಯಿತಿ. ಆದರೆ ಈ ರಿಯಾಯಿತಿಗಳು ಹಣಕಾಸು ಬಂಡವಾಳಕ್ಕೆ ಅನಗತ್ಯ ಎನಿಸಲು ಆರಂಭವಾಗಿತ್ತು. ರೇಗನ್-ಥ್ಯಾಚರ್‌ವಾದದ ತಿರುಳು 'ಕಲ್ಯಾಣ ರಾಜ್ಯ'ದ ನಾಟಕವನ್ನು ಬಿಟ್ಟುಕೊಡುವುದು, ಹಾಗೂ ಗುತ್ತೇದಾರಿ ಬಂಡವಾಳಶಾಹಿಯ ಹಿತಾಸಕ್ತಿಗಳನ್ನು ನೇರವಾಗಿ ಎತ್ತಿಹಿಡಿಯುವುದು.

ಕಲ್ಯಾಣ ರಾಜ್ಯವನ್ನು ಮುಂದುವರೆಸಿಕೊಂಡು ಹೋಗುವುದು ಅದು ಸೃಷ್ಟಿಸಿದ ಬಿಕ್ಕಟ್ಟುಗಳಿಂದಲೂ ದುಸ್ಸಾಧ್ಯವಾಗಲಾರಂಭಿಸಿತು. ಬಂಡವಾಳಶಾಹಿ ಚೌಕಟ್ಟಿನೊಳಗೆ 'ಕಲ್ಯಾಣ ರಾಜ್ಯ' ದಲ್ಲಿ ಹಲವಾರು ವೈರುಧ್ಯಗಳಿದ್ದವು. ಇದಕ್ಕೆ ಪುಟ್ಟ ಬೂರ್ಜ್ವಾವರ್ಗ ಯಾವಾಗಲೂ ವಿರೋಧವಾಗಿತ್ತು. ಕಲ್ಯಾಣ ರಾಜ್ಯಕ್ಕೆ ವಿಪರೀತ ಹೆಚ್ಚಿನ ತೆರಿಗೆ ಕೊಡಬೇಕಾಗಿದೆ ಎಂಬುದು ಅದರ ದೂರು. ಸಾಮಾಜಿಕ ಭದ್ರತೆ, ಅತಿ ಕಡಿಮೆ ನಿರುದ್ಯೋಗ ಕಾರ್ಮಿಕ ವರ್ಗದ ಮೇಲೆ ಬಂಡವಾಳಶಾಹಿಯ ಬೆದರಿಕೆ ಕಡಿಮೆ ಮಾಡಿದ್ದವು. ಇದು ಬಂಡವಾಳಶಾಹಿಗೆ ಅಪಾಯಕಾರಿಯಾಗಿತ್ತು. ಇದಲ್ಲದೆ 60 ರ ದಶಕದಿಂದ ಆರಂಭವಾಗಿರುವ ಹಣದುಬ್ಬರ 'ಕಲ್ಯಾಣ ರಾಜ್ಯ' ದ ಅತ್ಯಂತ ತೀವ್ರ ಬಿಕ್ಕಟ್ಟಾಗಿತ್ತು.

ಆದರೆ ಅಭಿವೃದ್ಧ ಬಂಡವಾಳಶಾಹಿ ದೇಶಗಳಲ್ಲಿ (ಅಮೇರಿಕಾ, ಜಪಾನು, ಜರ್ಮನಿ ಇತ್ಯಾದಿ) ದುಷ್ಪರಿಣಾಮಗಳನ್ನು ಮೂರನೇ ಜಗತ್ತಿನ ದೇಶಗಳಿಗೆ ದಾಟಿಸುವ ಮೂಲಕ, ಈ ಬದಲಾವಣೆಗಳಿಗೆ ಭಾರಿ ವಿರೋಧ ಬಾರದಂತೆ ನೋಡಿಕೊಂಡಿದೆ. ಅಲ್ಲದೆ ಇದೇ ರೀತಿಯ ಬದಲಾವಣೆಗಳನ್ನು ಮೂರನೇ ಜಗತ್ತಿನ ಬಂಡವಾಳಶಾಹಿ ವರ್ಗದ ಮೇಲೆ ಹೊರಿಸಲು ಸಫಲವಾಗಿದೆ. ಐ.ಎಂ.ಎಫ್. -ವಿಶ್ವಬ್ಯಾಂಕ್ ನಿರ್ದೇಶಿತ ನೀತಿಗಳ ಮೂಲಕ ಮೂರನೇ ಜಗತ್ತಿನ ದೇಶಗಳ ಸಾರ್ವಭೌಮತೆ ಹರಣ ಈ ನಿಟ್ಟಿನಲ್ಲಿ ಸಾಮ್ರಾಜ್ಯಶಾಹಿ ದೇಶಗಳ ಅಸ್ತ್ರವಾಗಿದೆ.

ಸರ್ಕಾರಿ ಮಧ್ಯಪ್ರವೇಶ ಇರುವ ಬಂಡವಾಳಶಾಹಿಯಿಂದ ಖಾಸಗೀಕರಣ- ಉದಾರೀಕ

ಪುಟ 7 ಕ

ಜನಶಕ್ತಿ ಹೆಚ್ಚಿಸುವತ್ತ 'ನಮ್ಮ ನಾಡು'

ಧಾರವಾಡ : "ನಮ್ಮ ನಾಡಿನ ಜನರ ಸರ್ವತೋಮುಖವಾದ ಅಭಿವೃದ್ಧಿಯು ಜನರಿಂದಲೇ ಆಗಬೇಕಾಗಿದೆ. ಯಾವುದೇ ದೇವರು ರಾಜಮಂತ್ರಿ, ಪೂಜಾರಿ ಮೇಲಿನಿಂದ ಬಂದು ಉದ್ಧಾರ ಮಾಡುತ್ತಾನೆ ಎಂದು ಕಾದು ಕುಳಿತಿರುವುದು ಮೂಢತನವಾದೀತು. ಮಹಾತ್ಮಾ ಗಾಂಧಿ, ಜಯಪ್ರಕಾಶ್ ನಾರಾಯಣ್ ಮುಂತಾದ ರಾಷ್ಟ್ರನಾಯಕರ ಮಾರ್ಗದರ್ಶನದಂತೆ, ನಮ್ಮ ನಾಡಿನ ಆಡಳಿತ ಮತ್ತು ಅಭಿವೃದ್ಧಿ ಕಾರ್ಯಗಳು ವಿಕೇಂದ್ರೀಕರಣ ಗೊಂಡು ಜನರ ಪಾಲುಗೊಳ್ಳುವಿಕೆ ಹೆಚ್ಚಾಗಬೇಕು ಮತ್ತು ಸ್ಥಳೀಯ ಸಂಪನ್ಮೂಲಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ಸ್ವಾವಲಂಬಿಗಳಾಗಬೇಕು. ಈ ದಿಸೆಯಲ್ಲಿ ಜನರಿಗೆ ತಮ್ಮ ಕ್ರಿಯಾಶಕ್ತಿಯಲ್ಲಿ ಆತ್ಮ ವಿಶ್ವಾಸ ಹುಟ್ಟಿಸಿ, ವೈಜ್ಞಾನಿಕ ಅರಿವು ಮೂಡಿಸಿ, ಅವರು ಪರಸ್ಪರ ಸ್ನೇಹ ಸೌಹಾರ್ದತೆ, ಒಗ್ಗಟ್ಟಿನಿಂದ ತಮ್ಮ ಜೀವನದ ದುಸ್ಥಿತಿಗಳನ್ನು ಬದಲಾಯಿಸಿ ಶಾಂತಿ, ಸಮೃದ್ಧಿ ಪಡೆಯಲು ಸಮರ್ಥರು ಎಂದು ತಿಳಿಸುವತ್ತ, ಜನಶಕ್ತಿಯನ್ನು ಹೆಚ್ಚಿಸುವತ್ತ "ನಮ್ಮ ನಾಡು" ಆಂದೋಳನ ಹಮ್ಮಿಕೊಂಡ ಬಹುಮುಖ ಕಾರ್ಯಕ್ರಮಗಳು ಯಶಸ್ವಿಯಾಗಲಿ" ಎಂದು ಈ ಆಂದೋಳನವನ್ನು ಆಗಸ್ಟ್ 15 ರಂದು ಧಾರವಾಡದ ಬಯಲು ರಂಗಭೂಮಿಯಲ್ಲಿ ಉದ್ಘಾಟಿಸುತ್ತಾ, ನಾಡಿನ ಪ್ರಸಿದ್ಧ ಬಂಡಾಯ ಸಾಹಿತಿ ಪ್ರೊ. ಚಂದ್ರಶೇಖರ ಪಾಟೀಲರವರು ಹಾರೈಸಿದರು.

ಪ್ರಾರಂಭದಲ್ಲಿ "ನಮ್ಮ ನಾಡು" ಜನಾಂದೋಳನದ ಧ್ಯೇಯೋದ್ದೇಶಗಳ ಹಾಗೂ ಆಗಸ್ಟ್ 93 ರಿಂದ ಫೆಬ್ರವರಿ 94 ರವರೆಗೆ ರಾಷ್ಟ್ರೀಯ ಕಾರ್ಯಕ್ರಮದ ಅಂಗವಾಗಿ ನಡೆಯಲಿರುವ ಲೋಕ ಸಂಪರ್ಕ ಸಭೆಗಳ, ಬಾಲಮೇಳಗಳ, ಶಾಂತಿ ಸೌಹಾರ್ದತೆಗಾಗಿ ಸಾಮೂಹಿಕ ಹಾಡುಗಳ, ಜ್ಞಾನ ವಿಜ್ಞಾನ ಸಮಿತಿಯ ಪದಾಧಿಕಾರಿಗಳಾದ ಬಿ.ಎಸ್. ಸೊಪ್ಪಿನ, ಸಿ.ಆರ್.ಭಟ್, ಪ್ರೊ. ಎಸ್.ಆರ್. ತೋಂಟದಾರ್ಯ ಸಭೆಗೆ ವಿವರಿಸಿದರು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಧಾರಾವಾಡ ಜಿಲ್ಲೆಯ ಎಲ್ಲಾ ಘಟಕಗಳು ಈ ಆಂದೋಳನದಲ್ಲಿ ಪಾಲುಗೊಳ್ಳುವಂತೆ ಮಾಡುವುದಾಗಿ ಪ್ರೊ. ಶಿವಶಂಕರ ಹಿರೇಮಠ ಆಶ್ವಾಸನೆ ನೀಡಿದರು. ಪ್ರೊ. ಶ್ರೀ ಶೈಲ್ ಹುದ್ದಾರ, ಡಾ. ಸಂಜೀವ ಕುಲಕರ್ಣಿ, ಶಂಕರ ಕುಬಿ, ದಿನೇಶ್ ಆಮಿನ್ ಕೃಷ್ಣ ಕುಟ್ಟಿ, ಹೇಮಾ ಪಟ್ಟಣಶೆಟ್ಟಿ ಮುಂತಾದವರು ಆಂದೋಳನ ಯಶಸ್ವಿಗಾಗಿ ಅನೇಕ ಸಲಹೆ ನೀಡಿದರು. ವಿದ್ಯಾರ್ಥಿ ಯುವಜನರು ಮತ್ತು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಸಲಹೆ ಮಾಡಿದರು.

ಡಾ. ಸಿದ್ದನಗೌಡ ಪಾಟೀಲ ಸ್ವಾಗತಿಸಿದರು. ಈ ಆಂದೋಳನವು ಜಿಲ್ಲೆಯಲ್ಲಿ ನಡೆಯುತ್ತಿರುವ ಸಂಪೂರ್ಣ ಸಾಕ್ಷರತಾ ಆಂದೋಳನಕ್ಕೆ ಪೂರಕವಾಗಿ ಇದೆಯೆಂದು ಸಿ.ಆರ್. ಭಟ್ ತಿಳಿಸಿದರು. ಇದರ ಯಶಸ್ಸಿಗೆ ಪ್ರಜ್ಞಾಪೂರ್ವಕವಾಗಿ ಜಿಲ್ಲೆಯ ಎಲ್ಲಾ ಪ್ರಗತಿಪರ ಜಾತ್ಯಾತೀತ ಪ್ರಜಾಸತ್ತಾತ್ಮಕ ಜನರು ಹಾಗೂ ಸಂಘ ಸಂಸ್ಥೆಗಳು ಶ್ರಮಿಸುವುದಾಗಿ ಪ್ರತಿಜ್ಞೆಗೈಯುವ ಪ್ರಮಾಣವಚನವನ್ನು ಬಿ. ಎಸ್.ಸೊಪ್ಪಿನ ಬೋಧಿಸಿದರು. ಬಿ.ಐ. ಈಳಿಗೇರ ಧನ್ಯವಾದ ಇತ್ತರು.

ಅಹಾಹಾಹ ರೈತ

- ಯು. ಬಸವರಾಜ

-1-

ಅಹಾಹಾಹ ರೈತ
ಅಹಾಹಾಹ ಕೂಲಿಕಾರ ||ಕಡ||
ಸಾಗರ ಸಮುದ್ರಗಳ ದಾಟಿ ||ಕಡ||
ಬಿಸಿಲ್ಗುದುರೆ ಏರಿ ||ಕಡ||
ಸುಡು ಸುಡು ಮುಖ ಹೊತ್ತು ||ಕಡ||
ಕೆನ್ನಾಲಿಗೆಯ ಚಾಚಿ ||ಕಡ||
ಬೆಳ್ಳ ಬೆಳ್ಳಗೆ ಮಾತನಾಡಿ ||ಕಡ||
ಕೊಳ್ಳೆ ಹೊಡೆಯುವ ನೀತಿಗಳನ್ನಿಡಿದು ||ಕಡ||
ಡಂಕೆಲ್ ನೆಂಬ ಪಿಳ್ಳೆ ||ಕಡ||
ಭವ್ಯ ಭಾರತದೊಳಗೆ ಬಂದಿಹನಯ್ಯಾ..... ||ಕಡ|ಕಡ||

100 ದಿನದೊಳಗೆ ಬದುಕ ಬಂಗಾರವ ಮಾಡಲು
ಬಲೆ ಇಳಿಸುವೆನೆಂದ ಭಂಡರು, ||ಕಡ||
ಹಸಿವು, ಆಕ್ರಂದನಗಳಿಲ್ಲದ ನಾಡ ಕಟ್ಟುವ
-ದಾಗಿ ಬೊಗಳೆ ಹೊಡೆದ ಪುಂಡರು ||ಕಡ||
ರಕ್ತ ಗಂಬಳಿ ಹಾಸಿ......... ||ಕಡ||
ರೈತ ಕಾರ್ಮಿಕರಿಗೆ ಗಾಳ ಬೀಸಿ ||ಕಡ||
ಬರಮಾಡಿಕೊಂಡರಯ್ಯಾ...... ||ಕಡ ಕಡ||

ದೇಸಾಯವ ಕೊಚ್ಚಿಸಿ ||ಕಡ||
ಕೈಗಾರಿಕೆಗಳ ಮುಚ್ಚಿಸಿ.... ||ಕಡ||
ಸಿರಿವಂತರ ಬೊಜ್ಜು ಬೆಳೆಸಿ ||ಕಡ||
ಬಡವರ ಬೆನ್ನಿಗೆ ಹೊಟ್ಟೆಯನ್ನು ಕಟಿಸಿ ||ಕಡ||
ಭವಿಷ್ಯದ ಕಾರ್ಮೋಡವ ಸೃಷ್ಟಿಸಿ ||ಕಡ||
ಎಲೆ ರೈತ............ಎಲೆ ಕೂಲಿ
ಎಲೆ ಶ್ರಮಿಕ ....ತ್ಯಾಗಿ, ತ್ಯಾಗಿಯಾಗು
ನೀನು ಎನ್ನುವರಯ್ಯ....... ||ಕಡ ಕಡ||

-2-

ನದಿಯು ಮೂಲಕ್ಕರಿಯ ಬಲ್ಲುದೇ.... ||ಕಡ||
ತೋಳ ಕುರಿ ಕಾಯ್ದು ಕಥೆಯ ಒಪ್ಪಬಹುದೇ..... ||ಕಡ||
ಬೇವಿನ ಗಿಡ ಮಾವಿನ ಹಣ್ಣು ಬಿಡಬಲ್ಲುದೆ......... ||ಕಡ||
ಜಾತಿ ವ್ಯವಸ್ಥೆ ಇರಲಿ ಎನ್ನುವವ ||ಕಡ||
ಬದುಕು ಬಂಗಾರ ಮಾಡುವನೆಂದರೆ ||ಕಡ||
ನಂಬಬಹುದೇನಯ್ಯಾ........... ||ಕಡ ಕಡ||

ದೇವನೊಬ್ಬ ನಾಮ ಹಲವು ಎಂದರು ||ಕಡ||
ಕಣ ಕಣದಲ್ಲಿ ದೇವನೆಂದರು......... ||ಕಡ||
ಸರ್ವಂತರ್ಯಾಮಿ ಎಂದರು...... ||ಕಡ||
ಇಂತಪ್ಪ ಶ್ರೀ ರಾಮ ದೇವರಿಗೆ...... ||ಕಡ||
ಗುಡಿಯು ಬೇಕೆಂದು ಮಸೀದಿಯ ಕೆಡಹಿ......... ||ಕಡ||
ಸಾವಿರ, ಸಾವಿರ ಜನರ ಕೊಂದರು....... ||ಕಡ||
ಐಕ್ಯತೆ ಒಡೆದರು....... ||ಕಡ||
ಹಸುಳೆಗಳ ಕೊಂದರು....... ||ಕಡ||
ಕೋಮು ದಾವಾಗ್ನಿ ಎಬ್ಬಿಸಿದರು...... ||ಕಡ||
ಇಂತಪ್ಪಾ ಕೋಮು ವಿಷ ಜಂತುಗಳು........ ||ಕಡ||
ಜನರ ಸಂಕಟಕ್ಕೆ ಎತ್ತರವಾಗಬಲ್ಲರೇನಯ್ಯಾ ||ಕಡ ಕಡ||

-3-

ನಾನು ಹಸುವೆಂದ ಹುಲಿಯ ನಂಬಬಹುದೇ........ ||ಕಡ||
ನರಭಕ್ಷಕನೇ ಕಾವಲಾದರೆ ಊರು ಉಳಿಯಬಲ್ಲದೆ.. ||ಕಡ||
ಭೂಮಿ ಒಡೆಯನೊಬ್ಬ ಸಾಗುವಳಿದಾರನೆಂದರೆ
ಕೇಳಬಹುದೇ... ||ಕಡ||
ಬಂಡವಾಳಿಗನೊಬ್ಬ ಕಾರ್ಮಿಕನೆಂದರೆ
ಒಪ್ಪಬಹುದೇ....... ||ಕಡ||
ಇಂತಪ್ಪಾ ನಯವಂಚಕರು ಸೇರಿ...... ||ಕಡ||
ಬಣ್ಣ ಬಣ್ಣದ ಕನಸುಗಳನ್ನೂಸಿದ.... ||ಕಡ||
ಭರವಸೆಯ ಬದುಕಿಗೆ ಮೊಳೆಗಳ ಜಡಿದು...... ||ಕಡ||
ಅಧಿಕಾರದ ಗದ್ದುಗೆಯನ್ನಿಡಿದು....... ||ಕಡ||
ಎಲೆ ರೈತನೇ....... ||ಕಡ||
ಬಡವನಾಗಿರುವೆಯಾ, ಪಾಪಿ ನೀನು ಎಂದರಯ್ಯ ||ಕಡ||
ಬಡತನದೊಳಿರುವೆಯಾ ಪಾಪಿ ನೀನೂ
ಎಂದರಯ್ಯಾ....... ||ಕಡ||
ಎಲೆ ಭೂಮಾಲಕನೇ.... ||ಕಡ||
ಸುಖ ತುಂಬಿದೆಯ್ಯಾ,ಪುಣ್ಯಾತ್ಮ ನೀನು
ಎಂದರಯ್ಯಾ
ಎಲೆ ಬಂಡವಾಳಿಗನೇ ... ||ಕಡ||
ಸಿರಿ ತುಂಬಿದೆಯಾ......ಪುಣ್ಯಾತ್ಮ ನೀನು
ಎಂದರಯ್ಯಾ, ||ಕಡ||
ಹೆ.............ಹೇ
ಆಹಾಹಹ ರೈತಾ.........ಆಹಾಹಹ..... ಶ್ರಮಿಕಾ
ಭಂಡ ಮೋಸವ ಮುಚ್ಚಲು
ಪುಂಡ ಶಾಸನಗಳ ಸೃಷ್ಟಿಸಿದರಯ್ಯಾ..... ||ಕಡ||

ಹಿಡಿ ಹಿಡಿ ಕೆಂಬಾವುಟ
ಹಿಡಿ ವಿಚಾರದ ಅಸ್ತ್ರ
ಭಾರಿಸು ನಗಾರಿ....... ||ಕಡ||
ಹೊಡಿ ಜೈಭೇರಿ........ ||ಕಡ||
ಆಕಾಶದಗಲಕ್ಕೆ ಬೆಳೆದು....... ||ಕಡ||
ಸುಳ್ಳಿನ ಗುಳ್ಳೆಗಳನ್ನೊಡೆದು....... ||ಕಡ||
ಭಂಡರ ಗುಂಡಿಗೆಯ ಬಗೆದು...... ||ಕಡ||
ಪುಂಡ....ಪೂಜಾರಿಗಳ ಮಿಂಡರಾಗಿ...... ||ಕಡ||
ಹೋರಾಡಿದ ಬದುಕ ಕಟ್ಟಬೇಕಯ್ಯಾ... ||ಕಡ||

ಕಾಶ್ಮೀರಿ ಭಯೋತ್ಪಾದಕರಿಂದ ನರಮೇಧ

ಅಮಾಯಕ ಜನರನ್ನು ಬಲತೆಗೆದು ಕೊಳ್ಳುವ ಭಯೋತ್ಪಾದಕರ ಆಟಾಟೋಪ ಸುಮಾರು ಸಮಯದಿಂದ ನಿಂತಿತ್ತು. ದೇಶದ ಜನರು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿತ್ತು. ಮುಖ್ಯವಾಗಿ ಪಂಜಾಬ್ ಹಾಗೂ ಜಮ್ಮು-ಕಾಶ್ಮೀರದಲ್ಲಿ ಪರಿಸ್ಥಿತಿ ತಕ್ಕಮಟ್ಟಿಗೆ ಸುಧಾರಣೆಯಾಗಿತ್ತು. ಈ ಖುಷಿಪಡುವ ಅಂಶ ತಾತ್ಕಾಲಿಕವಾದುದು ಎಂಬುದು ಕಾಶ್ಮೀರದಲ್ಲಿನ ಒಂದು ಘಟನೆ ಸಾರಿ ಹೇಳಿದೆ. ಮತ್ತೆ ಆತಂಕ ಛಾಯೆ ಆವರಿಸತೊಡಗಿದೆ.

ಆಗಸ್ಟ್ 14 ರಂದು ಕಾಶ್ಮೀರಿ ಉಗ್ರಗಾಮಿಗಳು ಬಸ್ಸೊಂದನ್ನು ಅಪಹರಿಸಿ 15 ಜನರ ನರಮೇಧ ನಡೆಸಿ ಸ್ವಾತಂತ್ರ್ಯ ದಿನಾಚರಣೆಯ ಉತ್ಸಾಹದ ಮೇಲೆ ಮಂಕು ಕವಿಯುವಂತೆ ಮಾಡಿದ್ದಾರೆ ದೋಡಾ ಜಿಲ್ಲೆಯ ಕಿಶ್ವಾರ್ ಪ್ರದೇಶಗಳಲ್ಲಿ ಈ ಹೇಯ ಪ್ರಕರಣ ನಡೆದಿದೆ.

14 ರಂದು ಬೆಳಿಗ್ಗೆ ಕಿಶ್ವಾರ್‌ದಿಂದ ಜಮ್ಮುವಿಗೆ ತೆರಳುತ್ತಿದ್ದ ಒಂದು ಬಸ್ಸನ್ನು ಅಪಹರಿಸಿದ ಭಯೋತ್ಪಾದಕರು ಅದನ್ನು ನಿರ್ಜನ ಪ್ರದೇಶವೊಂದಕ್ಕೆ ಒಯ್ದರು. ಬಸ್ಸಿನಲ್ಲಿದ್ದ 42 ಮಂದಿ ಪ್ರಯಾಣಿಕರ ಪೈಕಿ ಒಂದು ನಿರ್ದಿಷ್ಟ ಕೋಮಿಗೆ ಸೇರಿದ 16 ಮಂದಿಯನ್ನು ಹೊರಗೆಳೆದು ನಿಲ್ಲಿಸಿ ಗುಂಡು ಹಾರಿಸಿದರು. 14 ಮಂದಿ ಸ್ಥಳದಲ್ಲೇ ಸತ್ತರು. ಒಬ್ಬ ಅನಂತರ ಮೃತಪಟ್ಟ. ಕ್ಷಣಾರ್ಧದಲ್ಲಿ ಆ ಪ್ರದೇಶ ಮಸಣವಾಯಿತು.

ಜಮ್ಮು ಮತ್ತು ಕಾಶ್ಮೀರದಲ್ಲಿ ಇತ್ತೀಚಿನ ದಿನಗಳಲ್ಲಿ ಭದ್ರತಾ ಪಡೆಗಳು ಅನೇಕ ಉಗ್ರಗಾಮಿಗಳನ್ನು ಬಂಧಿಸಿದ್ದವು. ಪಾಕಿಸ್ತಾನದಲ್ಲಿ ತರಬೇತಿ ಪಡೆದು ಗಡಿಯೊಳಗೆ ನುಸುಳಿ ಬರುತ್ತಿದ್ದವರ ಯತ್ನಗಳನ್ನು ವಿಫಲಗೊಳಿಸಿದ್ದವು. ಭಾರತ ವಿರೋಧಿ ಚಟುವಟಿಕೆಗಳಿಗಾಗಿ ತರಬೇತಿ ನೀಡಲೆಂದು ಪಾಕ್ ಆಕ್ರಮಿತ ಕಾಶ್ಮೀರಕ್ಕೆ ಒಯ್ಯಲಾಗುತ್ತಿದ್ದ ಹಲವು ತರುಣರನ್ನು ಪಾರು ಮಾಡುವಲ್ಲಿಯೂ ಭದ್ರತಾ ಪಡೆ ಸಿಬ್ಬಂದಿಗಳು ಯಶಸ್ವಿಯಾಗಿದ್ದರು.

ಇಷ್ಟೆಲ್ಲಾ ಆದಾಗ್ಯೂ ರಾಷ್ಟ್ರವಿರೋಧಿ ಶಕ್ತಿಗಳು ಮತ್ತೆ ತಮ್ಮ ತಲೆಯೆತ್ತಿವೆ. ಇದು ಆತಂಕಕಾರಿ ವಿಷಯ. ಭಯೋತ್ಪಾದನೆಯನ್ನು ಮಟ್ಟಹಾಕುವಲ್ಲಿ ಸಾಧಿಸಬೇಕಾದ್ದು ಇನ್ನೂ ಬೇಕಾದಷ್ಟಿದೆ.

ಬಿಹಾರ: ಗೋಲಿಬಾರಿಗೆ ನಾಲ್ವರು ಸಿಪಿಐ(ಎಂ) ಕಾರ್ಯಕರ್ತರ ಬಲಿ

ಬಿಹಾರದ ನಳಂದಾ ಜಿಲ್ಲೆಯ ಹಿಲ್ಸಾದಲ್ಲಿ ಆಗಸ್ಟ್ 13 ರಂದು ಸಿಪಿಐ(ಎಂ) ಕಾರ್ಯಕರ್ತರು ಮೆರವಣಿಗೆ ನಡೆಸುತ್ತಿದ್ದಾಗ ಪೋಲೀಸರು ಅಪ್ರಚೋದಿತವಾಗಿ ಗೋಳೀಬಾರು ನಡೆಸಿದಾಗ ಪಕ್ಷದ ನಾಲ್ವರು ಕಾರ್ಯಕರ್ತರು ಮೃತಪಟ್ಟರು. ಸತ್ತವರಲ್ಲಿ ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಗೋವಿಂದ ಪ್ರಸಾದ್ ಕೂಡಾ ಸೇರಿದ್ದಾರೆ.

ಸ್ಥಳೀಯ ಜಮೀನು ವಿವಾದವೊಂದನ್ನು ಇತ್ಯರ್ಥಪಡಿಸಲು ಸ್ಥಳೀಯ ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತಿರುವುದನ್ನು ಪ್ರತಿಭಟಿಸಲು ಪಕ್ಷ ಮೆರವಣಿಗೆಯನ್ನು ಸಂಘಟಿಸಿತ್ತು.

ರಾಜ್ಯದ ಜನತಾದಳ ಸರಕಾರಕ್ಕೆ ಸಿಪಿಐ(ಎಂ) ದೃಢವಾದ ಬೆಂಬಲವನ್ನು ನೀಡುತ್ತ ಬಂದಿದೆ. ಇಷ್ಟಿದ್ದರೂ ಈ ಆಡಳಿತದ ಪೋಲೀಸರು ಶಾಂತಿಯುತ ಮೆರವಣಿಗೆ ಮೇಲೆ ಗುಂಡು ಹಾರಿಸಿದರು. ಇದೊಂದು ಅಸಮರ್ಥನೀಯ ಹಾಗೂ ಅಹಿತಕರ ವಿದ್ಯಮಾನವಾಗಿದೆ.

ತಪ್ಪಿತಸ್ಥರನ್ನು ಶಿಕ್ಷಿಸಿ

ನಾಲ್ಕು ಮಂದಿ ಕಾರ್ಯಕರ್ತರ ಸಾವಿಗೆ ಕಾರಣವಾದ ಗೋಲೀಬಾರನ್ನು ಸಿಪಿಐ(ಎಂ) ಪಾಲಿಟ್‌ಬ್ಯೂರೋ ಖಂಡಿಸಿದೆ. ತಪ್ಪಿತಸ್ಥರನ್ನು ಶಿಕ್ಷಿಸುವಂತೆ ಲಾಲೂ ಪ್ರಸಾದ್ ಯಾದವ್ ಸರಕಾರವನ್ನು ಒತ್ತಾಯಿಸಿದೆ.

ಕೇರಳ ವಿದ್ಯಾರ್ಥಿ ಚಳುವಳಿ ವಾಪಸ್

ಹಲವು ಮುಖ್ಯ ಬೇಡಿಕೆಗಳನ್ನು ಮುಂದಿಟ್ಟು ನಡೆಸುತ್ತಿದ್ದ ಚಳುವಳಿಯನ್ನು ಕೇರಳದ ವಿದ್ಯಾರ್ಥಿ ಸಂಯುಕ್ತ ಸಮರ ಸಮಿತಿ ಹಿಂತೆಗೆದುಕೊಂಡಿದೆ. 13 ದಿನಗಳಿಂದ ನಡೆಸುತ್ತಿದ್ದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹವನ್ನು ಮುಖ್ಯಮಂತ್ರಿ ಹಾಗೂ ವಿದ್ಯಾರ್ಥಿ ನಾಯಕರ ನಡುವಿನ ಒಪ್ಪಂದಿಂದಾಗಿ ಆಗಸ್ಟ್ 9 ರಂದು ನಿಂತಿತು.

ರಾಜ್ಯ ಸರಕಾರದ ಸಚಿವಾಲಯದ ಮುಂದೆ ಮತಪ್ರದರ್ಶನವನ್ನು ನಡೆಸುವುದನ್ನು ನಿಷೇಧಿಸಿ ಸರಕಾರ ಹೊರಡಿಸಿದ್ದ ಆಜ್ಞೆಯನ್ನು ಉಲ್ಲಂಘಿಸುವುದಾಗಿ ಎಡಪ್ರಜಾಸತ್ತಾತ್ಮಕ ರಂಗ (ಎಲ್.ಡಿ.ಎಫ್) ಎಚ್ಚರಿಸಿದ್ದು ಕಿವುಡು ಸರಕಾರದ ಮೇಲೆ ಉತ್ತಮ ಪರಿಣಾಮ ಬೀರಿತು. ಎಲ್.ಡಿ.ಎಫ್ ನಾಯಕರ ನೇತೃತ್ವದಲ್ಲಿ ಮತಪ್ರದರ್ಶನಗಳು ಆರಂಭವಾಗುವುದಕ್ಕೆ ಮುಂಚೆಯೇ ಆಗಸ್ಟ್ 7 ರಂದು ಸರಕಾರ ನಿಷೇಧಾಜ್ಞೆಯನ್ನು ರದ್ದುಪಡಿಸಿತು.

ವಿದ್ಯಾರ್ಥಿ ಬಸ್ ಪ್ರಯಾಣ ರಿಯಾಯಿತಿ, ಕೇರಳ ವಿವಿ ಉಪಕುಲಪತಿ ಮೊದಲಾದ ವಿಷಯಗಳ ಮೇಲೆ ಸಮಿತಿ ಹೋರಾಟವನ್ನು ಆರಂಭಿಸಿತ್ತು. ಈ ಹೋರಾಟ ಕಾಂಗ್ರೆಸ್ ನೇತೃತ್ವದ ಸಂಯುಕ್ತ ಪ್ರಜಾಸತ್ತಾತ್ಮಕ ರಂಗ (ಯುಡಿಎಫ್) ಸರಕಾರದ ಹಟಮಾರಿ ನಿಲುವಿನಿಂದಾಗಿ ಹೋರಾಟ ವಿದ್ಯಾರ್ಥಿಗಳು ಹಾಗೂ ಪೋಲೀಸರ ನಡುವಿನ ಸಂಘರ್ಷವಾಗಿ ಪರಿಣಮಿಸಿತ್ತು. ಎಸ್.ಎಫ್.ಐ ಮತ್ತಿತರ ವಿದ್ಯಾರ್ಥಿ ಯುವಜನರು ಗಾಯಗೊಂಡಿದ್ದರು. ವಿದ್ಯಾರ್ಥಿಗಳ ಚಳವಳಿಗೆ ಇಡೀ ಪ್ರತಿಪಕ್ಷ ಒಗ್ಗಟ್ಟಾಗಿ ಬೆಂಬಲಕ್ಕೆ ನಿಂತಿದ್ದರಿಂದ ಆಂದೋಲನ ಹೊಸ ತಿರುವನ್ನು ಪಡೆದು ಕಾವೇರಿತ್ತು.

ತೀಕ್ಷ್ಣ ಚಳುವಳಿಯ ಪ್ರಮುಖ ಫಲಿತಾಂಶಗಳು ಹೀಗಿವೆ: ಮಾಮೂಲಿ ಹಾಗೂ ಸಮಾನಾಂತರ ಕಾಲೇಜುಗಳ ವಿದ್ಯಾರ್ಥಿಗಳ ಬಸ್ ಪ್ರಯಾಣ ರಿಯಾಯಿತಿಯನ್ನು ಏಕ ಪ್ರಕಾರಗೊಳಿಸಲಾಗುತ್ತಿದೆ. ಅದನ್ನು ಸರಕಾರಿ ಬಸ್ಸುಗಳಲ್ಲಿ ಕೂಡ ಅನ್ವಯಿಸಲಾಗುತ್ತದೆ. ರಿಯಾಯಿತಿ ಪ್ರಯಾಣ ದರಗಳನ್ನು ಪಡೆಯಲು ಅನುಕೂಲವಾಗುವಂತೆ ವಿದ್ಯಾರ್ಥಿಗಳಿಗೆ ಗುರುತು ಚೀಟಿಗಳನ್ನು ನೀಡಲಾಗುತ್ತದೆ. ಹಿಂಸಾಚಾರ ನಡೆಯದಿರುವ ಪ್ರಕರಣಗಳಿಗೆ ಸಂಬಂಧಿಸಿದ ಮೊಕದ್ದಮೆಗಳನ್ನು ವಾಪಸು ಪಡೆಯಲಾಗುತ್ತದೆ.

ಇನ್ನು ಕೇರಳ ವಿ.ವಿ. ಉಪಕುಲಪತಿ ವಿಚಾರ. ಅವರ ವಿರುದ್ಧ ತನಿಖೆಯನ್ನು ತೀವ್ರಗೊಳಿಸಲಾಗುತ್ತದೆ ಎಂದು ಸರಕಾರ ಆಶ್ವಾಸನೆ ನೀಡಿದೆ.

ಪ್ರವೇಶ ಪರೀಕ್ಷೆಗಳನ್ನು ಮಲಯಾಳಂನಲ್ಲೇ ಬರೆಯಲು ಅವಕಾಶ ನೀಡಲಾಗುತ್ತದೆ. ಜಿಲ್ಲಾ ಮಂಡಳಿಗಳೊಂದಿಗೆ ಸಮಾಲೋಚಿಸಿ ಶಾಲೆಗಳಲ್ಲಿ ಮಧ್ಯಾಹ್ನದ ಊಟದ ಯೋಜನೆಯನ್ನ ಆರಂಭಿಸಲಾಗುವುದು. ಪರಿಶಿಷ್ಟ ವಿದ್ಯಾರ್ಥಿಗಳಿಗೆ ಸ್ಟೈಪೆಂಡ್ ನೀಡಿಕೆಯಲ್ಲಿ ಆಗುತ್ತಿರುವ ವಿಳಂಬವನ್ನು ತಡೆಯಲಾಗುತ್ತದೆ. ಶಾಲೆಗಳ ಸೂರು ನಿರ್ಮಾಣ ಹಾಗೂ ರಿಪೇರಿ ಕಾರ್ಯವನ್ನು ಒಂದು ವಾರದೊಳಗೆ ಪೂರ್ಣಗೊಳಿಸುವುದಾಗಿಯೂ ಸರಕಾರ ಭರವಸೆ ನೀಡಿತು.

ಪತ್ರಕರ್ತರಿಗೂ ಗಾಯ

ತಿರುವನಂತಪುರದಲ್ಲಿ ಆಗಸ್ಟ್ 5 ರಂದು ಸಚಿವಾಲಯದ ಮುಂದೆ ಮತಪ್ರದರ್ಶನ ನಡೆಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ಪೋಲೀಸರು ಲಾಠಿ ಪ್ರಹಾರ ನಡೆಸಿದರು. ಈ ಘಟನೆಯಲ್ಲಿ ಅನೇಕ ಮಂದಿ ಪತ್ರಕರ್ತರು ಕೂಡ ಗಾಯಗೊಂಡರು.

ಮುಷ್ಕರಕ್ಕೆ ಉಕ್ಕು ಕಾರ್ಮಿಕರ ಸಿದ್ಧತೆ

ಭಾರತೀಯ ಉಕ್ಕು ಮತ್ತು ಕಬ್ಬಿಣ ಕಂಪೆನಿ (ಐ.ಐ.ಎಸ್.ಸಿ.ಓ)ಯನ್ನು ಖಾಸಗೀಕರಿಸುವ ಪ್ರಯತ್ನಗಳನ್ನು ಪ್ರತಿಭಟಿಸಿ ಉಕ್ಕು ಕಾರ್ಮಿಕರು ಸೆಪ್ಟೆಂಬರ್ 7 ರಂದು ರಾಷ್ಟ್ರವ್ಯಾಪಿ ಮುಷ್ಕರವನ್ನು ನಡೆಸಲಿದ್ದಾರೆ.

ಆಗಸ್ಟ್ 4 ರಂದು ಕಲ್ಕತ್ತದಲ್ಲಿ ನಡೆದ, ಉಕ್ಕು ಕಾರ್ಮಿಕರ ಸಮಾವೇಶದಲ್ಲಿ ಈ ಬಗ್ಗೆ ನಿರ್ಣಯ ಕೈಗೊಳ್ಳಲಾಯಿತು. 'ಐ.ಐ.ಎಸ್.ಸಿ.ಓ ಉಳಿಸಿ ಸಮಿತಿ' ಇದನ್ನು ವ್ಯವಸ್ಥೆಗೊಳಿಸಿತ್ತು. ಸಿಟು, ಐಟಕ್, ಇಂಟಕ್, ಎಚ್.ಎಂ.ಎಸ್. ಮತ್ತು ಬಿ.ಎಂ.ಎಸ್. ನಾಯಕರು ಭಾಗವಹಿಸಿದ್ದರು. ದೇಶದ ಒಂದು ಪ್ರಮುಖ ಉಕ್ಕು ಸ್ಥಾವರವಾಗಿರುವ ಈ ಕಂಪೆನಿಯನ್ನು ಆಧುನೀಕರಿಸುವಂತೆ ಸಮಾವೇಶ ಆಗ್ರಹಪಡಿಸಿತು.

ಉಕ್ಕು ಕಾರ್ಮಿಕರ ಹೋರಾಟಕ್ಕೆ ದೇಶದ ದುಡಿಯುವ ವರ್ಗದ ಬೆಂಬಲ ಸಿಗಲಿದೆ ಎಂದು ಭಾರಿ ಘೋಷಣೆ ಕರತಾಡನಗಳ ಮಧ್ಯೆ ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಾ.ಎಂ.ಕೆ. ಪಂಧೆ ಘೋಷಿಸಿದರು.

ಒರಿಸ್ಸಾ ಜನತಾದಳದ ವಿಚಿತ್ರ ವರ್ತನೆ

ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳು ಮತ್ತು ಕೋಮುವಾದಿ ಶಕ್ತಿಗಳ ಅಟ್ಟಹಾಸದ ವಿರುದ್ಧ ರಾಷ್ಟ್ರವ್ಯಾಪಿಯಾಗಿ ಆಂದೋಲನ ನಡೆಸಲು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಪ್ರಯತ್ನಿಸಿ ಕಾರ್ಯಾಚರಣೆಗೆ ಇಳಿದಿರುವುದು ಸರಿಯಷ್ಟೆ. ಮುಖ್ಯವಾಗಿ ಎಡಪಕ್ಷಗಳೂ, ಅದರಲ್ಲೂ ಸಿಪಿಐ(ಎಂ) ಈ ಸಂಘರ್ಷದ ಮುಂಚೂಣಿಯಲ್ಲಿದೆ. ಜನತಾದಳದಂಥ ಒಂದು ರಾಷ್ಟ್ರೀಯ ಜಾತ್ಯಾತೀತ ಪಕ್ಷ ಈ ಹೋರಾಟದಲ್ಲಿ ಸಹಕರಿಸುವುದು ಮಾತ್ರವಲ್ಲದೆ ಸಕ್ರಿಯವಾಗಿ ಭಾಗವಹಿಸಬೇಕೆಂದು ನಿರೀಕ್ಷಿಸುವುದರಲ್ಲಿ ತಪ್ಪೇನಿಲ್ಲ.

ಆದರೆ ದುರದೃಷ್ಟವಶಾತ್, ಅದು ಆಡಳಿತದಲ್ಲಿರುವ ಒಂದು ರಾಜ್ಯದಲ್ಲೇ ಆ ನಿರೀಕ್ಷೆ ಹುಸಿಯಾದ ವರದಿಗಳು ಬಂದಿವೆ. ಪಕ್ಷದ ಅಖಿಲ ಭಾರತ ನಿಲುವನ್ನು ಉಪೇಕ್ಷಿಸಿರುವ ಒರಿಸ್ಸಾ ಜನತಾದಳ ಜಂಟಿ ಕಾರ್ಯಕ್ರಮಗಳನ್ನು ಭಾಗವಹಿಸಲು ನಿರಾಕರಿಸುತ್ತಿದೆ. ಸಿಪಿಐ(ಎಂ) ಒರಿಸ್ಸಾ ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಳಿ ಮುಖ್ಯಮಂತ್ರಿ ಬಿಜು ಪಟ್ನಾಯಕರಿಗೆ ಈ ಬಗ್ಗೆ ಒಂದು ಮನವಿ ಬರೆದು ಜನತಾದಳ ರಾಜ್ಯ ಘಟಕದ ನಿಲುವನ್ನು ಟೀಕಿಸಿದೆ.


ಆಗಸ್ಟ್ 19 ರ ಜೈಲ್‌ಭರೋ, ಸೆಪ್ಟೆಂಬರ್ 9ರ ಭಾರತ್‌ಬಂದ್, ಆಗಸ್ಟ್ 9 ರಿಂದ 15 ರವರೆಗಿನ ರಾಷ್ಟ್ರೀಯ ಏಕತೆ ಹಾಗೂ ಕೋಮು ಸೌಹಾರ್ದ ವಾರಾಚರಣೆ ಮೊದಲಾದ ಕಾರ್ಯಕ್ರಮಗಳಿಗೆ ಕರೆಗೆ ಒರಿಸ್ಸಾ ಜನತಾದಳ ಪ್ರತಿಕ್ರಿಯೆ ವ್ಯಕ್ತಪಡಿಸಿಲ್ಲ.

ಇನ್ನೊಂದು ವಿಪರ್ಯಾಸವೆಂದರೆ ಷೇರು ದಲ್ಲಾಳಿ ಹರ್ಷದ್ ಮೆಹ್ತಾ ಪ್ರಧಾನಿ ಪಿ.ವಿ. ನರಸಿಂಹರಾವ್ ವಿರುದ್ಧ ಒಂದು ಕೋಟಿ ರೂ. ಲಂಚ ಸ್ವೀಕಾರದ ಆರೋಪ ಮಾಡಿದಾಗ ಮುಖ್ಯಮಂತ್ರಿ ಬಿಜು ಪಟ್ನಾಯಕ್ ಪ್ರಧಾನಿಯರ ಬೆಂಬಲಕ್ಕೆ ಹೋದರು. ಯುವ ಜನತಾದಳ ರ್‍ಯಾಲಿಯೊಂದರಲ್ಲಿ ಮಾತಾನಾಡಿದ ಸಂದರ್ಭದಲ್ಲಿ ಬಿಜು ಪಟ್ನಾಯಕ್ ಅವರು ರಾವ್‌ರವರನ್ನು ಬೆಂಬಲಿಸಿ ಹೇಳಿಕೆ ನೀಡಿದ್ದರು. ಇದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಜೆ.ಬಿ. ಪಟ್ನಾಯಕ್ ಅವರ ಹೇಳಿಕೆಯೇನೋ ಎಂಬ ಗೊಂದಲ ಹುಟ್ಟಿಸುವ ಸಾಧ್ಯತೆಯಿತ್ತು ಎಂದು ಸಿಪಿಐ(ಎಂ) ಹೇಳಿದೆ.

1989 ರ ಚುನಾವಣೆಗಳಿಗೆ ಮುನ್ನ ಜನತಾದಳ, ಸಿಪಿಐ(ಎಂ) ಮತ್ತು ಸಿಪಿಐ, ರೂಪಿಸಿದ್ದ 18 ಅಂಶಗಳ ಕಾರ್ಯಕ್ರಮಗಳ ಗತಿ ಬಗ್ಗೆ ಮಾತುಕತೆ ನಡೆಸೋಣವೆಂದು ಸಿಪಿಐ(ಎಂ) ಬರೆದಿರುವ ಮನವಿ ಪತ್ರಕ್ಕೂ ಬಿಜು ಪಟ್ನಾಯಕ್ ಉತ್ತರಿಸಿಲ್ಲ. ಅಧಿಕಾರಕ್ಕೆ ಬಂದರೆ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದಾಗಿ ಜನತಾದಳ ರಾಜ್ಯಘಟಕ ಹಾಗೂ ಅದರ ನಾಯಕ ಆಶ್ವಾಸನೆ ನೀಡಿದ್ದರು. ಆದರೆ ಅದನ್ನು ಪರಿಶೀಲಿಸಲು ವಿಫಲರಾಗಿದ್ದಾರೆ.

ರಾಜ್ಯ ಕಾರ್ಯದರ್ಶಿಮಂಡಳಿ ಪಟ್ನಾಯಕ್‌ಗೆ ಬರೆದಿರುವ ಪತ್ರದ ಪ್ರತಿಗಳನ್ನು ಜನತಾದಳ ನಾಯಕರಾದ ವಿ.ಪಿ. ಸಿಂಗ್, ಎಸ್.ಆರ್.ಬೊಮ್ಮಾಯಿ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ಹರ್ಕಿಷನ್ ಸಿಂಗ್ ಸುರ್ಜಿತರಿಗೆ ಕಳಿಸಿದೆ.

-- ವಿಶ್ವ



ತಮಿಳು ನಾಡು :

ಸಮಾಜವಾದದ ಚೈತನ್ಯ ತೋರಿದ ರಾಜಕೀಯ ಸಮ್ಮೇಳನ

ಸಿಪಿಐ(ಎಂ) ತಮಿಳುನಾಡು ರಾಜ್ಯಘಟಕದ ರಾಜಕೀಯ ಸಮ್ಮೇಳನವೊಂದು ಆಗಸ್ಟ್ 7 ಮತ್ತು 8 ರಂದು ತಿರುಚಿನಾಪಳ್ಳಿಯಲ್ಲಿ ನಡೆಯಿತು. ರಾಜಕೀಯ ಕ್ಷೋಭೆ ಹಾಗೂ ಕೇಂದ್ರದಲ್ಲಿ ಆಳುತ್ತಿರುವ ಕಾಂಗ್ರೆಸ್ (ಐ) ನ ದುರಾಡಳಿತದಿಂದಾಗಿ ಉಂಟಾಗಿರುವ ಬಿಕ್ಕಟ್ಟು ಮತ್ತು ರಾಜ್ಯದಲ್ಲಿನ ಎಐಎಡಿಎಂಕೆ ಸರಕಾರದ ಕೆಟ್ಟ ಆಡಳಿತದಿಂದ ಹದಗೆಟ್ಟಿರುವ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈ ಸಮ್ಮೇಳನಕ್ಕೆ ಹೆಚ್ಚು ರಾಜಕೀಯ ಮಹತ್ವವಿದೆ.

ಸಮ್ಮೇಳನದ ಸ್ಥಳಕ್ಕೆ ಹಿರಿಯ ಸಂಸದೀಯ ಪಟು ಹಾಗೂ ತಿರುಚ್ಚಿಯ ಕಾರ್ಮಿಕ ಚಳುವಳಿಯ ನೇತಾರರಾಗಿದ್ದ ದಿವಂಗತ ಸಂಗಾತಿ ಆನಂದನ್ ನಂಬಿಯಾರ್ ಅವರ ಹೆಸರನ್ನಿಟ್ಟು ಗೌರವಿಸಲಾಯಿತು. ಬೃಹತ್ ಸಭಾಂಗಣಕ್ಕೆ ಜಾನಕಿ ಅಮ್ಮಾಳ್ ಹೆಸರನ್ನಿಡಲಾಗಿತ್ತು. ದಿವಂಗತ ಜಾನಕಿ ರಾಜ್ಯ ಎ.ಐ.ಎ.ಡಿ.ಡಬ್ಲ್ಯೂ. ಎ.ಯು. ಧೀಮಂತ ನಾಯಕಿಯಾಗಿದ್ದರು.

ಕಾವೇರಿ ನದಿ ದಂಡೆ ಮೇಲಿರುವ ಈ ಐತಿಹಾಸಿಕ ಪಟ್ಟಣ ಆಗಸ್ಟ್ ಏಳರಂದು ಕೆಂಪು ಸಾಗರದಂತೆ ಕಂಡು ಬಂದಿತು. ಸಮ್ಮೇಳನದ ಅಂಗವಾಗಿ ಬೃಹತ್ ಮೆರವಣಿಗೆ ಹಾಗೂ ಸಾರ್ವಜನಿಕ ಸಭೆ ನಡೆಯಿತು. ದಿನಕರನ ತಾಪವನ್ನು ಲೆಕ್ಕಿಸದ ಜನರು ಸಾಗರದೋಪಾದಿಯಲ್ಲಿ ಹರಿದು ಬಂದರು. ಹೀಗೆ ಬಂದವರ ಪ್ರಮಾಣವನ್ನು ಅಂಕಿ ಸಂಖ್ಯೆಯಲ್ಲಿ ಹೇಳುವುದಾದರೆ ಅದು ಎರಡು ಲಕ್ಷವನ್ನು ಮೀರಿತ್ತು! ಮೆರವಣಿಗೆ ಒಂದು ಸ್ಥಳವನ್ನು ಹಾದು ಹೋಗಲು ಮೂರು ಗಂಟೆ ಕಾಲ ಬೇಕಾಯಿತು.

ಮೆರವಣಿಗೆಗಾರರು ಇನ್ನೂ ಸಭಾ ಸ್ಥಳವನ್ನು ತಲುಪುತ್ತಿರುವಾಗಲೇ ರಾಜಕೀಯ ಸಮ್ಮೇಳನ ಆರಂಭವಾಯಿತು. ಕೆ. ವರದರಾಜನ್ ಅಧ್ಯಕ್ಷತೆ ವಹಿಸಿದ್ದರು. ಪಾಲಿಟ್ ಬ್ಯೂರೋ ಸದಸ್ಯ ಹಾಗೂ ರಾಜ್ಯ ಸಮಿತಿ ಕಾರ್ಯದರ್ಶಿ ಎ. ನಲ್ಲಶಿವನ್ ಧ್ವಜಾರೋಹಣ ಮಾಡಿದರು. ಕೇಂದ್ರ ಸಮಿತಿ ಸದಸ್ಯ ಆರ್. ಉಮಾನಾಥ್ ಸಮ್ಮೇಳನವನ್ನು ಉದ್ಘಾಟಿಸಿದರು. ಅವರು ತಮ್ಮ ಭಾಷಣದಲ್ಲಿ ಕೇಂದ್ರ ಹಾಗೂ ಜಯಲಲಿತಾ ಸರಕಾರಗಳ ಜನವಿರೋಧಿ ನೀತಿಗಳನ್ನು ಖಂಡಿಸಿದರು. ಎ.ಐ.ಡಿ.ಎಂ. ಕೆ. ಕಾರ್ಯಕರ್ತರು ನಡೆಸುತ್ತಿರುವ ದೌರ್ಜನ್ಯಗಳನ್ನು ಅವರು ಖಂಡಿಸಿದರು. ಪ್ರಾಂತೀಯ ಸಮಿತಿ ಸದಸ್ಯ ಡಬ್ಲ್ಯು. ಆರ್. ವರದರಾಜನ್ ಮಾತನಾಡಿ ರಾಜ್ಯದ ಕೈಗಾರಿಕಾರಂಗದಲ್ಲಿ ಆಗಿರುವ ಹಿನ್ನಡೆಯನ್ನು ವಿವರಿಸಿದರು.

ದೇಶದ ರಾಜಕೀಯ ಪರಿಸ್ಥಿತಿಯನ್ನು ಸವಿಸ್ತಾರವಾಗಿ ಪ್ರಸ್ತಾಪಿಸಿದ ಪಾಲಿಟ್ ಬ್ಯೂರೋ ಸದಸ್ಯ ಸೀತಾರಾಮ್ ಯೆಚೂರಿ, ಕಾಂಗ್ರೆಸ್ ಪಕ್ಷ ಕೋಮುವಾದವನ್ನು ವಿರೋಧಿಸಲು ವಿಫಲವಾಗಿರುವುದಲ್ಲದೆ ಕೋಮುಪಕ್ಷಗಳು ಅನುಸರಿಸುವಂತ ಕ್ರಮಗಳನ್ನೇ ಕೈಗೊಳ್ಳುತ್ತಿದೆ ಎಂದು ಟೀಕಿಸಿದರು.

ಸಂಕಿರಣದಲ್ಲಿ ಸ್ವಾಮಿ

ಮೊದಲ ದಿನ ಒಂದು ವಿಚಾರ ಸಂಕಿರಣದ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಕೋಮು ಸೌಹಾರ್ದ ಕುರಿತ ಸಂದೇಶದಲ್ಲಿ ಕುನ್ರಕುಡಿಯಲ್ಲಿನ ಶಿವ ಮಠದ ಮುಖ್ಯಸ್ಥ ಕುನ್ರಕುಡಿ ಅಡಿಗಳರ್, ಎ.ಐ.ಡಿ.ಡಬ್ಲ್ಯು.ಎ. ಪ್ರಧಾನ ಕಾರ್ಯದರ್ಶಿ ಬೃಂದಾ ಕಾರಾಟ್ ಮತ್ತು ಪಕ್ಷದ ಪ್ರಾಂತೀಯ ಸಮಿತಿ ಸದಸ್ಯ ಅಗತ್ಯ ಲಿಂಗಂ ಭಾಗವಹಿಸಿದ್ದರು. ಕುನ್ರಕುಡಿ ಅಡಿಗಳರ್ ತಮಿಳುನಾಡಿನಾದ್ಯಂತ ಕೋಮು ಸೌಹಾರ್ದ ಪ್ರಚಾರಾಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ.

ಎರಡನೇ ದಿನದ ಬೆಳಗ್ಗಿನದ ಅಧಿವೇಶನ ಅಧ್ಯಕ್ಷತೆಯನ್ನು ಪಿ. ಆರ್. ಪರಮೇಶ್ವರನ್ ವಹಿಸಿದ್ದರು. ಭಾಷೆ (ಅರುಣನ್), ಅಸ್ಪೃಶ್ಯತೆ (ನನ್ಮಾರನ್), ಮಹಿಳೆಯರ ಮೇಲಿನ ದೌರ್ಜನ್ಯಗಳು (ಪಾಪಾ ಉಮಾನಥ್) ಮತ್ತು ಪಂಚಾಯಿತಿ ರಾಜ್ (ಮೈಥಿಲಿ ಶಿವರಾಮನ್) ವಿಷಯಗಳ ಪಕ್ಷದ ನಿಲುವನ್ನು ವಿವರಿಸಲಾಯಿತು.

ಎಸ್. ವರದರಾಜನ್ ಅಧ್ಯಕ್ಷತೆಯಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಸಂಸತ್ ಸದಸ್ಯ ಮಹಮದ್ ಸಲೀಂ, ಕೇಂದ್ರ ಸಮಿತಿ ಸದಸ್ಯ ಎಸ್. ಶಂಕರಯ್ಯ ಮತ್ತು ಇ.ಕೆ. ನಯನಾರ್ ಮಾತನಾಡಿದರು.

ಸಮಾಜವಾದದ ಚೇತನ

ಸಮಾಜವಾದ ಸತ್ತಿದೆ ಎಂದು ಟಾಂಟಾಂ ಮಾಡುತ್ತಿರುವ ಎಲ್ಲರಿಗೂ ಈ ಸಮ್ಮೇಳನ ಕಣ್ಣು ತೆರೆಸುವ ಒಂದು ವಿದ್ಯಮಾನವಾಗಿತ್ತು. ಎರಡು ದಿನ ಕಾಲ ನಡೆದ ಕಲಾಪಗಳಲ್ಲಿ ಭಾಗವಹಿಸಿದವರಲ್ಲಿ ಹೆಚ್ಚಿನವರು ಯುವಜನರಾಗಿದ್ದರು. ಅವರೆಲ್ಲ ಟಿಪ್ಪಣಿಗಳನ್ನು ಬರೆದುಕೊಳ್ಳುವುದರಲ್ಲಿ ನಿರತರಾಗಿದ್ದರು. ಸಿಪಿಐ(ಎಂ) ಒಂದು ದೊಡ್ಡ ಶಕ್ತಿ ಅದು ತಮಿಳುನಾಡಿನಲ್ಲಿ ಭಾರೀ ವೇಗದೊಂದಿಗೆ ಬೆಳೆಯುತ್ತಿರುವ ಒಂದು ಶಕ್ತಿಯಾಗಿದೆ ಎನ್ನುವುದನ್ನು ಎಲ್ಲರಿಗೂ ತಿಳಿಯ ಹೇಳುವಂತಿತ್ತು. ಈ ಸಮ್ಮೇಳನದ ಯಶಸ್ಸು

ಅವಿಶ್ವಾಸ ಠರಾವಿನಿಂದ ಸ್ವಾತಂತ್ರ್ಯ ದಿನದ ಭಾಷಣದವರೆಗೆ

ಪ್ರಧಾನ ಮಂತ್ರಿಗಳ ನಿಲ್ಲದ ಹುಂಬುತನ

— ಕಾಂ. ಸುರ್ಜಿತ್

ಸಂಸತ್ತಿನ ಪ್ರಸಕ್ತ ಮಳೆಗಾಲದ ಅಧಿವೇಶನದ ಆರಂಭದ ವೇಳೆಗೆ ದೇಶದ ಆಳುವ ಪಕ್ಷ ದೇಶದಲ್ಲಿ ರಾಜಕೀಯ ಆರ್ಥಿಕ, ಸಾಮಾಜಿಕ ಇತರ ಎಲ್ಲಾ ರಂಗಗಳಲ್ಲೂ ನಿರ್ಮಿಸಿದ ಹೊಲಸು ಸನ್ನಿವೇಶದತ್ತ ಹಲವು ರಾಜಕೀಯ ಶಕ್ತಿಗಳು ಮುಖ್ಯವಾಗಿ ಎಡ ಮತ್ತು ಜಾತ್ಯಾತೀತ ವಿರೋಧ ಪಕ್ಷಗಳು ದೇಶಬಾಂಧವರ ಗಮನ ಸೆಳೆಯಲೇಬೇಕಾಯಿತು. ಈ ಹಿನ್ನೆಲೆಯಲ್ಲಿ ಎಡಪಕ್ಷಗಳು, ರಾಷ್ಟ್ರೀಯರಂಗ ನರಸಿಂಹರಾವ್ ಸರಕಾರದ ವಿರುದ್ಧ ಅವಿಶ್ವಾಸ ಠರಾವು ಮಂಡಿಸಲು ನಿರ್ಧರಿಸಿದವು. ಸಿಪಿಐ(ಎಂ) ಈ ಠರಾವನ್ನು ಮಂಡಿಸಿತು.

ಈ ಠರಾವನ್ನು ಸುಲಭವಾಗೇ ಸೋಲಿಸಬಹುದೆಂದುಕೊಂಡ ಆಳುವ ಪಕ್ಷ ಅಧಿವೇಶನದ ಆರಂಭದಲ್ಲೇ ಇದನ್ನು ಚರ್ಚೆಗೆ ತೆಗೆದುಕೊಂಡಿತು. ಚರ್ಚೆಯು ಮೂರು ದಿನ ಲೋಕಸಭೆಯಲ್ಲಿ ದೇಶಾದ್ಯಂತ ಜನಸಾಮಾನ್ಯರಲ್ಲಿ ಹರಡಿದ್ದ ಅಸಂತೃಪ್ತಿ ಪ್ರತಿಭಟನೆಗೊಂಡಿತು. ಹಣದ ಬಲದಿಂದ, ಪಕ್ಷಾಂತರ ನಡೆಸಿ, ಜನಾದೇಶವನ್ನು ತುಳಿದು ಸರಕಾರ ಈ ಠರಾವಿನಿಂದ ತನ್ನನ್ನು ಉಳಿಸಿಕೊಂಡಿತೇನೋ ನಿಜ, ಆದರೆ ಮತದಾರರನ್ನು ಎದುರಿಸುವ ಮುಖ ಅದಕ್ಕೆ ಉಳಿಯದಂತಾಯಿತು.

ಅವಿಶ್ವಾಸ ಠರಾವಿನ ಚರ್ಚೆಯ ಸಮಯದಲ್ಲಿ ಆಳುವ ಪಕ್ಷ ತನ್ನ ಅತಿರಥ- ಮಹಾರಥರನ್ನೆಲ್ಲಾ ರಂಗಕ್ಕಿಳಿಸಿತು. ಕಾಂಗ್ರೆಸ್ಸನ್ನು ತಾನೇ ನಿರ್ಮಿಸಿಕೊಂಡ ಗೊಂದಲದಿಂದ ರಕ್ಷಿಸಬೇಕೆನ್ನುತ್ತಿದ್ದವರೂ ಸರಕಾರದ ರಕ್ಷಣೆಗೆ ಬರಲು ಹಿಂಜರಿಯುದಿದ್ದುದು ಬಹುಶಃ ಕಾಂಗ್ರೆಸ್ ಸಂಸ್ಕೃತಿಗೆ ಅನುಗುಣವಾಗೇ ಇತ್ತು. ಆದರೆ ಕೋಮುವಾದದ ಪ್ರಶ್ನೆಯೇ ಮೇಲಾಗಲೀ ಹಗರಣಗಳ ಪ್ರಶ್ನೆಯಲ್ಲಾಗಲೀ ಸರಕಾರವನ್ನು ಸಮರ್ಥಿಸಲಾಗದ ಅವರೆಲ್ಲಾ ಕೇವಲ ಆರ್ಥಿಕ ರಂಗದ 'ಸಾಧನೆ' ಗಳ ರಾಗ ಹಾಡಿದರಷ್ಟೆ. ಚಿದಂಬರಂ, ಬೂಟಾಸಿಂಗ್, ಅರ್ಜುನ್ ಸಿಂಗ್, ಹಣಕಾಸು ಮಂತ್ರಿ ಹಾಗೂ ಸ್ವತಃ ಪ್ರಧಾನಿಗಳೂ ಸುಳ್ಳು ಅಂಕೆ-ಸಂಖ್ಯೆಗಳ ಆಧಾರದಲ್ಲಿ ತಮ್ಮನ್ನು ಸಮರ್ಥಿಸಿಕೊಳ್ಳಲು ಹೆಣಗಿದರು. ಈ ಕಸರತ್ತಿನಿಂದ ಜನಸಾಮಾನ್ಯರನ್ನು ವಂಚಿಸಬಹುದೆಂದು ಅವರ ಎಣಿಕೆ ಇರಬೇಕು. ಹಣಕಾಸು ಮಂತ್ರಿಗಳ ಭಾಷಣವಂತೂ ಇಂತಹ ಕಸರತ್ತಿನ ಪರಾಕಾಷ್ಠೆಯಾಗಿತ್ತು.

ಮತ್ತಷ್ಟು ಕುಂದಿದ ಸರಕಾರದ ವಿಶ್ವಾಸಾರ್ಹತೆ

ಚರ್ಚೆಯ ಸಮಯದಲ್ಲಿ ಹದಗೆಡುತ್ತಿರುವ ಕೋಮು ಪರಿಸ್ಥಿತಿಯ ಬಗ್ಗೆ ಎಡ ಹಾಗೂ ಜಾತ್ಯಾತೀತ ಪಕ್ಷಗಳ ಸದಸ್ಯರು ಗಮನ ಸೆಳೆದಿದ್ದರೂ ಆಳುವ ಪಕ್ಷದ ಭಾಷಣಕಾರರೆಲ್ಲಾ ಈ ಬಗ್ಗೆ ದಿವ್ಯ ಮೌನವನ್ನೇ ತೋರಿದರು. ಪ್ರಧಾನ ಮಂತ್ರಿಗಳೂ ತಮ್ಮ ಉತ್ತರದಲ್ಲಿ ಅದರ ಪ್ರಸ್ತಾಪವನ್ನು ಮಾಡಲಿಲ್ಲ. ಅದು ಸಹಜವೇ ಆಗಿತ್ತು. ರಾಷ್ಟ್ರೀಯ ಸಮಗ್ರತಾ ಮಂಡಳಿ ಸರ್ವಸಮ್ಮತಿಯಿಂದ ಅಧಿಕಾರ ನೀಡಿದ್ದರೂ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಲು ಬಿಟ್ಟು 'ಬಾಬ್ರಿ ಸ್ಥಳದಲ್ಲಿ ದೇವಸ್ಥಾನ ಇತ್ತೇ' ಎಂದು ಸುಪ್ರೀಂ ಕೋರ್ಟನ್ನು ಕೇಳಿರುವ, ಚಂದ್ರಸ್ವಾಮಿಯಿಂದ ಸೋಮಯಜ್ಞ ನಡೆಸಿದ ಮಸೀದಿಯಿದ್ದಲೇ ಮಂದಿರ ಕಟ್ಟಿಸಬೇಕೆಂದು ಕೇಳುವಂತೆ ಮಾಡಿದ, ನಾಲ್ಕು ಶಂಕರಾಚಾರ್ಯರೂ ಇದೇ ಒತ್ತಾಯವನ್ನು ಪುನರುಚ್ಚರಿಸುವಂತೆ ಮಾಡಿದವರಲ್ಲವೇ ಅತ? ಅಲ್ಪ ಸಂಖ್ಯಾತರು ನ್ಯಾಯಾಲಯದ ತೀರ್ಪಿಗೆ ಬದ್ಧರಾಗಲು ಸಿದ್ಧರಿದ್ದರೂ, ಸಂಘಪರಿವಾರ ಇಂತಹ ಯಾವ ಭರವಸೆಯನ್ನು ನೀಡಲೂ ಸಿದ್ಧವಿಲ್ಲದಿದ್ದರೂ ಕೋಮುವಾದಿ ಸವಾಲನ್ನು ಎದುರಿಸುವ ಬದಲು ಅವರೊಡನೆ ಕಾಂಗ್ರೆಸ್ (ಐ) ನ ಸಂಕುಚಿತ ಹಿತಾಸಕ್ತಿಗಾಗಿ ರಾಜಿ ಮಾಡಿಕೊಳ್ಳುವ ನೀತಿ ಮುಂದುವರಿಸುತ್ತಲೇ ಇದ್ದಾರೆ. ಸ್ವಾಭಾವಿಕವಾಗಿಯೇ ಅಲ್ಪ ಸಂಖ್ಯಾಕರಿಗೆ ಸರಕಾರದಲ್ಲಿ ಯಾವುದೇ ವಿಶ್ವಾಸ ಉಳಿದಿಲ್ಲ. ಈಗ ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸುತ್ತೇನೆಂದು ಹೇಳಿಕೊಳ್ಳುವ ಮಸೂದೆಗಳನ್ನು ತಂದಿದ್ದಾರೆ. ಆದರೆ ಅವರ ಮಾತಿಗೂ ಕೃತಿಗೂ ಎಷ್ಟೊಂದು ಅಂತರ. ಎಡ-ಜಾತ್ಯಾತೀತ ವಿರೋಧ ಪಕ್ಷಗಳು ರಾಷ್ಟ್ರೀಯ ಐಕ್ಯತೆಗಾಗಿ ಚಳುವಳಿ ನಡೆಸುತ್ತಿದ್ದಾರೆ. ಈ ಚಳುವಳಿಯಲ್ಲಿ ಕಾಂಗ್ರೆಸ್(ಐ)ನ ಹೆಸರು ಎಲ್ಲೂ ಇಲ್ಲ. ಈಗಿನ ಸನ್ನಿವೇಶಕ್ಕೆ ಕಾರಣವಾದ ತನ್ನ ಕೃತಿಗಳ ಬಗ್ಗೆ ಸಮಜಾಯಿಷಿ ನೀಡದೆ ಅದು ಇಲ್ಲಿ ಎಲ್ಲಾದರೂ ಕಾಣಿಸಿಕೊಳ್ಳಲು ಸಾಧ್ಯವೂ ಇಲ್ಲ.

ಇನ್ನು ಶೇರು ಹಗರಣವಂತೂ ಸ್ವಾತಂತ್ರ್ಯನಂತರದ ಅತೀ ದೊಡ್ಡ ಹಗರಣ. ಪ್ರಧಾನಮಂತ್ರಿಗಳ ಹೆಸರನ್ನು ಆವರಿಸಿದ ಹಗರಣ. ಬೋಫೋರ್ಸ್ ಹಗರಣದಲ್ಲಿ ವಿರೋಧ ಪಕ್ಷಗಳ ನಿಲುವು ಮತ್ತೆ ಸಾಬೀತಾಗಿದೆ. ಸರಕಾರದ ವಿಶ್ವಾಸಾರ್ಹತೆ ಇನ್ನಷ್ಟು ಕುಂದಿದೆ. ಜನ ಈಗ ಭ್ರಷ್ಟಾಚಾರದ ಈ ಸಮರ್ಥಕರ ಮಾತನ್ನು ನಂಬಲು ಸಿದ್ಧರಿಲ್ಲ.

ಇವೆಲ್ಲದರಿಂದಾಗಿ ಜನಗಳ ಪ್ರತಿರೋಧ ಇನ್ನಷ್ಟು ತೀವ್ರವಾಗುತ್ತಿದೆ. ಕಾರ್ಮಿಕರಷ್ಟೇ ಅಲ್ಲ, ರೈತರು, ಕೃಷಿ ಕೂಲಿಗಾರರು, ಮಹಿಳೆಯರು, ಯುವಜನರು, ವಿದ್ಯಾರ್ಥಿಗಳು ಇತರರು ದೊಡ್ಡ-ದೊಡ್ಡ ಕಾರ್ಯಾಚರಣೆಗಿಳಿದಿದ್ದಾರೆ. ಸೆಪ್ಟೆಂಬರ್ 9ರ ಭಾರತ್ ಬಂದ್‌ನಂದು ನಡೆಯಬೇಕು ಎಂದು ನಿರ್ಧರಿಸಿದ್ದ ಒಟ್ಟಪಾಳಂ ಲೋಕಸಭಾ ಚುನಾವಣೆಗಳನ್ನು ಕೇರಳ ಸರಕಾರ ಸೆಪ್ಟೆಂಬರ್ 7 ಕ್ಕೆ ನಡೆಸಬೇಕೆಂದು ಕೇಳಿರುವುದು ಜನಗಳ ನಡುವೆ ಅಸಂತೃಪ್ತಿ ಎಷ್ಟು ಆಳವಾಗಿ ಹರಡಿದೆ ಎಂಬುದಕ್ಕೆ ಒಂದು ಉದಾಹರಣೆ. ಉಕ್ಕು ವಲಯದಲ್ಲಿ ಸಿಐಟಿಯು ಹಾಗೂ ಎ. ಐ.ಟಿ.ಯು.ಸಿ.ಯೊಡನೆ ಇಂಟಕ್ ಕೂಡಾ ಸರಕಾರದ ನೀತಿಗಳನ್ನು ವಿರೋಧಿಸಲು ಮುಂದೆ ಬಂದಿದೆ.

ಕೆಂಪು ಕೋಟೆಯಿಂದ ಹರಿದ ಟೊಳ್ಳು ವಾಗ್ಝರಿ

ಈ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿಗಳು ತಮ್ಮ ಸ್ವಾತಂತ್ರ್ಯದಿನದ ಭಾಷಣದಲ್ಲಿ ತನ್ನ ಸರಕಾರದ ಕೆಲಸ-ಕಾರ್ಯಗಳ ಬಗ್ಗೆ ಆತ್ಮವಿಮರ್ಶೆ ಮಾಡಿಕೊಂಡು ಹಿಂದಿನ ಘಟನೆಗಳಿಂದ ಪಾಠ ಕಲಿತು ಜನಗಳಲ್ಲಿ ಹೊಸ ವಿಶ್ವಾಸ ಮೂಡಿಸುತ್ತಾರೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಅವರ ಕೆಂಪು ಕೋಟೆಯ ವಾಗ್ಝರಿ ಜನಗಳನ್ನು ನಿರಾಶಗೊಳಿಸಿದೆ. ನಿಜ. ಈ ರೀತಿಯ ಆತ್ಮವಿಮರ್ಶೆಗೆ ಒಂದು ನೈತಿಕ ಧೈರ್ಯ ಬೇಕು. ಅದು ಅವರಿಗಾಗಲೀ ಅವರ ಪಕ್ಷಕ್ಕಾಗಲೀ ಎಲ್ಲಿದೆ? ನಮ್ಮ ದುಃಖವೆಂದರೆ ಅವರ ಕುಕೃತ್ಯಗಳಿಂದಾಗಿ ಇಡೀ ದೇಶವೇ 'ದುಷ್ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ.

ಪಂಜಾಬಿನಲ್ಲಿ ಕಾನೂನು-ಪರಿಸ್ಥಿತಿ ಸ್ವಲ್ಪ ಸುಧಾರಣೆಯಾಗಿದ್ದರೂ 300 ಕ್ಕೂ ಹೆಚ್ಚು ಉಗ್ರ ಭಯೋತ್ಪಾದಕರು ಇನ್ನು ಅಲ್ಲಿ ಅಡ್ಡಾಡುತ್ತಿರುವಾಗ ಅದು ದೇಶದಲ್ಲೇ ಅತ್ಯಂತ ಶಾಂತಿಯುತ ರಾಜ್ಯ ಎಂದಿದ್ದಾರೆ ರಾಯರು. ಪಂಜಾಬಿನ ಸಮಸ್ಯೆಗೆ ರಾಜಕೀಯ ಪರಿಹಾರವನ್ನು ಇನ್ನೂ ನೀಡದಿರುವಾಗ ಸಂಪೂರ್ಣ ಶಾಂತಿ ನೆಲೆಸಿದೆ ಎನ್ನುವುದು ಹುಂಬತನ. ಕಾಶ್ಮೀರದಲ್ಲೂ ರಾಜಕೀಯ ಪರಿಹಾರ ಕಂಡು ಹುಡುಕಲು ಇನ್ನೂ ಆಗಿಲ್ಲ. ಈಶಾನ್ಯ ರಾಜ್ಯಗಳಲ್ಲೂ ಇದೇ ಸ್ಥಿತಿ.

ತಾನು ರಕ್ಷಿಸುತ್ತೇನೆಂದು ಮಾತುಕೊಟ್ಟರೂ ಬಾಬ್ರಿ ಮಸೀದಿ ಧ್ವಂಸಕ್ಕೆ ಏಕೆ ಅವಕಾಶ ನೀಡಲಾಯಿತು ಎಂದು ಅವರು ವಿವರಿಸಲಿಲ್ಲ. ತನ್ನ ಕ್ರಿಮಿನಲ್ ನಿರ್ಲಕ್ಷ್ಯಕ್ಕೆ ಕ್ಷಮೆಯಂತೂ ಕೇಳಲೇ ಇಲ್ಲ. ಒಂದೆಡೆ ಬಾಬ್ರಿ ಮಸೀದಿಯನ್ನು ಮತ್ತೆ ಕಟ್ಟುವುದಾಗಿ ಸಾರುತ್ತಲೇ ಇರುವ ಅವರು ಇನ್ನೊಂದೆಡೆ ಬಾಬ್ರಿಮಸೀದಿಯಿದ್ದ ಜಾಗದಲ್ಲೇ ಮಂದಿರ ಕಟ್ಟಲಾಗುವುದೆಂದೂ ಸ್ವಾಮಿಗಳು, ಶಂಕರಾಚಾರ್ಯರುಗಳ ಮೂಲಕ ಬಹುಸಂಖ್ಯಾತ ಕೋಮಿನವರಿಗೆ ಆಶ್ವಾಸನೆಯನ್ನು ನೀಡುತ್ತಲೇ ಇದ್ದಾರೆ. ಸಂಘಪರಿವಾರ ಬಯಸುವುದೂ ಇದನ್ನೇ. ತನ್ನ ದೇಶಕ್ಕೆ ನೇತೃತ್ವ ನೀಡಬೇಕಾದ, ದೇಶದ ರಾಜಕಾರಣದ ಜಾತ್ಯಾತೀತ ಸ್ವರೂಪವನ್ನು ರಕ್ಷಿಸಬೇಕಾದ ಒಬ್ಬ ಪ್ರಧಾನಮಂತ್ರಿಗೆ ತಕ್ಕುದಾದ ವರ್ತನೆ [illegible]

ಎಂದಿನಂತೆ ಮತ್ತೆ ಆರ್ಥಿಕ "ಸಾಧನೆ"ಗಳ ಬಗ್ಗೆ ಕೆಂಪುಕೋಟೆ ಭಾಷಣದಲ್ಲಿ ಅವರು ಹೇಳಿಕೊಂಡರು. ಅವು ಶ್ರೀಮಂತರಿಗಷ್ಟೇ ಪ್ರಯೋಜನ ತಂದ ಕ್ರಮಗಳು ಎಂಬುದನ್ನು ಅಲ್ಲಗಳೆದರು. ಈ ಸಂದರ್ಭವನ್ನು ಬಳಸಿಕೊಂಡು ಯುವಜನರಿಗೆ, ಕೃಷಿಕೂಲಿಕಾರರಿಗೆ ಹಾಗೂ ಮಹಿಳೆಯರಿಗೆ ಹೊಸ ವಿಶೇಷ

ಕೇಂದ್ರ ಸಮಿತಿಯ ಬೆಂಗಳೂರು ಸಭೆಯ ನಿರ್ಣಯ

ಪಾಠಕಲಿಯದ ರಾವ್ ಸರಕಾರ

ಬೆಂಗಳೂರಿನಲ್ಲಿ ಆಗಸ್ಟ್ 21-23ರ ವರೆಗೆ ನಡೆದ ಸಿಪಿಐ(ಎಂ) ಕೇಂದ್ರ ಸಮಿತಿಯ ಸಭೆ ದೇಶದ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಆಮೂಲಾಗ್ರ ಚರ್ಚೆ ನಡೆಸಿತು. ಸಭೆಯ ನಂತರ ನೀಡಿರುವ ಹೇಳಿಕೆ ದೇಶವನ್ನು ಬಾಧಿಸುತ್ತಿರುವ ಪ್ರಮುಖ ಪ್ರಶ್ನೆಗಳ ಬಗ್ಗೆ ಸಿಪಿಐ(ಎಂ)ನ ನಿಲುವನ್ನು ಜನಗಳ ಮುಂದಿಟ್ಟಿದೆ. ಆ ಹೇಳಿಕೆಯನ್ನು ಮುಂದೆ ಕೊಡಲಾಗಿದೆ.

ಪ್ರಧಾನ ಮಂತ್ರಿಗಳು ಸಾಮ್ರಾಜ್ಯಶಾಹೀ ಒತ್ತಡಗಳಿಗೆ ಶರಣಾಗುವ, ಭಾರತ ಸ್ವಾವಲಂಬನೆಯ ಸಾಮರ್ಥ್ಯವನ್ನೇ ಹಾಳುಗೆಡಹುವ ಸರಕಾರದ ಆರ್ಥಿಕ ನೀತಿಗಳನ್ನು ನಿರ್ಭಿಡೆಯಿಂದ ಸಮರ್ಥಿಸಿಕೊಳ್ಳುತ್ತಿದ್ದಾರೆ. ಇನ್ನೊಂದು ದೊಡ್ಡ ಪ್ರಮಾಣದ ಸಾಲಕ್ಕಾಗಿ ಸರಕಾರ ಐ.ಎಂ.ಎಫ್ ಜತೆ ಮಾತುಕತೆಯಲ್ಲಿ ತೊಡಗಿದೆ. ಸಾರ್ವಜನಿಕ ವಲಯದ ಶೇರುಗಳನ್ನು ಅತ್ಯಂತ ಕಮ್ಮಿ ದರದಲ್ಲಿ ಮಾರಿದ ಹಗರಣ ನಡೆದಿದ್ದರೂ ಸಾರ್ವಜನಿಕ ವಲಯದ ಶೇರುಗಳನ್ನು ಮಾರಾಟ ಮಾಡಲು ಅದು ಟೊಂಕಕಟ್ಟಿ ನಿಂತಿದೆ.

ಲೋಕಸಭೆಯಲ್ಲಿ ಅವಿಶ್ವಾಸ ಠರಾವಿನ ಮೇಲೆ ಹಾಗೂ ಸ್ವಾತಂತ್ರ್ಯದಿನದಂದು ಪ್ರಧಾನಮಂತ್ರಿಗಳು ಮಾಡಿದ ಭಾಷಣ ನೋಡಿದರೆ ಅವರು ಅನುಭವದಿಂದ ಯಾವುದೇ ಪಾಠ ಕಲಿತಿಲ್ಲ. ಈ ಧೋರಣೆಗಳನ್ನು ಬದಲಿಸಲು ಸಿದ್ಧರಿಲ್ಲ, ಎಂಬುದು ಕಾಣಬರುತ್ತದೆ. ಅಯೋಧ್ಯೆಯಲ್ಲಿ ವಿವಾದಗ್ರಸ್ತ ಸ್ಥಳದಲ್ಲಿ ದೇವಸ್ಥಾನ ಕಟ್ಟುವಲ್ಲಿ ಬಿಜೆಪಿ, ವಿ.ಹೆಚ್.ಪಿ.ಯೊಂದಿಗೆ ಸ್ಪರ್ಧೆಗಿಳಿಯುವ ಅಪಾಯಕಾರೀ ನೀತಿಯನ್ನು ಮುಂದುವರಿಸುತ್ತಲೇ ಇದ್ದಾರೆ. "ಸೋಮಯಜ್ಞ" ಶಂಕರಾಚಾರ್ಯರುಗಳ ಪ್ರವೇಶ ಇವೆಲ್ಲ ನರಸಿಂಹರಾವ್ ಸರಕಾರ ಜಾತ್ಯಾತೀತತೆಯ ರಕ್ಷಣೆಗೆ ಕಟಿಬದ್ಧ ನಿಲುವು ತಳೆಯುವ ಬದಲು ಕೋಮುವಾದೀ ನೆಲೆಗೆ ಒಂದು ಗೌರವ ತಂದು ಕೊಡುವುದೇ ವಾಸಿ ಎಂದು ಭಾವಿಸುತ್ತಿದೆಯೇನೋ ಎಂಬ ಶಂಕೆ ಮೂಡಿಸಿದೆ.

ಬೆಲೆಯೇರಿಕೆಯಿಂದ ಜನಗಳ ಸಂಕಟಗಳ ಬಗ್ಗೆ ರಾವ್ ಸರಕಾರ ಅತ್ಯಂತ ನಿರ್ಲಕ್ಷ್ಯ ತೋರಿದೆ. ಹಣದುಬ್ಬರ ಇಳಿದಿದೆ ಎಂಬ ಅಪಪ್ರಚಾರ ನಡೆಸುತ್ತಲೇ ಇದೆ.

ಹಗರಣಗಳ ಸಾಲು-ಸಾಲು

ಸ್ವಾತಂತ್ರ್ಯದ ನಂತರ ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರದ ಆಪಾದನೆಗಳ ಕೆಸರು ಮೆತ್ತಿಕೊಂಡ ಸರಕಾರ ಬೇರೊಂದಿಲ್ಲ ಜಂಟಿ ಸಂಸದೀಯ ಸಮಿತಿ ತನಿಖೆ ನಡೆಸುತ್ತಿರುವ ಶೇರು ಹಗರಣ ಸಾರ್ವಜನಿಕ ವಲಯದ ಶೇರು ಮಾರಾಟದ ಹಗರಣ, ಬೋಫೋರ್ಸ್ ಲಂಚವನ್ನು ಮುಚ್ಚಿ ಹಾಕಲು ಸತತವಾಗಿ ನಡೆಯುತ್ತಿರುವ ಪ್ರಯತ್ನ- ಇವುಗಳ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿಗಳೇ ಹಣ ಪಡೆದಿರುವ ಆಪಾದನೆಯನ್ನು ನೇರವಾಗಿ ಹಾಕಲಾಗಿದೆ. ಈ ವಿಷಯದಲ್ಲಿ ಒಂದು ನಿಷ್ಪಕ್ಷಪಾತ ವಿಚಾರಣೆ ನಡೆಯಬೇಕಾದರೆ ಪ್ರಧಾನಿಗಳು ಕೆಳಗಿಳಿದು ತಮ್ಮ ಹೆಸರಿಗೆ ಬಳಿದಿರುವ ಮಸಿಯನ್ನು ತೊಡೆಯಲು ಜಂಟಿ ಸಂಸದೀಯ ಸಮಿತಿಯ ಮುಂದೆ ಹಾಜರಾಗುವುದೇ ಏಕೈಕ ಮಾರ್ಗ ಎಂದು ಕೇಂದ್ರ ಸಮಿತಿ ಮತ್ತೊಮ್ಮೆ ಒತ್ತಿ ಹೇಳಿದೆ.

ಬಹಳ ದಿನ ಉಳಿಯಲಾರದ ಸರಕಾರ

ಬಿಜೆಪಿ ಮತ್ತು ಕೋಮುವಾದಿ ಶಕ್ತಿಗಳೊಂದಿಗೆ ರಾಜಿ ಮತ್ತು ಸ್ಪರ್ಧೆಯ ನೀತಿಗಳು, ಆರ್ಥಿಕ ನೀತಿಗಳ ಹೊಡೆತದಿಂದಾಗಿ ದೊಡ್ಡ ಪ್ರಮಾಣದಲ್ಲಿ ಕ್ಲೋಶರ್ ನಿರುದ್ಯೋಗ ಸಾರ್ವಜನಿಕ ನಿಧಿಗಳ ಲೂಟಿ ಹಾಗೂ ಕಾಶ್ಮೀರದಲ್ಲಾಗಿರುವಂತೆ ರಾಷ್ಟ್ರೀಯ ಐಕ್ಯತೆಯನ್ನು ರಕ್ಷಿಸುವಲ್ಲಿ ವಿಫಲತೆ- ಇವೆಲ್ಲಾ ರಾವ್ ಸರಕಾರ ಕೆಲವು ಪಕ್ಷಾಂತರಿಗಳ ಬೆಂಬಲದಿಂದ ಅವಿಶ್ವಾಸ ಠರಾವಿನಿಂದ ಹೇಗೋ ಬದುಕಿಳಿದರೆ ದೇಶದ ಹಿತಾಸಕ್ತಿಗಳನ್ನು ಕಾಪಾಡಲು ಅದಕ್ಕೆ ಸಾಧ್ಯವಿಲ್ಲ ಎಂಬುದನ್ನು ಸೂಚಿಸುತ್ತವೆ. ಪ್ರಸ್ತುತ ನೀತಿಗಳನ್ನೇ ಮುಂದುವರಿಸುತ್ತಿರುವ ಈ ಸರಕಾರ ಬಹಳ ದಿನ ಉಳಿಯಲಾರದು.

ಸಿಪಿಐ(ಎಂ) ಕೇಂದ್ರ ಸಮಿತಿ ಈ ಎಲ್ಲಾ ನೀತಿಗಳ ವಿರುದ್ಧ ದೃಢ ಹೋರಾಟ ನಡೆಸಲು, ಈ ಹೋರಾಟದಲ್ಲಿ ಎಲ್ಲಾ ಎಡ ಮತ್ತು ಜಾತ್ಯಾತೀತ ವಿರೋಧಿ ಶಕ್ತಿಗಳನ್ನು ಒಂದು ಗೂಡಿಸಲು ನಿರ್ಧರಿಸಿದೆ.

ಭಾರತ್ ಬಂದ್- ಒಂದು ಪ್ರಮುಖ ಮೈಲಿಗಲ್ಲು

ಆಗಸ್ಟ್ 19 ರಂದು ದೇಶಾದ್ಯಂತ ಹತ್ತು ಲಕ್ಷಕ್ಕೂ ಹೆಚ್ಚು ಮಂದಿ ಸಾಮೂಹಿಕ ಸಂಘಟನೆಗಳ ವೇದಿಕೆಯ ಕರೆ ಮೇರೆಗೆ 'ಜೈಲ್‌ಭರೋ' ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಇವರೆಲ್ಲರನ್ನು ಕೇಂದ್ರ ಸಮಿತಿ ಹಾರ್ದಿಕವಾಗಿ ಅಭಿನಂದಿಸಿದೆ. ಹಲವು ಕೇಂದ್ರಗಳಲ್ಲಿ ಈ ಹೋರಾಟವನ್ನು ದಮನ ಮಾಡುವ ಪೋಲೀಸ್ ಕಾರ್ಯಾಚರಣೆಯನ್ನು ಅದು ತೀವ್ರವಾಗಿ ಖಂಡಿಸಿದೆ.

ಇದು ಸಪ್ಟೆಂಬರ್ 9ರ ಭಾರತ್ ಬಂದ್ ಕರೆಗೆ ಪೂರ್ವಭಾವಿಯಾಗಿ ನಡೆದಿರುವ ಆಂದೋಲನ ಸಾಮೂಹಿಕ ಸಂಘಟನೆಗಳು ನೀಡಿರುವ ಈ ಕರೆಗೆ ಬೆಂಬಲವಾಗಿ ಇಡೀ ಪಕ್ಷವನ್ನು ಅಣಿನೆರೆಸಲು ಕೇಂದ್ರ ಸಮಿತಿ ನಿರ್ಧರಿಸಿದೆ. ಪಕ್ಷದ ಎಲ್ಲಾ ಘಟಕಗಳು ಈ ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಭರದ ಸಿದ್ಧತೆ ನಡೆಸಬೇಕು. ಅದನ್ನು ಸಂಪೂರ್ಣ ಯಶಸ್ವಿಗೊಳಿಸಬೇಕು. ಇದು ಆರ್ಥಿಕ ಧೋರಣೆಗಳನ್ನು ಬದಲಿಸುವ ಹೋರಾಟದಲ್ಲಿ ಒಂದು ಪ್ರಮುಖ ಮೈಲುಗಲ್ಲಾಗಲಿದೆ.

ಅಮೇರಿಕಾ ಸೊಕ್ಕಿನೆದುರು ಹಲ್ಲುಗಿಂಜುವ ರಾವ್ ಸರಕಾರ

ಭಾರತ ತನ್ನ ಸ್ವತಂತ್ರ ವೈಜ್ಞಾನಿಕ-ತಂತ್ರಜ್ಞಾನ ಅಭಿವೃದ್ಧಿಯನ್ನು ಮುಂದುವರಿಸಿಕೊಂಡು ಹೋಗುವುದನ್ನು ಹಾಗೂ ತನ್ನ ಭದ್ರತಾ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದನ್ನು ತಡೆಯಲು ಭಾರತ ಸರಕಾರದ ಮೇಲೆ ಅಮೇರಿಕಾ ಒತ್ತಡ ಹಾಕುತ್ತದೆ ಎಂದು ಕೇಂದ್ರ ಸಮಿತಿ ಬಲವಾಗಿ ಖಂಡಿಸಿದೆ. ರಶ್ಯಾ ಕ್ರಯೋಜೆನಿಕ್ ರಾಕೆಟ್ ಇಂಜಿನ್ ಮಾರಾಟವನ್ನು ರದ್ದುಪಡಿಸಿದುದು ಕೇವಲ ಕ್ಲಿಂಟನ್ ಆಡಳಿತ ಹೇರಿದ ಒತ್ತಡಗಳಿಂದಾಗಿಯೇ. ಆದರೆ ನರಸಿಂಹರಾವ್ ಸರಕಾರ ಅತೀ ಮೆದು ಮಾತಿನಲ್ಲಿ ಕೂಡಾ ಈ ಅಮೇರಿಕನ್ ಒತ್ತಡಗಳನ್ನು ಟೀಕಿಸಿಲ್ಲ ಎಂಬುದು ನಾಚಿಕೆಗೇಡಿನ ಸಂಗತಿ. ತಾನೂ ಏನು ಬಯಸುತ್ತೇನೆ ಎಂಬುದನ್ನು ನಮೂದಿಸಿರುವ ಒಂದು ರಾಜತಾಂತ್ರಿಕ ಟಿಪ್ಪಣಿಯನ್ನು ಅದನ್ನು ನಿರಾಕರಿಸಲು ಅವಕಾಶವೇ ಇಲ್ಲದ ರೀತಿಯಲ್ಲಿ ಭಾರತ ಸರಕಾರಕ್ಕೆ ಕೊಡುವ ಸೊಕ್ಕನ್ನು ಅಮೇರಿಕಾ ತೋರಿದೆ. ಅಣು ಪ್ರಸರಣ-ನಿಷೇಧ ವ್ಯವಸ್ಥೆಯನ್ನು ಒಪ್ಪಿಕೊಳ್ಳಬೇಕು, ಅಗ್ನಿ ಕ್ಷಿಪಣಿ ಪರೀಕ್ಷೆಗೆ ನಿಲ್ಲಿಸಬೇಕು, ಫಾಸ್ಟ್ ಬ್ರೇಕರ್ ಅಣು ಉರುವಲು ಉತ್ಪಾದನೆಯನ್ನು ನಿಲ್ಲಿಸಬೇಕು ಎಂದು ಆ ಟಿಪ್ಪಣಿ ಭಾರತವನ್ನು ಒತ್ತಾಯಿಸಿತ್ತು. ಆರ್ಥಿಕ ರಂಗದಲ್ಲಿ ಸಾಮ್ರಾಜ್ಯಶಾಹೀ ಒತ್ತಡಗಳಿಗೆ ತಲೆಬಾಗಿದ ನರಸಿಂಹರಾವ್ ಸರಕಾರಕ್ಕೆ ದೇಶದ ಜೀವನ್ಮರಣ ರಾಷ್ಟ್ರೀಯ ಹಾಗೂ ಭದ್ರತಾ ಹಿತಾಸಕ್ತಿಗಳನ್ನು ಕಾಪಾಡಲು ಎದ್ದು ನಿಲ್ಲುವ ಸಾಮರ್ಥ್ಯವೇ ಉಡುಗಿ ಹೋಗಿದೆ.

ಈ ಸಾಮ್ರಾಜ್ಯಶಾಹೀ ಬೆದರಿಕೆಗಳ ವಿರುದ್ಧ ಜನಗಳನ್ನು ಜಾಗೃತಗೊಳಿಸಿ ಈ ಒತ್ತಡಗಳೆದುರು ಹಲ್ಲುಗಿಂಜುವ ರಾವ್ ಸರಕಾರದ ನಿಲುವನ್ನು ಬಯಲಿಗೆಳೆಯಿರಿ ಎಂದು ಕೇಂದ್ರ ಸಮಿತಿ ಎಲ್ಲಾ ದೇಶ[illegible] ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಕರೆ ನೀಡಿದೆ.

ಬಜೆಪಿಯೂ ಆಳುವ ವರ್ಗಗಳ ಪ್ರತಿನಿಧಿ

ವಿ.ಹೆಚ್.ಪಿ. ಮತ್ತು ಆರ್.ಎಸ್.ಎಸ್. ದೇವಸ್ಥಾನ ಪ್ರಶ್ನೆಯೇ ಮೇಲೆ ತಮ್ಮ ಚಳುವಳಿಯನ್ನು ಮತ್ತೆ ಆರಂಭಿಸುವ ಯೋಜನೆ ಹಾಕುತ್ತಿದ್ದಾರೆ ಎಂಬುದನ್ನು ಕೇಂದ್ರ ಸಮಿತಿ ಗಮನಿಸಿತು. ಅಕ್ಟೋಬರ್ 24 ರೊಳಗೆ ಅಯೋಧ್ಯೆಯಲ್ಲಿ ವಿವಾದಗ್ರಸ್ತ ಸ್ಥಳವನ್ನು ದೇವಸ್ಥಾನ ಕಟ್ಟುವ ತಮ್ಮ ಟ್ರಸ್ಟ್‌ಗೆ ವಹಿಸಿಕೊಡಬೇಕೆಂಬ ಗಡುವನ್ನು ಅವು ಸರಕಾರಕ್ಕೆ ಕೊಟ್ಟಿವೆ. ಇತ್ತೀಚಿನ ಒಂದು ಅಪಾಯಕಾರಿ ಬೆಳವಣಿಗೆಯೆಂದರೆ "ಬಾಂಗ್ಲಾ ದೇಶದಿಂದ ನುಸುಳಿ ಬಂದವರನ್ನು' ' ಒಂದೂಡಲು ಕೋಮುವಾದಿ ವಿಚಾರಗಳ ಆಧಾರದಲ್ಲಿ ಸಂಘಟಿತರಾಗಿರುವ "ಸಾಧುಗಳ" ನೇರವಾಗಿ ಚಳುವಳಿ ನಡೆಸುವ ನಿರ್ಧಾರ. ಅಯೋಧ್ಯೆಯ ನಂತರ ವಾರಾಣಾಸಿ, ಮಥುರಾ ತಮ್ಮ ಮುಂದಿನ ಗುರಿಗಳು ಎಂದು ಆರ್.ಎಸ್.ಎಸ್. ಹಾಗೂ ವಿ.ಹೆಚ್.ಪಿ. ಎರಡೂ ಸ್ಪಷ್ಟಪಡಿಸಿವೆ.

ಬಿಜೆಪಿ ಒಂದು ಕಡೆ ಈ ವಿಚ್ಛಿದ್ರಕಾರಿ ಚಟುವಟಿಕೆಗಳಿಗೆ ಪೂರ್ಣ ಬೆಂಬಲ ಕೊಡುತ್ತಾ ಇನ್ನೊಂದು ಕಡೆ ನಾಚಿಕೆಯಿಲ್ಲದೆ ಸರಕಾರದ ಆರ್ಥಿಕ ನೀತಿಗಳನ್ನು ಮೂಲತಃ ಬೆಂಬಲಿಸುತ್ತಿದೆ. ಉದಾರೀಕರಣಕ್ಕೆ ಬಿಜೆಪಿ ಮುಖಂಡರು ಮತ್ತೆ-ಮ

ಯೋಜನೆಗಳನ್ನು ಪ್ರಕಟಿಸಿಪಡಿಸಿದರು.

ಮಹಿಳೆಯರು ಬ್ಯಾಂಕ್ ಖಾತೆ ತೆರೆದು 300 ಉಳಿಸಿದರೆ ಸರಕಾರ 75 ರೂ. ನೀಡುತ್ತದೆ. ಎಂದರು. ಇದಕ್ಕೆ 1000 ಕೋಟಿ ರೂ. ತೆಗೆದಿಡುವ ಆಶ್ವಾಸನೆ ನೀಡಿದರು. ಇಬ್ಬರು ನಿರುದ್ಯೋಗಿ ವಿದ್ಯಾವಂತ ಯುವಕರು ಒಟ್ಟು ಸೇರಿದರೆ ಒಂದು ಉದ್ದಿಮೆ ತೆರೆಯಲು ತರಬೇತಿ ಹಾಗೂ ಒಂದುಲಕ್ಷರೂವರೆಗೆ ಸಹಾಯ ನೀಡುವುದಾಗಿ ಹೇಳಿದರು. ಕೃಷಿಕೂಲಿಕಾರರಿಗೆ ಕೆಲಸವಿಲ್ಲದ ಅವಧಿಯಲ್ಲಿ ನೂರು ದಿನಗಳ ಕೆಲಸ ಕೊಡಿಸುವ ಭರವಸೆ ನೀಡಿದರು.

ಕಿವುಡು-ಹಠಮಾರಿ ಸರ್ಕಾರ

ಆದರೆ ಈ ಯೋಜನೆಗಳಲ್ಲಿ ಹೊಸದೇನಿಲ್ಲ ಎಂದು ಯಾರಿಗೆ ತಾನೇ ತಿಳಿದಿಲ್ಲ? ಇಂತಹ ಯೋಜನೆಗಳಲ್ಲಿ ಕೇವಲ 15 ಶೇ. ಮಾತ್ರ ಅಗತ್ಯವುಳ್ಳವರಿಗೆ ತಲುಪುತ್ತವೆ, ಉಳಿದವೆಲ್ಲಾ ಸೋರಿಹೋಗುತ್ತದೆ ಎಂದು ರಾಜೀವ್‌ಗಾಂಧಿಯವರೇ ಹೇಳಿರುವುದು ಎಲ್ಲರಿಗೂ ತಿಳಿದಿದೆ. 1991 ರಿಂದಲೂ ಸಂಸತ್ತಿನ ಮುಂದಿರುವ ಕೃಷಿ ಕೂಲಿಕಾರರಿಗೆ ಸಂಬಂಧಪಟ್ಟ ಮಸೂದೆಯನ್ನು ಪಾಸು ಮಾಡಲು ರಾಯರು ಈಗಲೂ ನಿರಾಕರಿಸುತ್ತಿರುವುದು ಆಶ್ಚರ್ಯವಲ್ಲವೇ? ಕಾರಣವಿಷ್ಟೇ ಈ ಶಾಸನ ಜಾರಿಗೆ ಬಂದರೆ ಅದರಿಂದ ಕೃಷಿ ಕೂಲಿಗಾರರು ಸಂಘಟಿತರಾಗಿ ಹೆಚ್ಚಿನ ಕೂಲಿಗಾಗಿ, ಸೌಲಭ್ಯಗಳಿಗಾಗಿ ಹೋರಾಡುತ್ತಾರಲ್ಲ!

ರಾಯರು ಭೂ ವಿತರಣೆ ಬಗ್ಗೆಯೂ ಮಾತಾಡಲಿಲ್ಲ. ವಾಸ್ತವವಾಗಿ ಮಹಾರಾಷ್ಟ್ರದ ಮುಖ್ಯಮಂತ್ರಿ ಶರದ್‌ಪವಾರ್ ಭೂಮಿತಿಯನ್ನು ತೆಗೆದುಹಾಕಬೇಕೆಂದು ನಿರ್ಧರಿಸಿಯೇ ಬಿಟ್ಟಿದ್ದಾರೆ-ಬಹುರಾಷ್ಟ್ರೀಯ ಕಂಪೆನಿಗಳಿಗೆ ದೇಶೀ ಬಂಡವಾಳಶಾಹೀಗಳಿಗೆ ಅನುಕೂಲವಾಗಲೆಂದು! ಆಗಲೇ ಆ ರಾಜ್ಯದಲ್ಲಿ ಈ ನಿರ್ಧಾರದ ವಿರುದ್ಧ ಚಳುವಳಿಯೂ ಆರಂಭವಾಗಿದೆ. ಆದರೆ ಪ್ರಧಾನ ಮಂತ್ರಿಗಳು, ಕಾಂಗ್ರೆಸ್(ಐ) ನ ಅಧ್ಯಕ್ಷರು ಈ ಬಗ್ಗೆ ಚಕಾರವೆತ್ತಿಲ್ಲ. ನರಸಿಂಹರಾಯರೇ ಸ್ವತಃಭೂಮಿತಿಗೆ ಮೀರಿದ ಸ್ವಲ್ಪ ಹೆಚ್ಚುವರಿ ಭೂಮಿಯನ್ನು ಅಡಗಿಸಿಟ್ಟುಕೊಂಡಿದ್ದಾರೆ ಎಂಬುದೂ ಬಹುಮಂದಿಗೆ ತಿಳಿದಿರುವ ಸಂಗತಿ.

ಈ ಸರಕಾರ ಜನಗಳ ಪ್ರಜಾಪ್ರಭುತ್ವ ಶಕ್ತಿಗಳ ಬಲವಾದ ವಿರೋಧಗಳನ್ನು ಲೆಕ್ಕಿಸದೆ ಭಾರೀ ಬೆಲೆ ತೆರಬೇಕಾಗಿ ಬಂದಿರುವ ಅನುಭವವನ್ನೂ ಲೆಕ್ಕಕ್ಕೆ ತಗೊಳ್ಳದೆ ಐ.ಎಂ.ಎಫ್- ಹಠಮಾರಿತನವನ್ನು ಮುಂದುವರಿಸುತ್ತದೆ. ಭೂ ಸುಧಾರಣೆ ಮತ್ತಿತರ ಕ್ರಮಗಳ ಮೂಲಕ ದೇಶದ ಸಾಮಾಜಿಕ ರಚನೆಯನ್ನು ಬದಲಿಸಿ ದಲಿತ ಬಡವರಿಗೆ ಪರಿಹಾರ ನೀಡುವ ಯೋಚನೆಯಲ್ಲೂ ಈ ಸರಕಾರ ಇಲ್ಲ ಎಂಬುದು ಸ್ಪಷ್ಟ. ಅಭಿವೃದ್ಧಿಯಲ್ಲಿನ ತಾರತಮ್ಯವನ್ನು ಅಸಮಾನತೆಯನ್ನು ಪರಿಹರಿಸುವ ಉದ್ದೇಶ ಕೂಡಾ ಈ ಸರಕಾರಕ್ಕೆ ಇದ್ದಂತಿಲ್ಲ.

ಆದ್ದರಿಂದ ಕಾರ್ಮಿಕ ವರ್ಗದ, ಶ್ರಮಜೀವಿ ಜನ ವಿಭಾಗಗಳ ಹಿತಾಸಕ್ತಿಗಳನ್ನು ಕಾಪಾಡುವ, ಐಕ್ಯತೆ ಹಾಗೂ ಆರ್ಥಿಕ ಸಾರ್ವಭೌಮತ್ವವನ್ನು ಕಾಪಾಡುವ ಹೋರಾಟಗಳನ್ನು ಮುಂದುವರಿಸಬೇಕಾಗಿದೆ. ಈ ಜನ-ವಿರೋಧಿ, ದೇಶ ವಿರೋಧಿ ನೀತಿಗಳನ್ನು ಸೋಲಿಸುವವರೆಗೂ ಮುಂದುವರಿಸಬೇಕಾಗಿದೆ.

ಇಲ್ಲಿ ಕಾಂಗ್ರೆಸ್ಸಿಗರಿಗೆ ಒಂದು ಕಿವಿಮಾತು ನಮ್ಮ ಜನ ಬ್ರಿಟಿಷ್ ಆಳ್ವಿಕೆಯ ವಿರುದ್ಧ ಯಾವ ಮೌಲ್ಯಗಳಿಗಾಗಿ ಹೋರಾಡಿದರೋ ಅವುಗಳಿಗೀಗ ಬೆದರಿಕೆ ಬಂದಿದೆ, ದೇಶದ ಐಕ್ಯತೆ ಮತ್ತು ಆರ್ಥಿಕ ಸಾರ್ವಭೌಮತೆಗೆ ನಿಜವಾದ ಅಪಾಯ ಬಂದಿದೆ ಎಂದು ನಂಬಿರುವವರು ಈಗಲೂ ಕಾಂಗ್ರೆಸ್ಸಿನಲ್ಲಿ ಬಹಳ ಮಂದಿ ಇದ್ದಾರೆ. ಈಗಿನ ಪರಿಸ್ಥಿತಿಯ ವಿರುದ್ಧ ದನಿಯೆತ್ತುವುದು ಅವರ ಪರಮ ಕರ್ತವ್ಯ ಮಾತ್ರವೇ ಅಲ್ಲ, ಅವರ ರಾಜಕೀಯ ಉಳಿವಿಗೂ ಇದು ಅನಿವಾರ್ಯ.

ದಂಬಲ ಘೋಷಿಸಿದ್ದಾರೆ. ಆದರೆ ಜನಗಳನ್ನು ವಂಚಿಸಲು ಈ ಉದಾರೀಕರಣದ ಪರಿಣಾಮಗಳನ್ನು ಮಾತ್ರವೇ ವಿರೋಧಿಸುತ್ತಿದ್ದಾರೆ. ದೇಶದ ದೊಡ್ಡ ಬಂಡವಾಳಿಗರು, ವ್ಯಾಪಾರಸ್ಥರು ಹಾಗೂ ಭೂಮಾಲಕ ಪರವಾಗಿರುವ ಬಿಜೆಪಿಯ ಪ್ರತಿಗಾಮಿ ಧೋರಣೆಗಳನ್ನು ಬಯಲಿಗೆಳೆಯಲು ಸಿಪಿಐ(ಎಂ) ಕೇಂದ್ರ ಸಮಿತಿ ನಿರ್ಧರಿಸಿದೆ.

ರಾಜಕೀಯದಲ್ಲಿ ಧರ್ಮ ಶಾಸನ ಅಗತ್ಯ

ಧರ್ಮವನ್ನು ಮತ್ತು ರಾಜಕೀಯವನ್ನು ಬೇರ್ಪಡಿಸುವ ಸಂವಿಧಾನಾತ್ಮಕ ಹಾಗೂ ಶಾಸನಾತ್ಮಕ ಕ್ರಮಗಳು ಅಗತ್ಯ ಎಂದು ಕೇಂದ್ರ ಸಮಿತಿ ಒತ್ತಿ ಹೇಳಿದೆ. ಸಂಸತ್ತಿನ ಸೆಲೆಕ್ಟ್ ಕಮಿಟಿ ಅಂತಿಮಗೊಳಿಸಿರುವ ಎರಡು ಮಸೂದೆಗಳಲ್ಲಿ ಸರಕಾರ ಈ ಸಂಸತ್ ಅಧಿವೇಶನದ ಮುನ್ನಾದಿನ ಆತುರಾತುರವಾಗಿ ತಯಾರಿಸಿದ ಕರಡುಗಳಲ್ಲಿದ್ದ ಸ್ವೇಚ್ಛಾಚಾರಕ್ಕೆ ಎಡೆಮಾಡಿಕೊಡುವ ಹಾಗೂ ಸರಿಯಾಗಿ ರೂಪಿಸಿರದ ಹಲವು ಅಂಶಗಳನ್ನು ತೆಗೆಯಲಾಗಿದೆ. ಈ ಮಸೂದೆಗಳಲ್ಲಿರುವ ಮುಖ್ಯ ದಿಕ್ಕನ್ನು ಅಳವಡಿಸಿಕೊಂಡ ಶಾಸನವನ್ನು ಅಂಗೀಕರಿಸುವುದು ನಮ್ಮ ಪ್ರಭುತ್ವದ ಜಾತ್ಯಾತೀತ ನೀತಿಗಳನ್ನು ರಕ್ಷಿಸಿಕೊಳ್ಳಲು ಅತ್ಯಗತ್ಯ ಎಂದು ಸಿಪಿಐ(ಎಂ) ಭಾವಿಸುತ್ತದೆ. ಆದರೆ ಮತದಾನದ ದಿನಕ್ಕಿಂತ ಮೊದಲೇ ಅಭ್ಯರ್ಥಿ ಅನರ್ಹಗೊಳಿಸುವ ಪ್ರಶ್ನೆಯ ಬಗ್ಗೆ ಕೆಲವು ಸಕಾರಣವಾದ ಸಂದೇಹಗಳೂ ಇವೆ. ಜಾತ್ಯಾತೀತ ಶಕ್ತಿಗಳ ನಡುವೆ ಈ ಬಗ್ಗೆ ಚರ್ಚೆ ನಡೆಸಿ ಬಗೆಹರಿಸಿಕೊಂಡು ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಹಲ್ಲೆ ನಡೆಸಲು ಯಾವುದೇ ಅವಕಾಶ ಇಲ್ಲದಂತೆ ಮಾಡಬೇಕಾಗಿದೆ. ಆದರೆ ಕೋಮುವಾದವನ್ನು ಎದುರಿಸುವ ಕ್ರಮಗಳು ಧರ್ಮ ಹಾಗೂ ರಾಜಕೀಯವನ್ನು ಪ್ರತ್ಯೇಕಿಸುವ ಶಾಸನ ಯಶಸ್ವಿಯಾಗಿ ಜಾರಿಯಾಗಬೇಕಾದರೆ ಜಾತ್ಯಾತೀತ ಮೌಲ್ಯಗಳ ರಕ್ಷಣೆಗೆ ಜನಗಳನ್ನು ಅಣಿನೆರೆಸುವುದು ಅವರ ಪ್ರಜ್ಞೆಯನ್ನು ಜಾಗೃತಗೊಳಿಸುವುದು ಅತ್ಯಗತ್ಯ. ಕೇವಲ ಶಾಸನವೊಂದರಿಂದಲೇ ಇದು ಸಾಧ್ಯವಾಗದು.

ಬಹುಸಂಖ್ಯಾ ಚುನಾವಣೆ ಆಯೋಗ -ಇನ್ನು ವಿಳಂಬ ಬೇಡ

ಇತ್ತೀಚೆಗೆ ಎಲ್ಲಾ ಚುನಾವಣೆಗಳನ್ನು ಮುಂದೂಡುವ ಆಜ್ಞೆಯೂ ಸೇರಿದಂತೆ ಮುಖ್ಯ ಚುನಾವಣಾ ಆಯುಕ್ತರ ಸ್ವೇಚ್ಛಾಚಾರದ ಕ್ರಮಗಳನ್ನು ವಿಮರ್ಶಿಸಿದ ಕೇಂದ್ರ ಸಮಿತಿ ಬಹುಸದಸ್ಯ ಚುನಾವಣಾ ಆಯೋಗವನ್ನು ರಚಿಸಬೇಕೆಂಬ ತನ್ನ ಒತ್ತಾಯವನ್ನು ಪುನರುಚ್ಚರಿಸಿತು. ಈ ರೀತಿಯ ಪುನರ್ರಚನೆಯಲ್ಲಿ ಇನ್ನು ವಿಳಂಬ ಸಲ್ಲದು ಇಲ್ಲವಾದರೆ ಚುನಾವಣಾ ಆಯೋಗದಂತಹ ಮಹತ್ವದ ಸಂಸ್ಥೆಯನ್ನು ರಕ್ಷಿಸಲು, ಅದರ ವಿಶ್ವಾಸಾರ್ಹತೆಯನ್ನು ಮತ್ತೆ ಸ್ಥಾಪಿಸಲು ಸಾಧ್ಯವಾಗುವುದಿಲ್ಲ.


ಅನಾಹುತಗಳ ಚಕ್ರದಿಂದ ಶಾಶ್ವತ ಪರಿಹಾರ ಅಗತ್ಯ

ಪಂಜಾಬ್, ತ್ರಿಪುರಾ, ಅಸ್ಸಾಂ, ಪಶ್ಚಿಮಬಂಗಾಳ ಮತ್ತು ಬಿಹಾರದಲ್ಲಿ ಪ್ರವಾಹ ಪೀಡಿತ ಜನತೆಗೆ ತನ್ನ ಆಳವಾದ ಸಹಾನುಭೂತಿಯನ್ನು ಕೇಂದ್ರ ಸಮಿತಿ ವ್ಯಕ್ತಪಡಿಸಿತು. ಇದರಿಂದಾದ ಅನಾಹುತಗಳ ನಷ್ಟದ ಪ್ರಮಾಣವನ್ನು ನೋಡಿದರೆ ಕೇಂದ್ರ ಸರಕಾರ ಸಂಬಂಧಪಟ್ಟ ರಾಜ್ಯಗಳಿಗೆ ಸಾಕಷ್ಟು ನೆರವು ಒದಗಿಸುವಲ್ಲಿ ವಿಫಲವಾಗಿದೆ. ಈ ಪಕ್ಷಪಾತ ನೀತಿಯ ಪ್ರಮುಖ ಗುರಿ ತ್ರಿಪುರಾ ರಾಜ್ಯ ಅನಾಹುತ ನಿಧಿಗಳಿಂದ ಅದಕ್ಕೆ ಬರತಕ್ಕ ಹಣ ಬಿಟ್ಟರೆ ಬೇರೇನೂ ಹಣವನ್ನು ಆ ರಾಜ್ಯಕ್ಕೆ ಒದಗಿಸಿಲ್ಲ. ಮತ್ತೆ‌ಮತ್ತೆ ಬರುವ ಪ್ರವಾಹಗಳ ಈ ಸಮಸ್ಯೆಯನ್ನು ಪರಿಹರಿ

ಪು/೮ ಕ್ಕೆ

ಬಹುರಾಷ್ಟ್ರೀಯ ಕಂಪನಿಗಳ ನಿಘಂಟಿನಲ್ಲಿ ಮನುಷ್ಯತ್ವಕ್ಕೆ ಅರ್ಥವಿಲ್ಲ

-- ಜಿ.ಎಸ್. ಮಣಿ



ನರಸಿಂಹರಾವ್ ಸರಕಾರದ 26ನೇ ತಿಂಗಳಲ್ಲಿ

ಉದಾರೀಕರಣದ ಫಲವಾಗಿ ದೇಶದೊಳಗೆ ಬರಲಿರುವ ಬಹುರಾಷ್ಟ್ರೀಯ ಕಂಪನಿಗಳು ಎಂತಹ ದುರಹಂಕಾರ ಮತ್ತು ಅಮಾನವೀಯ ಗುಣಗಳವು ಎಂಬುದಕ್ಕೆ ಒಂದು ಪುಟ್ಟ ಉದಾಹರಣೆ ಯೂನಿಯನ್ ಕಾರ್ಬೈಡ್ ಕಾರ್ಪೋರೇಷನ್ ನೀಡುತ್ತದೆ. ಭೂಪಾಲದಲ್ಲಿ 1984 ರ ಅನಿಲ ದುರಂತಕ್ಕೆ ಕಾರಣವಾದ ಈ ಬಹುರಾಷ್ಟ್ರೀಯ ಕಂಪನಿಗೆ ಭಾರತದ ಸರ್ವೋಚ್ಚ ನ್ಯಾಯಾಲಯ ಭೂಪಾಲದಲ್ಲಿ ಒಂದು ಆಸ್ಪತ್ರೆ ಕಟ್ಟಿಸುವಂತೆ ಆದೇಶ ನೀಡಿತ್ತು. ಈ ಆದೇಶ ನೀಡಿ ಎರಡು ವರ್ಷಗಳಾದರೂ ಈ ಕಂಪನಿ ಆಸ್ಪತ್ರೆ ಕಟ್ಟಿಸುವ ಗೊಡವೆಗೆ ಹೋಗಿಲ್ಲ. ಅದಕ್ಕೆ ಅವಶ್ಯವಿರುವ ಹಣವನ್ನು ತರುವ ತೊಂದರೆಯನ್ನು ಅದು ತೆಗೆದುಕೊಂಡಿಲ್ಲ.

ಭಾರತ ಸರ್ಕಾರದ ಜೊತೆಗೆ ಚರ್ಚೆ ನಡೆಸಿದ್ದೇವೆ ನಮಗೆ ಆಸ್ಪತ್ರೆ ಕಟ್ಟಿಸುವಲ್ಲಿ ಯಾವುದೇ ಓಂಜರಿಕೆಯಿಲ್ಲ ಇತ್ಯಾದಿ ಹೇಳಿಕೆಗಳನ್ನು ಈ ಕಂಪನಿ ನೀಡುತ್ತಲೇ ಇದೆ. ಆದರೆ ನ್ಯಾಯಾಲಯದ ಆದೇಶವನ್ನು ಪಾಲಿಸಿಲ್ಲ. ಇದು ಬಹುರಾಷ್ಟ್ರೀಯ ಕಂಪನಿಗಳ ವರ್ತನೆ ಹೇಗಿರುತ್ತದೆ ಎಂಬುದಕ್ಕೆ ಒಂದು ಸ್ಯಾಂಪಲ್ಲು ಮಾತ್ರ, ಇನ್ನು ಮುಂದೆ ನಮಗೆ ಇಂತಹ ಹಲವಾರು ಅನುಭವಗಳು ಆಗಲಿವೆ. ಬಹುರಾಷ್ಟ್ರೀಯ ಕಂಪನಿಗಳ ನಿಘಂಟಿನಲ್ಲಿ ಮನುಷ್ಯತ್ವಕ್ಕೆ ಅರ್ಥ ಇರುವುದಿಲ್ಲ. ಲಾಭಕ್ಕೆ ಮಾತ್ರ ಅವರಲ್ಲಿ ಅರ್ಥವಿರುತ್ತದೆ ಅದಕ್ಕಾಗಿ ಮಾತ್ರ ಅವು ಕೆಲಸ ಮಾಡುತ್ತವೆ.

ಲಂಚಕೋರ ಪ್ರಧಾನಿಯ ಖಾಸಗೀಕರಣ ಪ್ರೇಮ

ಪ್ರಧಾನಮಂತ್ರಿ ನರಸಿಂಹರಾವ್ ಖಾಸಗೀ ಉದ್ದಿಮೆಗಳ ಕಡೆಗೆ ಹೆಚ್ಚಿನ ಒಲವು ತೋರಿದ್ದಾರಂತೆ. ರಾಜೀವ್ ಗಾಂಧಿಯವರ ಜನ್ಮದಿನದ ಸಂದರ್ಭದಲ್ಲಿ ನ್ಯಾಷನಲ್ ಹೆರಾಲ್ಡ್‌ಗೆ ಬರೆದಿರುವ ಲೇಖನದಲ್ಲಿ ಅವರು ಈ ನಿಲುಮೆ ವ್ಯಕ್ತಪಡಿಸಿದ್ದಾರೆ. ಅವರ ಪ್ರಕಾರ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ನಿರ್ವಹಣಾ ಸಾಮರ್ಥ್ಯ ಕಡಿಮೆಯಿದ್ದು ಅದರಿಂದ ರೋಗಪೀಡನೆ, ಹಾನಿ ಇತ್ಯಾದಿಗಳು ಹೆಚ್ಚಿವೆಯಂತೆ. ಇವೆಲ್ಲಕ್ಕೂ ಮದ್ದು ಖಾಸಗೀಕರಣ.

ಆದರೆ ಖಾಸಗೀಕರಣದ ಹೆಸರಿನಲ್ಲಿ ದೇಶವನ್ನೇ ಕಾಂಗ್ರೆಸ್ ರಾಜಕಾರಣಿಗಳು ಕೊಳ್ಳೆಹೊಡೆಯುತ್ತಿರುವುದು ಯಾರಿಗೆ ತಿಳಿದಿಲ್ಲ. ಸಾರ್ವಜನಿಕ ಉದ್ದಿಮೆಗಳ ಶೇರು ಮಾರಾಟದಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ನುಂಗಿ ಹಾಕುವಲ್ಲಿ ಇವರೆಲ್ಲ ಪಾಲುದಾರರಾಗಿಲ್ಲವೇ?

ಗೊತ್ತಾಯಿತಲ್ಲ. ಖಾಸಗೀಕರಣ ಲಾಭ ಯಾರಿಗೆಂದು? ಪ್ರಧಾನಿ ಇಂತಹ ಖಾಸಗೀಕರಣವನ್ನು ಬೆಂಬಲಿಸದೆ ಬಿಟ್ಟಾರೆಯೆ?

ವಿಮೆ ಉದಾರೀಕರಣ: ಕೊಳ್ಳೆಗಾರರು ಬಾಗಿಲು ಬಡಿಯುತ್ತಿದ್ದಾರೆ

ಆರ್.ಎನ್.ಮಲ್ಹೋತ್ರ ಎಂಬ ವ್ಯಕ್ತಿಯನ್ನು ಆಗಲೇ ನಮ್ಮ ಕೋಟೆಯೊಳಗೆ ಕಳುಹಿಸಿದ್ದಾರೆ. ದೇಶದ ವಿಮಾ ವ್ಯವಹಾರವನ್ನೆಲ್ಲಾ ಕೊಳ್ಳೆಹೊಡೆಯಲು ಬಹುರಾಷ್ಟ್ರೀಯ ವಿಮಾ ಕಂಪನಿಗಳು ಎಲ್ಲ ಹುನ್ನಾರ ಹಾಕುತ್ತಿದ್ದಾರೆ. ಈ ವಿಮಾ ವಲಯದಲ್ಲೂ ಖಾಸಗೀಕರಣ ಅವಶ್ಯಕತೆ ಇದೆ. ನಮ್ಮ ವಿಮಾ ಕಂಪನಿಗಳ ಗ್ರಾಹಕ ಸೇವೆ ಸರಿಯಾಗಿಲ್ಲ ಅವುಗಳಲ್ಲಿ ಸ್ಪರ್ಧಾತ್ಮಕತೆ ಬೆಳೆಸಲು ನಾವು ವಿದೇಶೀ ಕಂಪನಿಗಳನ್ನು ದೇಶದೊಳಗೆ ಬಿಡಬೇಕು....! ಇತ್ಯಾದಿಯನ್ನೆಲ್ಲ ವಿಚಾರಗಳನ್ನು ಸಮಿತಿಯ ತಲೆಯೊಳಗೆ ಆಗಲೇ ತುರಿಕಿಯಾಗಿದೆ.

ಆದರೆ ಕೇಂದ್ರ ಹಣಕಾಸು ಮಂತ್ರಿಗಳು ಒಂದಿನಂತೆ ರಾಜ್ಯಸಭೆಗೆ ಆಶ್ವಾಸನೆ ನೀಡಿದ್ದಾರೆ. 'ವಿಮಾ ವಲಯವನ್ನು ಬಹುರಾಷ್ಟ್ರೀಯ ವಿದೇಶೀ ಕಂಪನಿಗಳಿಗೆ ತೆರೆಯುವುದಿಲ್ಲ' ಎಂದು ತನ್ನ ಹೇಳಿಕೆಯ ವಿರುದ್ಧವಾದ ಕ್ರೀಯೆಯನ್ನು ಮಾಡಿಕೊಂಡು ಬಂದಿರುವ ಈ ಅರ್ಥ ಸಚಿವರ ಮಾತನ್ನೂ ನಂಬುವ ಅವಶ್ಯಕತೆಯಿಲ್ಲ ಅವರ ಹೇಳಿಕೆಯ ವಿರುದ್ಧವಾಗೇ ಅವರು ನಡೆಯುವುದು.

ಹನ್ನೊಂದು ಬ್ಯಾಂಕುಗಳು ನಷ್ಟದಲ್ಲಿ

ತಮ್ಮ ಬ್ಯಾಲೆನ್ಸ್ ಶೀಟ್‌ಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಸಲ್ಲಿಸಿರುವ 18 ರಾಷ್ಟ್ರೀಕೃತ ಬ್ಯಾಂಕುಗಳ ಹನ್ನೊಂದು ಬ್ಯಾಂಕುಗಳು ದೊಡ್ಡ ಮೊತ್ತದ ಹಾನಿ ತೋರಿವೆ. ಇಂಡಿಯನ್ ಓವರ್‌ಸೀಸ್ ಬ್ಯಾಂಕ್ 750 ಕೋಟಿ ರೂಪಾಯಿಗಳ ನಷ್ಟ ತೋರಿದರೆ ಕರ್ನಾಟಕದ ಸಿಂಡಿಕೇಟ್ ಬ್ಯಾಂಕ್ 670 ಕೋಟಿ ರೂಪಾಯಿಗಳ ಹಾನಿ ತೋರಿವೆ.

ತನ್ನ ಹತೋಟಿಯಲ್ಲಿದ್ದ ಬ್ಯಾಂಕುಗಳನ್ನು ಸರ್ಕಾರ ಹೇಗೆ ನಿರ್ವಹಿಸಿದೆ ಎಂಬುದನ್ನು ತೋರಿಸುತ್ತದೆ. ಈಗ ಬ್ಯಾಂಕುಗಳು ನಷ್ಟ ಮಾಡುತ್ತಿವೆ. ಅದಕ್ಕೆ ಖಾಸಗೀಕರಣ, ವಿಲೀನ ಇತ್ಯಾದಿ ಕ್ರಮಗಳೆಲ್ಲ ಅಗತ್ಯ ಎಂದು ತನ್ನ ನೀತಿಗಳನ್ನು ಸಮರ್ಥಿಸಿಕೊಳ್ಳಹೊರಟದೆ ಸರ್ಕಾರ. ಸರ್ಕಾರ ಈ ಬ್ಯಾಂಕುಗಳನ್ನು ಇಲ್ಲಿನವರೆಗೆ ಹೇಗೆ ನಿರ್ವಹಿಸಿತ್ತು ಮತ್ತು ಅದರಲ್ಲಿನ ನ್ಯೂನತೆಗಳೇನು, ಈ ಪ್ರಮಾಣದ ಹಾನಿ ಆಗಲು ಕಾರಣಗಳೇನು ಇತ್ಯಾದಿಗಳಿಗೆ ಉತ್ತರ ಹುಡುಕಲು ಸರ್ಕಾರಕ್ಕೆ ಆತ್ಮವಿಮರ್ಶೆ ಮಾಡಿಕೊಳ್ಳುವ ಧೈರ್ಯವಿದೆಯೇ?

ಜಂಟಿ ಸಮಿತಿಯ ಕಾಂಗ್ರೆಸ್ ಸದಸ್ಯರಿಂದ ನಾಚಿಕೆಗೆಟ್ಟ ವಾದ

ಶೇರು ಹಗರಣ

ವರದಿಯ ಕರಡಿನ ಬಗೆಗೆ ನಡುವೆ ಸಂಸದೀಯ ಸಮಿತಿಯ ಸದಸ್ಯರೊಳಗೆ ಭಿನ್ನಾಭಿಪ್ರಾಯ ತಲೆದೋರಿದೆ. ಆಡಳಿತದಲ್ಲಿರುವ ಕಾಂಗ್ರೆಸ್ ಪಕ್ಷದ ಹಲವು ರಾಜಕಾರಣಿಗಳು ಪ್ರಧಾನಿ ಮತ್ತು ಅವರ ಮಗನೂ ಒಳಗೊಂಡಂತೆ ಈ ಹಗರಣದಲ್ಲಿ ಭಾಗೀದಾರರಾಗಿರುವುದು ಈಗ ಸ್ಪಟಿಕದಷ್ಟು ಸ್ಪಷ್ಟ. ಹೀಗಿರಬೇಕಾದರೆ ತಮ್ಮ ಪಕ್ಷದ ಸದಸ್ಯರು ಮತ್ತು ಸರ್ಕಾರವನ್ನು ರಕ್ಷಿಸುವ ಹೇಯ ಕೆಲಸವನ್ನು ಕಾಂಗ್ರೆಸ್ ಸದಸ್ಯರು ಮಾಡುತ್ತಿದ್ದಾರೆ. ಇದೇ ಭಿನ್ನಾಭಿಪ್ರಾಯಕ್ಕೆ ಎಡೆ ಮಾಡಿಕೊಟ್ಟಿದೆ.

ಬ್ಯಾಂಕುಗಳು ಮತ್ತು ದಲ್ಲಾಳಿಗಳ ನಡುವೆ ಅತ್ಯಂತ ನಿಕಟ ಬಾಂಧವ್ಯವಿತ್ತು. ಅದು ಈ ಹಗರಣ ಇಷ್ಟು ದೊಡ್ಡ ಪ್ರಮಾಣದಲ್ಲಿ ನಡೆಯಕೊಟ್ಟಿತು ಎಂದು ಸಮಿತಿ ಹೇಳಿದೆ.

"ಸಾರ್ವಜನಿಕ ಉದ್ದಿಮೆಗಳು" ನಿಯಮಗಳನ್ನು ಉಲ್ಲಂಘಿಸಿದವು

ಶೇರು ಹಗರಣದಲ್ಲಿ ಸಾರ್ವಜನಿಕ ಉದ್ದಿಮೆಗಳ ಪಾತ್ರದ ಬಗ್ಗೆ ಬರೆಯುತ್ತ ಸಮಿತಿ ಹೀಗೆ ಹೇಳಿದೆ. ಸಾರ್ವಜನಿಕ ಉದ್ದಿಮೆಗಳ ಬ್ಯೂರೋ ಮತ್ತು ಹಣಕಾಸು ಮಂತ್ರಾಲಯ ಇವೆರಡೂ ಸಾರ್ವಜನಿಕ ಉದ್ದಿಮೆಗಳಿಗೆ ಮಾರ್ಗದರ್ಶನ ನೀಡುತ್ತವೆ. ಆದರೆ ತಮ್ಮ ಮಾರ್ಗದರ್ಶನವನ್ನು ಅವು ಪಾಲಿಸು[illegible] ಇಲ್ಲವೋ ಎಂಬುದನ್ನು ಪರೀಕ್ಷಿ[illegible]ಸಕ್ಕೆ ಇವೆರಡೂ ಹೋಗಿಲ್ಲ. ಆದ್ದರಿಂದಲೇ ಈ ಉದ್ದಿಮೆಗಳು ನಿಯಮಗಳನ್ನು ಮೀರಿ ಸಾರ್ವಜನಿಕ ಹಣವನ್ನು ಶೇರು ವ್ಯವಹಾರದ ಜೂಜಿನಲ್ಲಿ ತೊಡಗಿಸಿದವು ಎಂದು ಸಮಿತಿ ಹೇಳಿದೆ.

ಇದೂ ಕೇಂದ್ರ ಸರ್ಕಾರದ ವೈಫಲ್ಯವನ್ನು ತೋರುತ್ತದೆ. ಯಾಕೆಂದರೆ ಈ ಸಾರ್ವಜನಿಕ ಉದ್ದಿಮೆಗಳು ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿವೆ. ಇವುಗಳ ನಿರ್ವಹಣಾ ಮುಖ್ಯಸ್ಥರನ್ನು ಸರ್ಕಾರ ನೇಮಿಸುತ್ತದೆ. ಪ್ರಾಮಾಣಿಕ ಮುಖ್ಯಸ್ಥರನ್ನು ನೇಮಿಸಿದ್ದರೆ ಈ ಸಮಸ್ಯೆಯೇ ಉದ್ಭವವಾಗುತ್ತಿರಲಿಲ್ಲ.

ಅವಧಿ ವಿಸ್ತರಣೆ

ಲೋಕಸಭೆ ಜಂಟಿ ಸಂಸದೀಯ ಸಮಿತಿಯ ಅವಧಿಯನ್ನು ಚಳಿಗಾಲದ ಅಧಿವೇಶನದ ಕೊನೆಯವರೆಗೆ ವಿಸ್ತರಿಸಿದೆ. ತನಿಖಾ ಕಾರ್ಯಮುಗಿದಿದ್ದರೂ ಸರ್ವಸಮ್ಮತ ವರದಿಯ ಕರಡನ್ನು ತಯಾರಿಸುವ ಸಮಿತಿ ಭಿನ್ನಾಭಿಪ್ರಾಯದ ತೊಂದರೆಗೀ[illegible]ಗಾಗಿದೆ. ಹರ್ಷದ್ ಮೆಹ್ತಾನ ಆರೋಪ[illegible] ಜೊತೆಗೆ ತನಿಖೆ ಹೊಸ ಆಯಾಮ[illegible] ಪಡೆದುಕೊಂಡಿದ್ದರಿಂದ ಈ ವಿಸ್ತರಣೆ [illegible]ಶ್ಯವಾಯಿತು.

ನಿಕರಾಗುವಾದಲ್ಲಿ ಎಡಪಂಥೀಯ ಸ್ಯಾಂಡಿನಿಸ್ಟಾ ಪಕ್ಷಕ್ಕೆ ಸೇರಿದ 41 ಜನ ಪಾರ್ಲಿಮೆಂಟು ಸದಸ್ಯರು, ಮಿಲಿಟರಿ ಅಧಿಕಾರಿಗಳು ಸರ್ಕಾರಿ ಅಧಿಕಾರಿಗಳನ್ನು ಅಮೇರಿಕ ಬೆಂಬಲಿತ ಬಲಪಂಥೀಯ ರಿಕಾಂಟ್ರಾಗಳು ಭಯೋತ್ಪಾದಕ ಗುಂಪು ಅಪಹರಿಸಿದೆ. ಇದಕ್ಕೆ ಪ್ರತಿಯಾಗಿ ಸ್ಯಾಂಡಿನಿಸ್ಟಾದ ಬೆಂಬಲಿಗರು ಎಂದು ಹೇಳಿಕೊಳ್ಳುವ ಗುಂಪು ಆಳುವ ಯು.ಎನ್.ಓ ಪಕ್ಷದ ಕೇಂದ್ರ ಕಚೇರಿಯನ್ನು ಆಕ್ರಮಿಸಿ ಅಲ್ಲಿನ 30 ಜನ ನಾಯಕರನ್ನು (ಉಪಾಧ್ಯಕ್ಷರು) ಸೇರಿದಂತೆ ಒತ್ತೆಯಾಳುಗಳನ್ನು ಹಿಡಿದಿದೆ. 41 ಅಪಹರಿಸಿರುವ ಸ್ಯಾಂಡಿನಿಸ್ಟಾ ಸದಸ್ಯರನ್ನು ಬಿಡುಗಡೆ ಮಾಡಬೇಕೆಂದು ಅವರ ಒತ್ತಾಯ.

ಕಾಂಬೋಡಿಯಾದಲ್ಲೀಗ ಸರ್ಕಾರದ ಪಡೆಗಳು ಚುನಾವಣೆ ಬಹಿಷ್ಕರಿಸಿದ ಖೇಮರ್ ರೋಜ್ ಪಡೆಗಳ ಎರಡನೇ ದೊಡ್ಡ ನೆಲೆ ಮೇಲೆ ಧಾಳಿ ಆರಂಭಿಸಿದೆ. ಚುನಾವಣೆ ನಡೆದು ಮೂರು ಪಕ್ಷಗಳ ರಂಗ ಅಧಿಕಾರ ವಹಿಸಿಕೊಂಡ ಮೇಲೆ ಗೆರಿಲ್ಲಾ ಕದನ ನಿಲ್ಲಿಸಿ ಸರ್ಕಾರದಲ್ಲಿ ಪಾಲ್ಗೊಳ್ಳುವ ಇಚ್ಚೆ ವ್ಯಕ್ತಪಡಿಸಿದ ಖೇಮರ್ ರೋಜ್ ಪುನಃ ಹಿಂಸಾಚಾರ ಆರಂಬಿಸಿತ್ತು. ಈ ಹಿನ್ನೆಲೆಯಲ್ಲಿ ಸರ್ಕಾರಿ ಪಡೆಗಳು ದಾಳಿ ಆರಂಭಿಸಿವೆ.

ನೇಪಾಳದಲ್ಲಿ ಕಮ್ಯುನಿಸ್ಟ್ ಪಕ್ಷದ ಎಡರಂಗ ಹಾಗೂ ಆಳುವ ನೇಪಾಳಿ ಕಾಂಗ್ರೆಸ್ ಮಾತುಕತೆಗಳ ನಂತರ ಒಪ್ಪಂದವಾಗಿ, ಎರಡು ತಿಂಗಳ ಸಾಮೂಹಿಕ ಆಂದೋಲನವನ್ನು ಹಿಂತೆಗೆದುಕೊಳ್ಳಲಾಗಿದೆ. ಎಡರಂಗದ ಹತ್ತು ಬೇಡಿಕೆಗಳಲ್ಲಿ 9 ಬೇಡಿಕೆಗಳನ್ನು ಒಪ್ಪಲಾಗಿದೆ. ಪ್ರಧಾನ ಮಂತ್ರಿ ಕೊಯಿರಾಲಾರ ರಾಜೀನಾಮೆಯ ಒತ್ತಾಯ ಮಾತ್ರ ಒಪ್ಪಲಾಗಿಲ್ಲ. ಆ ಒತ್ತಾಯದ ಬಗೆಗೂ ಸದ್ಯಕ್ಕಲ್ಲದಿದ್ದರೂ, ಪ್ರಧಾನ ಮಂತ್ರಿಯನ್ನು ಆಳುವ ಪಕ್ಷ ಬದಲಾಯಿಸುವುದೆಂಬ ಅನಧಿಕೃತ ಆಶ್ವಾಸನೆ ಕೊಡಲಾಗಿದೆ ಎಂದು ತಿಳಿದು ಬಂದಿದೆ. ಚಳುವಳಿಯಿಂದ ಎಡರಂಗ ತನ್ನ ಜನಬೆಂಬಲ ಪ್ರದರ್ಶಿಸಿದೆ ಮಾತ್ರವಲ್ಲ ರಾಜಕೀಯವಾಗಿ ಬಲಗೊಂಡಿದೆ. ಆಳುವ ನೇಪಾಳ ಕಾಂಗ್ರೆಸ್ ಇದ್ದ ಬದ್ದ ವರ್ಚಸ್ಸು, ಜನಪ್ರಿಯತೆ ಕಳೆದುಕೊಂಡಿದೆ.



ನಿಕರಾಗುವದಲ್ಲಿ ರಾಜಕೀಯ ಅಪಹರಣಗಳ

-- ಶರತ್‌ಚಂದ್ರ

ನಿಕರಾಗುವದಲ್ಲಿ ಸ್ಯಾಂಡಿನಾಸ್ಟಾ ಎಡಪಂಥೀಯ ಪಕ್ಷ, 1979 ರಲ್ಲಿ ಅಮೇರಿಕನ್ ಬೆಂಬಲಿತ ಕುಖ್ಯಾತ ಸರ್ವಾಧಿಕಾರಿ ಸೊಮೊಝಾ ಸರ್ಕಾರವನ್ನು ಉರುಳಿಸಿ, ಸಶಸ್ತ್ರ ಕ್ರಾಂತಿ ನಡೆಸಿ ಅಧಿಕಾರಕ್ಕೆ ಬಂದ ಪಕ್ಷ, 10 ವರ್ಷಗಳ ಎಡಪಂಥೀಯ ಪ್ರಗತಿಪರ ಜನಪರ ನೀತಿಗಳನ್ನು ಅನುಸರಿಸಿ, ಅಮೇರಿಕದ ಸಾಮ್ರಾಜ್ಯಶಾಹಿಯ ಕೋಪಕ್ಕೆ ತುತ್ತಾದ ಪಕ್ಷ, ಅಮೇರಿಕದ ಬೆಂಬಲಿತ 'ಕಾಂಟ್ರಾ' ಎಂಬ ಬಲಪಂಥೀಯ ಗ್ಯಾಂಗ್‌ಗಳ ಭಯೋತ್ಪಾದನೆ, ಹಿಂಸಾಚಾರ ಎದುರಿಸಿದ ಪಕ್ಷ, ಅಮೇರಿಕದ ಆರ್ಥಿಕ ಬಹಿಷ್ಕಾರಕ್ಕೆ ಸಿಕ್ಕಿ ಬೆಂಡಾದರೂ, ಸಾಮ್ರಾಜ್ಯಶಾಹಿ-ವಿರೋಧಿ ಚಳುವಳಿಯ ಬೆಂಬಲದಿಂದ ತಲೆ ಎತ್ತಿನಿಂತ ಪಕ್ಷ, ಆದರೆ ಸ್ಯಾಂಡಿನಿಸ್ಟಾ ಪಕ್ಷವೇ ಸ್ವಯಿಚ್ಚೆಯಿಂದ ನಡೆಸಿದ ಬಹುಪಕ್ಷೀಯ ಚುನಾವಣೆ ನಡೆಸಿ, ಅಮೇರಿಕದ ಭಾರಿ ಹಣ ಬಲದಿಂದ ಸೋಲಿಸಲ್ಪಟ್ಟ ಪಕ್ಷ. ಕಳೆದ ನಾಲ್ಕು ವರ್ಷಗಳಲ್ಲಿ ಅಮೇರಿಕದ ಬೆಂಬಲದಿಂ ಬಂದ ಪಕ್ಷಗಳ ರಂಗ ಯು.ಎನ್.ಓ ನಿಕರಾಗುವದ ಯಾವ ಸಮಸ್ಯೆಯನ್ನು ಬಗೆಹರಿಸಲಾಗದೆ ಜನರ ಕೋಪಕ್ಕೆ ತುತ್ತಾಗುತ್ತಿದೆ. ಅಮೇರಿಕನ್ ಬೆಂಬಲಿತ ಬಲಪಂಥೀಯ ಭಯೋತ್ಪಾದಕ ಗುಂಪು ಕಾಂಟ್ರಾಗಳು (ಈ ಸರಕಾರ ಬಂದಾಗ ಶಸ್ತ್ರತ್ಯಾಗ ಮಾಡಿದವರು) ಪುನಃ ತಮ್ಮ ಸಶಸ್ತ್ರ ಭಯೋತ್ಪಾದಕ ಚಟುವಟಿಕೆ ಆರಂಭಿಸಿದ್ದಾರೆ. ಪುನಃ ಶಸ್ತ್ರ ಕೈಗೆತ್ತಿಕೊಂಡ ಕಾಂಟ್ರಾಗಳನ್ನು ರಿಕ್ರಾಂಟ್ರಾಗಳೆನ್ನುತ್ತಾರೆ.

ಅವರ ಇತ್ತೀಚೆಗಿನ ಭಯೋತ್ಪಾದಕದ ಚಟುವಟಿಕೆಯೆಂದರೆ 41 ಜನ ಸ್ಯಾಂಡಿನಿಸ್ಟಾ ಪಕ್ಷಕ್ಕೆ ಸೇರಿದ ಪಾರ್ಲಿಮೆಂಟು ಸದಸ್ಯರು, ಮಿಲಿಟರಿ ಅಧಿಕಾರಿಗಳು ಹಾಗೂ ಸರ್ಕಾರಿ ಅಧಿಕಾರಿಗಳು ಉತ್ತರ ನಿಕರಾಗುವಾ ಪ್ರದೇಶದಿಂದ ಅಪಹರಿಸಿದ್ದು. ಸ್ಯಾಂಡಿನಿಸ್ಟಾ ಈಗ ವಿರೋಧ ಪಕ್ಷದಲ್ಲಿದ್ದರೂ ಸೈನ್ಯದಲ್ಲಿ ಅವರ ಬೆಂಬಲಿಗರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಹಾಗೆನೇ ಸರ್ಕಾರಿ ಅಧಿಕಾರಿಗಳಲ್ಲೂ ಹಲವಾರು ಸ್ಯಾಂಡಿನಿಸ್ಟಾ ಬೆಂಬಲಿಗರಾಗಿದ್ದಾರೆ. ಅವರ ಬೇಟೆಯೂ ರಿಕ್ರಾಂಟ್ರಾಗಳ ಗುರಿ. ಮಿಲಿಟರಿ ಮುಖ್ಯಸ್ಥರಾಗಿರುವ ಸ್ಯಾಂಡಿನಿಸ್ಟಾ ಅಧಿಕಾರಿಯನ್ನು ಬದಲಾಯಿಸಬೇಕೆಂಬುದು ರಿಕಾಂಟ್ರಾಗಳ ಮುಖ್ಯ ಬೇಡಿಕೆ. ಅವರನ್ನು ನಾಶ ಮಾಡಿದರೆ ಸ್ಯಾಂಡಿನಿಸ್ಟಾ ಬಲ ಮುರಿಯಬಹುದು ಎಂಬ ಭ್ರಮೆ. ಸ್ಯಾಂಡಿನಿಸ್ಟಾ ಟ್ರೇಡ್‌ಯೂನಿಯನ್, ರೈತರ ಸಂಘಟನೆ, ವಿದ್ಯಾರ್ಥಿ ಯುವ ಸಂಘಟನೆಗಳ ಮೂಲಕ ಭಾರಿ ಜನ ಬೆಂಬಲ ಇರುವ ಪಕ್ಷ ಮುಂದಿನ ಚುನಾವಣೆ ಹತ್ತಿರ ಬರುತ್ತಿದ್ದು ಆಳುವ ಪಕ್ಷಕ್ಕೂ ಅಮೇರಿಕ್ಕೂ ಭಯ ಆರಂಭಮಾಡಿ ಸ್ಯಾಂಡಿನಿಸ್ಟಾ ಪಕ್ಷ ಪುನಃ ಅಧಿಕಾರಕ್ಕೆ ಬರಬಹುದು ಎಂದು.

ರಿಕಾಂಟ್ರಾದ ಅಪಹರಣದಿಂದ ಕೋಪಗೊಂಡ ಸ್ಯಾಂಡಿನಿಸ್ಟಾ ಬೆಂಬಲಿಗರು ಎಂದು ಹೇಳಿಕೊಂಡಿರುವ ಗುಂಪೊಂದು ಯು.ಎನ್.ಓ. ಆಳುವ ರಂಗದ ಕೇಂದ್ರ ಕಚೇರಿಯನ್ನು ವಶಪಡಿಸಿಕೊಂಡು ಉಪಾಧ್ಯಕ್ಷರು ಹಿರಿಯ ನಾಯಕರು ಸೇರಿದಂತೆ ಒತ್ತೆಯಾಳುಗಳಾಗಿರಿಸಿಕೊಂಡಿದೆ. ಅಪಹರಿಸಿದ 41 ಜನ ನಾಯಕರನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕೆಂದು ಅವರ ಒತ್ತಾಯ. ಈಗಾಗಲೇ ಕೇಂದ್ರ ನಾಯಕರನ್ನು (ಉಪಾಧ್ಯಕ್ಷರನ್ನು ಬಿಟ್ಟು) ಬಿಡುಗಡೆಮಾಡಿದ್ದಾರೆ. ಅಪಹರಣ ಒತ್ತೆಯಾಳುಗಳ ಪ್ರಕರಣ ಸದ್ಯಕ್ಕಿನ್ನೂ ಬಗೆಹರಿದಿಲ್ಲ.

ಲ್ಯಾಟಿನ್ ಅಮೇರಿಕನ್ ಪ್ರಗತಿಪರ ಪಕ್ಷಗಳ ಸಭೆ

ಲ್ಯಾಟಿನ್ ಅಮೇರಿಕ (ಅಥವಾ ದಕ್ಷಿಣ ಅಮೇರಿಕಾ ಖಂಡದ) ಹಾಗೂ ಕೆರಿಬಿಯನ್ ಪ್ರದೇಶದ ಸಾಮ್ರಾಜ್ಯಶಾಹಿ-ವಿರೋಧಿ ಪ್ರಗತಿಪರ, ಪ್ರಜಾಸತ್ತಾತ್ಮಕ ಸಮಾಜವಾದಿ ಪಕ್ಷಗಳು ಒಂದು ವೇದಿಕೆ ರಚಿಸಿಕೊಂಡಿವೆ. 'ಸಾವೋ ಪೋಲೋ' ಫೋರಂ ಎಂದು ಕರೆಯಲಾಗುವ ಈ ವೇದಿಕೆ 112 ಜನ ಸದಸ್ಯ ಸಂಘಟನೆಗಳು 25 ವೀಕ್ಷಕ ಸಂಘಟನೆಗಳು ಇವೆ. ಈ ವೇದಿಕೆಯ ನಾಲ್ಕನೇ ವಾರ್ಷಿಕ ಸಭೆ ಇತ್ತೀಚೆಗೆ ಕ್ಯೂಬಾದ ರಾಜಧಾನಿ ಹವಾನಾದಲ್ಲಿ ನಡೆಯಿತು.- ಜುಲೈ 21 ರಿಂದ 24 ರವರೆಗೆ ಉತ್ತರ ಅಮೇರಿಕಾದ ಯುರೋಪ್, ಏಷ್ಯಾ ಆಫ್ರಿಕಾದ ಹಲವಾರು ಪ್ರಗತಿಪರ ಸಂಘಟನೆಗಳು ಪಕ್ಷಗಳು ತಮ್ಮ ಪ್ರತಿನಿಧಿಗಳನ್ನು ವೀಕ್ಷಕರಾಗಿ ಕಳಿಸಿದ್ದರು. ಸಿಪಿಐ(ಎಂ) ನಿಂದ ಕಾಂ ಸುರ್ಜಿತ್ ವೀಕ್ಷಕರಾಗಿ ಭಾಗವಹಿಸಿದ್ದರು.

'ಸಾವೋ ಪೋಲೋ ಫೋರಂ' ಸಭೆಯ ನಂತರ ಹೊರಡಿಸಿದ ಹೇಳಿಕೆಯಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿ, ಮಿಲಿಟರಿ ದಬ್ಬಾಳಿಕೆ, ಐ.ಎಂ.ಎಫ್. ಹೊರಿಸಿರುವ ಆರ್ಥಿಕ ನೀತಿಗಳ ವಿರುದ್ಧ ದನಿಯೆತ್ತಿದೆ. ಇನ್ನೂ ಬೇರೆ ಬೇರೆ ರೂಪಗಳಲ್ಲಿ ಮುಂದುವರೆಯುತ್ತಿರುವ ನವ ವಸಾಹತುಶಾಹಿ, ಮಿಲಿಟರಿ ಸರ್ವಾಧಿಕಾರದ ವಿರುದ್ಧ ಐಕ್ಯ ಹೋರಾಟಕ್ಕೆ ಅದು ಕರೆಯಿತ್ತಿದೆ. ಐ.ಎಂ.ಎಫ್. ಹೊರಿಸಿರುವ ಬೆಳವಣಿಗೆ ಮಾದರಿಯ ವಿರುದ್ಧ ವ್ಯಾಪಕ ಜನಾಭಿಪ್ರಾಯ ರೂಪುಗೊಳ್ಳುತ್ತಿರುವ ಈ ಸಮಯದಲ್ಲಿ ಬದಲಿ ಬೆಳವಣಿಗೆ ಮಾದರಿಗೆ ಪ್ರಚಾರ ನಡೆಯಬೇಕೆಂದು ಕರೆಯಿತ್ತಿದೆ.

ಕ್ಯೂಬಾಕ್ಕೆ ವಿಯೇಟ್ನಾಂ ನಿಂದ 50 ಲಕ್ಷ ಪೇಪರ್ ಪ್ಯಾಡ್, ಪೆನ್ನುಗಳು

ಕ್ಯೂಬಾದ ಮೇಲ್ ಹೊರಿಸಿರುವ ಆರ್ಥಿಕ ದಿಗ್ಬಂಧನದಿಂದ ಹಲವಾರು ಅವಶ್ಯಕ ವಸ್ತುಗಳ ತೀವ್ರ ಕೊರತೆಯುಂಟಾಗಿದೆ. ಜಗತ್ತಿನ ಪ್ರಗತಿಪರ ಸಂಘಟನೆಗಳು ಸೌಹಾರ್ದತಾ ಸಂಕೇತವಾಗಿ ಈ ಕೊರತೆ ತುಂಬಿ ಕೊಡಲು ಪ್ರಯತ್ನಿಸುತ್ತಿವೆ. ವಿಯೇಟ್ನಾಂನ ಹೋಚಿಮನ್ ಕಮ್ಯುನಿಸ್ಟ್ ಯೂತ್ ಲೀಗ್ ನವಂಬರ್ ಒಳಗೆ 50 ಲಕ್ಷ ಪೇಪರ್ ಪ್ಯಾಡ್ ಹಾಗೂ ಪೆನ್ನುಗಳನ್ನು ಸಂಗ್ರಹಿಸಿ ಕ್ಯೂಬಾಕ್ಕೆ ಕಳಿಸುವ ಯೋಜನೆ ಹಾಕಿಕೊಂಡಿದೆ. ಕಳೆದ ಮೇಯಲ್ಲಿ ವಿಯೇಟ್ನಾಂನ ಸರ್ಕಾರಿ ನೌಕರರು ತಮ್ಮ ಒಂದು ದಿನ ಸಂಬಳ ವಂತಿಗೆ ನೀಡಿ 10 ಸಾವಿರ ಟನ್ ಅಕ್ಕಿಯನ್ನು ಕಳಿಸಿದ್ದರು ಎಂದು ಇಲ್ಲಿ ಜ್ಞಾಪಿಸಿಕೊಳ್ಳಬಹುದು.

ಜಾರ್ಜಿಯಾದಲ್ಲಿ ಸಿಐಎ ಏಜೆಂಟ್ ಕೊಲೆ

ಜಾರ್ಜಿಯಾ (ಒಂದು ಮಾಜಿ ಸೋವಿಯತ್ ಒಕ್ಕೂಟದ ಗಣರಾಜ್ಯ)ದಲ್ಲಿ ಇತ್ತೀಚೆಗೆ ಅಮೇರಿಕನ್‌ನ ರಾಯಭಾರ ಕಚೇರಿಯ ಅಧಿಕಾರಿ ಎಂದು ಹೇಳಲಾದ ಅಮೇರಿಕನ್ ಕೊಲೆ ನಡೆಯಿತು. ಆತ ಜಾರ್ಜಿಯಾದ ಅಧ್ಯಕ್ಷರ ಭದ್ರತಾ ವ್ಯವಸ್ಥೆಯ ಮುಖ್ಯಸ್ಥರೊಂದಿಗೆ ಬಿಡಾರಕ್ಕೆ ಹೋಗಿದ್ದಾಗ ಈ ಕೊಲೆ ನಡೆಯಿತು. ಆತ ರಾಯಭಾರತ ಕಚೇರಿಯ ಅಧಿಕಾರಿ ಮಾತ್ರವಲ್ಲ ಸಿಐಎ ಏಜೆಂಟ್ ಆಗಿದ್ದ ಎಂದು ಈಗ ತಿಳಿದು ಬಂದಿದೆ. ಆತನ ಶವ ಅಮೇರಿಕಕ್ಕೆ ವಾಪಸು ಕೊಂಡು ಹೋಗಲು ರಷ್ಯಾದಲ್ಲಿರುವ ಉನ್ನತ ಸಿಐಎ ಅಧಿಕಾರಿ ಜಾರ್ಜಿಯಾಕ್ಕೆ ಹೋಗಿದ್ದನಂತೆ, ಸಿಐಎ ಏಜಂಟಿಗೂ ಜಾರ್ಜಿಯಾದ ಭದ್ರತಾ ಮುಖ್ಯಸ್ಥನಿಗೂ ಎಂತಹ ನಂಟು ಎಂದು ಜನ ಕೇಳಲಾರಂಭಿಸಿದ್ದಾರೆ.

ಅದೇ ಸಮಯದಲ್ಲಿ ಜಾರ್ಜಿಯಾದ ಅಧ್ಯಕ್ಷರಾಗಿರುವ ಎಡ್ವರ್ಡ್ ಶೇವರ್ ನಾದ್‌ಝೆ ಸೋವಿಯೆಟ್ ಒಕ್ಕೂಟದ ವಿದೇಶ ಮಂತ್ರಿಯಾಗಿದ್ದಾಗ ಬಹಿರಂಗವಾಗಿ ಸಂಪೂರ್ಣ ಅಮೇರಿಕನ್ ವಿದೇಶ ನೀತಿ ಆರಂಭವಾಗಿದ್ದು ಆತನಿಗೂ ಅಮೇರಿಕನ್‌ರಿಗೂ ನಿಕಟ ಸಂಬಂಧವಿತ್ತು ಎಂದು ಆಗಲೇ ಟೀಕೆಗಳು ಕೇಳಿಬಂದಿದ್ದವು. ಈಗ ಈ ಘಟನೆ ಅದಕ್ಕೆ ಪುರಾವೆ ಅಲ್ಲವೇ?

ಮಾಸ್ಕೋದಲ್ಲಿ ಬಾಡಿಗೆ ಕೊಲೆಗಾರರು

ಮಾಸ್ಕೋ ಈಗ ಚಿಕಾಗೊ ಕೂಡಾ ನಾಚಿಸುವ ಮಾಫಿಯಾದ ಮನೆಯಾಗುತ್ತಿದೆ. ಅಮೇರಿಕದ ಚಿಕಾಗೊ ನಗರದ ಮಾಫಿಯಾ ದೊರೆಗಳ ತಾಣವಾಗಿದೆ. ಬಾಡಿಗೆಗೆ ಕೊಲೆ, ಸುಲಿಗೆ, ರಕ್ಷಣೆಗಾಗಿ ವಂತಿಗೆ ಇತ್ಯಾದಿ ಮಾಸ್ಕೋದಲ್ಲಿ ತಾಂಡವಾಡಲಾರಂಭಿಸಿದೆ. ಇದು ರಷ್ಯಾದಲ್ಲಿ ಬೆಳೆಯಲಾರಂಭಿಸಿರುವ ಬಂಡವಾಳಶಾಹಿ ವ್ಯವಸ್ಥೆಯ ನೇರಫಲ ಎಂದು ಬೇರೆ ಹೇಳಬೇಕಾಗಿಲ್ಲ. ಕಳೆದ ಒಂದು ವರ್ಷದಲ್ಲಿ ಮಾಸ್ಕೋದಲ್ಲಿ 150 ವ್ಯಾಪಾರಿಗಳು, ಕೈಗಾರಿಕೋದ್ಯಮಿಗಳು, ಬ್ಯಾಂಕರುಗಳನ್ನು ಕೊಲೆ ಮಾಡಲಾಗಿದೆ. ರಕ್ಷಣೆಗೆ ವಂತಿಗೆ ಒತ್ತಾಯ ನಿರಾಕರಿಸಿದವರ ಕೊಲೆ ಮಾಡಲಾಗುತ್ತಿದೆ. ಕೆಲವೊಮ್ಮೆ ವ್ಯಾಪಾರದ ಪೈಪೋಟಿಯಲ್ಲಿ ವಿರೋಧಿಗಳ ಕೊಲೆಗೆ ಬಾಡಿಗೆ ಕೊಲೆಗಾರರನ್ನು ನೇಮಿಸಲಾಗುತ್ತದೆ. ಕೊಲೆಯ ದರ ಕಳೆದ ವರ್ಷ ಮೂರು ಪಟ್ಟು ಏರಿದೆ. ಇದು ಅಮೇರಿಕನ್ ಸರಾಸರಿಯ ಎರಡು ಪಟ್ಟು. ರಷ್ಯಾದಲ್ಲಿ 3000 ಕೊಲೆಗಾರರ ಗ್ಯಾಂಗುಗಳು ಇವೆ ಎಂದು ಅಂದಾಜು ಮಾಡಲಾಗಿದೆ. ಕಾನೂನು ಮತ್ತು ವ್ಯವಸ್ಥೆ ಎಷ್ಟು ಹದಗೆಟ್ಟಿತೆಂದರೆ ಖಾಸಗಿ ಭದ್ರತಾ ಏಜೆನ್ಸಿಗಳು ತೀವ್ರವಾಗಿ ಬೆಳೆಯಲಾರಂಭಿಸಿವೆ. ಉದ್ಯೋಗ ಕಳೆದುಕೊಂಡ ಮಾಜಿ ಕೆಜಿಬಿ (ಬೇಹುಗಾರಿಕಾ ಸಂಸ್ಥೆ) ಉದ್ಯೋಗಿಗಳು ಇದನ್ನು ನಡೆಸುತ್ತಿದ್ದಾರೆ. ಕಳೆದ ವಾರ ಹಲವಾರು ಪ್ರಮುಖ ಕೈಗಾರಿಕೋದ್ಯಮಿಗಳು ಅಧ್ಯಕ್ಷರಿಗೆ ಪತ್ರ ಬರೆದು ರಕ್ಷಣೆ ಕೋರಿದ್ದಾರೆ. ಇದು ಮುಕ್ತ ಮಾರುಕಟ್ಟೆ ಬಂಡವಾಳಶಾಹಿಯ ನೇರ ಪರಿಣಾಮ ಎಂದು ಅವರಿಗೆ ಗೊತ್ತಿರಬೇಕಲ್ಲ!

ಪುಟ 7ರಿಂದ

ಪಾತಕಲಿಯದ ರಾವ್ ಸರಕಾರ

ಸಲು ಜಂಟಿ ಯೋಜನೆ ಅಗತ್ಯ. ಕೇಂದ್ರ ಸರಕಾರ ರಾಜ್ಯ ಸರಕಾರಗಳ ಸಹಕಾರದೊಂದಿಗೆ ಈ ಅನಾಹುತಗಳ ನಿರಂತರ ಚಕ್ರವನ್ನು ತಡೆಯಲು ಇಂತಹ ಯೋಜನೆ ರೂಪಿಸಬೇಕು ಎಂದು ಕೇಂದ್ರ ಸಮಿತಿ ಹೇಳಿದೆ.

ಎಡರಂಗದ ಮುನ್ನಡೆ, ಪ.ಬಂಗಾಳ-ತ್ರಿಪುರಾ

ಇತ್ತೀಚಿನ ಪಂಚಾಯತ್ ಚುನಾವಣೆಗಳಲ್ಲಿ ಸಿಪಿಐ(ಎಂ) ಹಾಗೂ ಎಡರಂಗಕ್ಕೆ ದೊಡ್ಡ ವಿಜಯವನ್ನು ನೀಡಿದ ಪಶ್ಚಿಮಬಂಗಾಳದ ಜನತೆಯನ್ನು ಕೇಂದ್ರ ಸಮಿತಿ ಅಭಿನಂದಿಸಿದೆ. ಮೂರನೇ ಒಂದು ಭಾಗ ಸ್ಥಾನಗಳಲ್ಲಿ ಮಹಿಳೆಯರ ಪ್ರವೇಶ ಹಾಗೂ ಹರಿಜನ-ಗಿರಿಜನರಿಗೆ ವಿಶಾಸಲಾತಿಯ ಮೂಲಕ ಪಂಚಾಯತೀ ರಾಜ್ಯ ವ್ಯವಸ್ಥೆಯೊಳಗೆ ಹೊಸ ವಿಭಾಗಗಳನ್ನು ತರಲು ಸಾಧ್ಯವಾಗಿದೆ. ಇದು ಈ ಸ್ಥಳೀಯ ಸಂಸ್ಥೆಗಳನ್ನು ಮತ್ತಷ್ಟು ಬಲಗೊಳಿಸಲು, ಪುನಶ್ಚೇತನಗೊಳಿಸಲು ನೆರವಾಗುತ್ತದೆ.

ಚುನಾವಣೆಗಳ ಸಮಯದಲ್ಲಿ ಹಾಗೂ ನಂತರ ಕಾಂಗ್ರೆಸ್(ಐ) ಹಾಗೂ ಪಟ್ಟಭದ್ರ ಹಿತಾಸಕ್ತಿಗಳು ಹರಿಯಬಿಟ್ಟ ಹಿಂಸಾಚಾರವನ್ನು ಕೇಂದ್ರ ಸಮಿತಿ ಬಲವಾಗಿ ಖಂಡಿಸಿತು. ಜಲಪೈಗುರಿ ಜಿಲ್ಲೆಯ ರೆಡ್‌ಬ್ಯಾಂಕ್ ಚಹಾ ಎಸ್ಟೇಟ್‌ನಲ್ಲಿ ಕಾಂಗ್ರೆಸ್(ಐ) ನಿಂದ ಸಿಐಟಿಯು ಹಾಗೂ ಸಿಪಿಐ(ಎಂ) ಬೆಂಬಲಿಗರ ಸಾಮೂಹಿಕ ಹತ್ಯಾಕಾಂಡದ ಬಗ್ಗೆ ಕೇಂದ್ರ ಸಮಿತಿ ತನ್ನ ತೀವ್ರ ಕ್ರೋಧವನ್ನು ವ್ಯಕ್ತಪಡಿಸಿತು. ಕಾಂಗ್ರೆಸ್()ನ ಭಿನ್ನ ಗುಂಪು ಬಣಗಳ ಹಾಗೂ ತಂತ್ರಗಳನ್ನು ಕಂಡಾಗ ಧೋರಣೆಗಳ ನಿಟ್ಟಿನಲ್ಲಿ ಎಡರಂಗದೊಡನೆ ಹೋ...

...ಸುವ ಸಾಮರ್ಥ್ಯವೇ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ.

ತ್ರಿಪುರಾದ ಎಡರಂಗ ಸರಕಾರ ಕಾಂಗ್ರೆಸ್ - ಟಿಯುಜೆಎಸ್ ಆಳ್ವಿಕೆಯಲ್ಲಿ ವರ್ಷಗಳ ಕಾಲ ಸಮಾಜ-ವಿರೋಧಿ ಶಕ್ತಿಗಳ ಭಾರೀ ಪ್ರೋತ್ಸಾಹ ಪಡೆದ ರಾಜ್ಯದಲ್ಲಿ ಮತ್ತೆ ಶಾಂತಿ ಹಾಗೂ ಸಾಮಾನ್ಯ ಪರಿಸ್ಥಿತಿ ನೆಲೆಗೊಳಿಸಲು ತುರ್ತು ಕ್ರಮಗಳನ್ನು ಕೈಗೊಳ್ಳುತ್ತಿದೆ. ಸೋತರೂ ಅದನ್ನು ಸ್ವೀಕರಿಸಲಾಗದ ಕಾಂಗ್ರೆಸ್ (ಐ) ರಾಜ್ಯದಲ್ಲಿ ಸಮಾಜ-ವಿರೋಧಿ ಶಕ್ತಿಗಳನ್ನು ಪೋಷಿಸುತ್ತಾ ಗಲಭೆಗಳನ್ನು ಸೃಷ್ಟಿಸುತ್ತಿದೆ. ಹಿಂಸಾತ್ಮಕ ಚಟುವಟಿಕೆಗಳನ್ನು ಬಿಟ್ಟುಕೊಟ್ಟು ಸಾಮಾನ್ಯ ಚೇತನ ಪ್ರವಾಹವನ್ನು ಸೇರಿಕೊಳ್ಳಿ ಎಂದು ಎಡರಂಗ ಸರಕಾರ ಬುಡಕಟ್ಟು ಉಗ್ರಗಾಮಿ ಗುಂಪುಗಳಿಗೆ ಮನವಿ ಮಾಡಿದೆ. ಅವರು ಸಾಮಾನ್ಯ ಜೀವನ ನಡೆಸಲು ಅನುಕೂಲ ಮಾಡಿಕೊಡುವ ಕ್ರಮಗಳನ್ನು ಘೋಷಿಸಿದೆ. ಕೇಂದ್ರ ಸಮಿತಿ ಈ ಬಗ್ಗೆ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿತು.

ಬಿಹಾರ-ಕೇರಳ ದಮನ ಚಕ್ರಕ್ಕೆ ಖಂಡನೆ

ಬಿಹಾರದಲ್ಲಿ ನಡೆಯುತ್ತಿರುವ ಕಿಸಾನ್ ಸಭಾ ಹಾಗೂ ಕೃಷಿಕೂಲಿಕಾರರ ಭೂ ಹೋರಾಟವನ್ನು ಕೇಂದ್ರ ಸಮಿತಿ ಸ್ವಾಗತಿಸಿದೆ. ಭೂಮಾಲಕರು ಕಾನೂನುಬಾಹಿರವಾಗಿ ಪಡೆದಿದ್ದ 22 ಸಾವಿರ ಎಕ್ರೆ(?) ಜಮೀನನ್ನು ಪೂರ್ಣಿಮಾ, ದರ್ಭಾಂಗಾ, ಸಮಸ್ತಿಪುರ ಹಾಗೂ ಇತರ ಕೇಂದ್ರಗಳಲ್ಲಿ ವಶಪಡಿಸಿಕೊಳ್ಳಲಾಗಿದೆ. ಈ ಭೂ ಹೋರಾಟದ ಕಾಲದಲ್ಲಿ 10 ಸಂಗಾತಿಗಳ ಸಾವಿಗೆ ಕಾರಣವಾದ ಭೂಮಾಲಕ ಆಡಳಿತವ ಶಾಮೀಲಿನಿಂದ ನಡೆದ ದಮನ ಚಕ್ರವನ್ನು ಕೇಂದ್ರ ಸಮಿತಿ ಖಂಡಿಸಿದೆ. ಪೋಲೀಸ್ ಗೋಳಿಬಾರಿನಲ್ಲಿ ಸಿಪಿಐ(ಎಂ) ನಳಂದಾ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಮ್ರೇಡ್ ಗೋವಿಂದ ಪ್ರಸಾದ್‌ರ ಕ್ರೂರ ಕೊಲೆಯ ಬಗ್ಗೆ ಕೇಂದ್ರ ಸಮಿತಿ ಆಘಾತ ವ್ಯಕ್ತಪಡಿಸಿತು. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ತೀವ್ರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿತು.

ಕಳೆದ ಕೆಲವು ತಿಂಗಳಿಂದ ಕೇರಳದ ಕಣ್ಣೂರು ಜಿಲ್ಲೆಯಲ್ಲಿ ಸಿಪಿಐ(ಎಂ) ಕಾರ್ಯಕರ್ತರು ಹಾಗೂ ಬೆಂಬಲಿಗರ ಮೇಲೆ ಯುಡಿಎಫ್ ಸರಕಾರದ ದಮನವನ್ನು ಕೇಂದ್ರ ಸಮಿತಿ ಖಂಡಿಸಿತು.

ಮುಂಬರುವ 4 ವಿಧಾನಸಭಾ ಚುನಾವಣೆಗಳು ನಿರ್ಣಾಯಕ ಪ್ರಬಾವ ಬೀರುವ ಚುನಾವಣೆ

ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ ಹಾಗೂ ಹಿಮಾಚಲ ಪ್ರದೇಶಗಳಲ್ಲಿ ಮುಂಬರುವ ವಿಧಾನಸಭಾ ಚುನಾವಣೆಗಳಲ್ಲಿ ಪಕ್ಷ ಅನುಸರಿಸಬೇಕಾದ ಮಾರ್ಗದ ಬಗ್ಗೆ ಕೇಂದ್ರ ಸಮಿತಿ ಚರ್ಚಿಸಿತು. ರಾಷ್ಟ್ರದ ರಾಜಕೀಯ ಸನ್ನಿವೇಶದ ಮೇಲೆ ನಿರ್ಣಾಯಕ ಪ್ರಭಾವ ಬೀರುವ ಚುನಾವಣೆಗಳಿವು. ಈ ರಾಜ್ಯಗಳಲ್ಲಿ ಆಳ್ವಿಕೆ ನಡೆಸುತ್ತಿದ್ದ ಬಿಜೆಪಿಯನ್ನು ಸೋಲಿಸುವುದು ಬಹಳ ಮಹತ್ವದ್ದು. ಈ ಗುರಿಸಾಧನೆಗೆ ಸಿಪಿಐ(ಎಂ) ಎಲ್ಲಾ ಎಡ ಮತ್ತು ಜಾತ್ಯಾತೀತ ವಿರೋಧ ಶಕ್ತಿಗಳ ಐಕ್ಯತೆ ಬೆಸೆಯಲು ಸರ್ವ ಪ್ರಯತ್ನ ನಡೆಸುತ್ತಿದೆ.

ನೆಹರೂ ದಾರಿಯಿಂದ ಪರಾಯನವೇತಕೆ

ಪುಟ 9ರಿಂದ

ಈ ನೀತಿಗಳನ್ನು ಉಳಿದ ವರ್ಗಗಳ ಮೇಲೆ ಹೊರಿಸಲು ತುತ್ತೂರಿಗಳು ಭಾರಿ ಕೆಲಸ ಮಾಡುತ್ತಿವೆ. ಮಧ್ಯಮ ವರ್ಗ, ಪುಟ್ಟ ಬೂರ್ಜ್ವಾ ವರ್ಗ, ಭೂಮಾಲಕರು, ಪೂರ್ಣ ವಿವರಗಳ ಅರಿವಿಲ್ಲದೆ ಈ ಧೋರಣೆ ನಮಗೆ ಅನುಕೂಲಕರ ಎಂಬ ಭ್ರಮೆ ಹುಟ್ಟಿಸಲು ಸಾಧ್ಯವಾಗಿದೆ. ಆದರೆ ಈ ನೀತಿಗಳಿಂದ ಈ ಎಲ್ಲಾ ಜನವಿಭಾಗಗಳಿಗೂ ತೀವ್ರವಾಗಿ ಪರಿಣಾಮ ತಟ್ಟುವುದರಿಂದ ಈ ಬೆಂಬಲ ಉಳಿಸಿಕೊಳ್ಳಲು ಸಾಧ್ಯವಾದೀತು ಎಂದು ಹೇಳುವುದು ಕಷ್ಟ.

ರಣ-ಜಾಗತೀಕರಣದ ಧೋರಣೆಗೆ ಬದಲಾವಣೆ ಬರಿಯ ಐ.ಎಂ.ಎಫ್.- ವಿಶ್ವಬ್ಯಾಂಕ್‌ನ ಒತ್ತಡದಿಂದ ಮಾತ್ರ ಬಂದದ್ದಲ್ಲ. ನಮ್ಮ ದೇಶದ ಗುತ್ತೇದಾರಿಗಳು ಇಂತಹ ನೀತಿಯ ಅಗತ್ಯ ಕಂಡಿದ್ದರು. 'ನೆಹರೂ ಮಾದರಿಯ ಯೋಜಿತ ಬೆಳವಣಿಗೆ' ಭಾರತದ ಗುತ್ತೇದಾರಿಗಳು ತಮ್ಮ ಹಿತಾಸಕ್ತಿ ಕಾಪಾಡಲು ಸರಕಾರವನ್ನು ಹೇಗೆ ಬಳಸಬಹುದು ಎಂಬುದರ ಬಗ್ಗೆ ರೂಪಿಸಿದ ಮಾದರಿ. ಆದರೆ ಪಾಶ್ಚಿಮಾತ್ಯ ಗುತ್ತೇದಾರಿಗಳಂತೆ ಇದು ಇತರ ವರ್ಗಗಳ ಬೆಂಬಲ ಪಡೆಯಲು, ಅಧಿಪತ್ಯ ಸ್ಥಾಪಿಸಲು ಕೊಟ್ಟ ರಿಯಾಯಿತಿಯಲ್ಲ. ದೇಶದ ಆರ್ಥಿಕದಲ್ಲಿ ತಾವು ಬೇರೂರಲು ಹಾಗೂ ವಸಾಹತುಶಾಹಿಯನ್ನು ಹಿಮ್ಮೆಟ್ಟಿಸಲು 'ನೆಹರೂ ಮಾದರಿ' ಅಗತ್ಯವಾಗಿತ್ತು. ಸ್ವಾತಂತ್ರ್ಯ ಚಳುವಳಿಯ ನಂತರ ಮೂಡಿಬಂದ ಸರಕಾರ ಬರಿಯ ಗುತ್ತೇದಾರಿಗಳ ಹಿತಾಸಕ್ತಿ ಮಾತ್ರ ಕಾಪಾಡಲು ಸಾಧ್ಯವಿರಲಿಲ್ಲ. ಅಧಿಪತ್ಯ ಸ್ಥಾಪಿಸಲು ಪುಟ್ಟ ಬಂಡವಾಳಶಾಹಿ, ಮಧ್ಯಮ ವರ್ಗ, ಕಾರ್ಮಿಕ, ರೈತರ ಬೆಂಬಲ ಅದಕ್ಕೆ ಅಗತ್ಯವಾಗಿತ್ತು. ಆದ್ದರಿಂದ ಅದು 'ಸಮಾಜವಾದ'ದ ಸೋಗು ಹಾಕಿದ್ದಲ್ಲದೆ ಇತರ ವರ್ಗಗಳಿಗೆ ಕೆಲವಾದರೂ ಸವಲತ್ತುಗಳನ್ನು ಕೊಡಬೇಕಾಯಿತು. ಆದರೆ ಬರಬರುತ್ತಾ ಗುತ್ತೇದಾರಿ ಪ್ರಬಲವಾದಂತೆ, 'ನೆಹರೂ ಮಾದರಿ'ಯಲ್ಲೇ ಅಡಗಿರುವ ವೈರುಧ್ಯಗಳು ಬಿಕ್ಕಟ್ಟಿನ ಸ್ವರೂಪ ಪಡೆಯುತ್ತಿದ್ದಂತೆ, ಬದಲಾವಣೆಯ ಅಗತ್ಯ ಅದಕ್ಕೆ ಕಂಡು ಬಂದಿದೆ. ಖಾಸಗೀಕರಣ ಆರ್ಥಿಕ ವ್ಯವಹಾರಗಳಲ್ಲಿ ಸರ್ಕಾರದ ಮಧ್ಯಪ್ರವೇಶದ ನಿಯಂತ್ರಣ ಕಡಿಮೆ ಮಾಡುವುದು, ಇತರ ವರ್ಗಗಳಿಗೆ ಕೊಡುವ ಸಬ್ಸಿಡಿಯಲ್ಲಿ ತೀವ್ರಕಡಿತ,- ಈ ನೀತಿಗಳು ಗುತ್ತೇದಾರಿಗಳಿಗೆ ಬೇಕಾಗಿದೆ. ಸಾರ್ವಜನಿಕ ಕ್ಷೇತ್ರದ ಸಂಪನ್ಮೂಲಗಳನ್ನು ಪೂರ್ಣವಾಗಿ ಗುತ್ತೇದಾರಿಗಳಿಗೆ (ಜಪಾನು, ಪಾಕಿಸ್ತಾನಗಳಂತೆ) ಕೊಟ್ಟುಬಿಡುವುದು ಅವರ ಉದ್ದೇಶವಾದರೂ ಮಿತಿಗಳಿಂದಾಗಿ ಭಾಗಶಃ ಖಾಸಗೀಕರಣದ ಬಗ್ಗೆ ಮಾತನಾಡುತ್ತಿದ್ದಾರೆ.

ಹಣದುಬ್ಬರ, ವಿದೇಶಿ ವಿನಿಮಯ ಸಮಸ್ಯೆ, ಬೆಳವಣಿಗೆ ದರದಲ್ಲಿ ಇಳಿತ, ದುಡಿಯುವ ಜನರ ಆದಾಯ ಇಳಿತ-ಇವು ಗುತ್ತೇದಾರಿಗಳು ಎದುರಿಸುತ್ತಿರುವ ಬಿಕ್ಕಟ್ಟಿನ ಸ್ವರೂಪ. ಈ ಬಿಕ್ಕಟ್ಟನ್ನು ಬಗೆಹರಿಸಲು ಭಾರತದ ಗುತ್ತೇದಾರಿಗಳಿಗೆ ಸಾಮ್ರಾಜ್ಯಶಾಹಿಗಳ ಬೆಂಬಲ ಬೇಕು. ಅದರಿಂದಾಗಿ ವಿದೇಶಿ ಗುತ್ತೇದಾರಿಗಳ ಹಿತಾಸಕ್ತಿ ಕಾಪಾಡುವುದು ಅವರ ನೀತಿಯಾಗುತ್ತಿದೆ ಜಾಗತೀಕರಣದ ಹೆಸರಿನಲ್ಲಿ.

ಭಾರತದ ಗುತ್ತೇದಾರಿಗಳೂ ಸಹ ತಮ್ಮ ಬಿಕ್ಕಟ್ಟನ್ನು ಇತರ ವರ್ಗಗಳಿಗೆ ದಾಟಿಸುವ ಮೂಲಕ ಸಮಸ್ಯೆ ಬಗೆಹರಿಸಲು ಪ್ರಯತ್ನಿಸುತ್ತಿವೆ. ಖಾಸಗೀಕರಣ-ಉದಾರೀಕರಣ- ಜಾಗತೀಕರಣ ಈ ಪ್ರಯತ್ನದ ಭಾಗ.



ಇತರೆಲ್ಲಾ ರಾಜ್ಯಗಳಲ್ಲಿ ಕಾಂಗ್ರೈ - ಬಿ.ಜೆ.ಪಿ.ಗಳನ್ನು ಸೋಲಿಸಿ

-- ಜ್ಯೋತಿಬಸು

ನಂತರ ಮಾತನಾಡಿದ ಜ್ಯೋತಿಬಸು ರವರೂ ಈ ಐಕ್ಯತೆಯ ಅಗತ್ಯವನ್ನು ಒತ್ತಿ ಹೇಳಿದರು. ನಾವು ಜನತಾದಳದ ವಿವಿಧ ಗುಂಪುಗಳನ್ನು ಇತರ ಪ್ರಜಾಪ್ರಭುತ್ವ ಶಕ್ತಿಗಳನ್ನು ವಿನಂತಿಸಿಕೊಳ್ಳುತ್ತಿದ್ದೇವೆ. ಒತ್ತಾಯದಿಂದ ಕೇಳುತ್ತಿದ್ದೇವೆ. ಇದನ್ನು ಸಾಧಿಸದಿದ್ದರೆ ಬಿಜೆಪಿಯ ಕೈ ಮೇಲಾದರೆ ಈ ದೇಶದ ಐಕ್ಯತೆ ಉಳಿಯುವುದಿಲ್ಲ ಎಂದೂ ಎಚ್ಚರಿಸಿದರು. ತಮ್ಮ ಭಾಷಣ ಆರಂಭದಲ್ಲಿ ಅವರು 16 ವರ್ಷ ಸತತವಾಗಿ ಪ.ಬಂಗಾಳದ ಜನತೆಯ ವಿಶ್ವಾಸವನ್ನು ಕಾದುಕೊಂಡ ಎಡರಂಗದಿಂದ, ಇತ್ತೀಚೆಗೆ ಮತ್ತೆ ಭಾರೀ ವಿಜಯಗಳಿಸಿದ ತ್ರಿಪುರಾ ಎಡರಂಗದಿಂದ ಕರ್ನಾಟಕ ಜನತೆಗೆ ನೆರೆದ ಸಾವಿರಾರು ಜನರಿಗೆ ಹಾರ್ದಿಕ ಅಭಿನಂದನೆಗಳನ್ನು ವ್ಯಕ್ತಪಡಿಸಿದ ಜ್ಯೋತಿಬಸು ದೇಶದ ಇತರೆಡೆಗಳಲ್ಲೂ ಜನಗಳು ಕಾಂಗ್ರೆಸ್ (ಐ) ಹಾಗೂ ಬಿಜೆಪಿಯನ್ನು ಸೋಲಿಸಬೇಕೆಂದು ನಮ್ಮ ಇಚ್ಛೆ ಎನ್ನುತ್ತಾ ಈ ಎರಡು ಪಕ್ಷಗಳನ್ನು ದೇಶದ, ಜನರ ಒಳಿತಿಗಾಗಿ ಏಕೆ ಸೋಲಿಸಬೇಕು ಎಂದು ವಿವರಿಸಿದರು. ಲೋಕಸಭಾ, ವಿಧಾನಸಭಾ ಚುನಾವಣೆಗಳಂತೆ ಪಂಚಾಯತ್ ಮುನ್ಸಿಪಾಲಿಟಿಗಳಿಗೂ ಪ್ರತಿ ಐದು ವರ್ಷಕ್ಕೊಮ್ಮೆ ಚುನಾವಣೆ ನಡೆಯಬೇಕೆಂಬ ಶಾಸನವೇ ಇರುವ ಏಕೈಕ ರಾಜ್ಯ ಪಶ್ಚಿಮ ಬಂಗಾಳ ಎಂದ ಅವರು ಆ ರಾಜ್ಯದಲ್ಲಿ ಎಡರಂಗ ಅಧಿಕಾರಕ್ಕೆ ಬರುವ ಮೊದಲು ಎರಡು ಮೂರು ದಶಕಗಳ ಕಾಲ ಜನಸಾಮಾನ್ಯರ ಹಿತಾಸಕ್ತಿಗಳನ್ನು ಎತ್ತಿಹಿಡಿಯಲು ನಿರಂತರ ಹೋರಾಟ ನಡೆಸಿತ್ತು. ಆದ್ದರಿಂದಲೇ ಇಂತಹ ಸಾಧನೆ ಸಾಧ್ಯವಾಯಿತು ಎಂದು ಹೇಳಿದರು.


ಐಕ್ಯತೆ ಬೆಸೆಯುವ ಸಿಮೆಂಟ್.............

ಪುಟ 1ರಿಂದ

...ಈಗಾಗಲೇ ಇಂತಹ ಹಲವಾರು ಯೋಜನೆಗಳು ಇದ್ದು ಇವುಗಳಲ್ಲಿ ಕೇವಲ 15 ಮಾತ್ರ ನಿಜವಾಗಿ ಅಗತ್ಯವಾದವರಿಗೆ ತಲುಪುತ್ತವೆ. ಉಳಿದೆಲ್ಲಾ ಮಧ್ಯವರ್ತಿಗಳ ಜೇಬಿಗಿಳಿಯುತ್ತವೆ ಎಂದು ...ದೇ ಕಾಂಗ್ರೈನ ಹಿಂದಿನ ಪ್ರಧಾನಿ ರಾಜೀವ್ ಗಾಂಧಿ ಹೇಳಿಲ್ಲವೇ ಎಂದು ನರಸಿಂಹರಾವ್ ...ರು ಕೆಂಪುಕೋಟೆಯಿಂದ ಸಾರಿದ ಹೊಸ ...ರು ಯೋಜನೆಗಳು ಕೇವಲ ತೋರಿಕೆ...ಗಿ ಎಂದು ಸುರ್ಜಿತ್ ವಿವರಿಸಿದರು. ಭೂ ...ಣೆಯ ಪ್ರಸ್ತಾಪ ಈ ಪ್ರಧಾನಿ ಭಾಷಣದಲ್ಲಿ ಎಲ್ಲೂ ಇರಲಿಲ್ಲ ಎಂಬುದರತ್ತ ಸು...ರ್ಜಿತ್ ಗಮನ ಸೆಳೆದರು.

...ಇವನ್ನೆಲ್ಲಾ ಪ್ರತಿರೋಧಿಸಬೇಕು. ಇದು ...ಂದು ಬಂದ್‌ನಿಂದಷ್ಟೇ ಸಾಧ್ಯವಿಲ್ಲ ನಾವು ಎಲ್ಲಾ ಶಕ್ತಿಗಳನ್ನು ಒಂದುಗೂಡಿಸಲು ಪ್ರಯತ್ನಿಸುತ್ತಿದ್ದೇವೆ. ಕರ್ನಾಟಕದಲ್ಲಿ ಜನತಾದಳ ಒಂದಾಗುವುದು ಸಾಧ್ಯವಾಗಿದೆ. ದೇಶಕಡೆಯೂ ಆಗಲೇಬೇಕು. ನಾವು ಎಡ-ಪ್ರಜಾಪ್ರಭುತ್ವ ಶಕ್ತಿಗಳು ಒಂದಾದರೆ ನಮ್ಮನ್ನು ಎದುರಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದರು ಸುರ್ಜಿತ್. ಎಡಶಕ್ತಿಗಳು ಈ ಐಕ್ಯತೆ ಬೆಸೆಯುವ ಸಿಮೆಂಟ್ ಇದ್ದಂತೆ.

ಪ್ರತಿ ಹಳ್ಳಿಗೆ ಹೋಗಿ- ನಿಮ್ಮ ಸಂಘಟನೆಗಳು ಬಲಯುತವಾದರೆ ಈ ಹೋರಾಟವು ಬಲಯುತವಾಗುತ್ತದೆ. ನೀವೆಲ್ಲಾ ನಿರ್ಣಾಯಕವಾಗಿ ಮಧ್ಯಪ್ರವೇಶಿಸಲು ಸಾಧ್ಯವಾಗುತ್ತದೆ ಎಂದು ಸುರ್ಜಿತ್ ರಾಜ್ಯದ ಮೂಲೆ ಮೂಲೆಗಳಿಂದ ಬಂದಿದ್ದ ಹೋರಾಟಗಾರರಿಗೆ ಕರೆ ನೀಡಿದರು.



ಬೃಹತ್ ರ್ಯಾಲಿಯನ್ನುದ್ದೇಶಿಸಿ ಹಿರಿಯ ಮುತ್ಸದ್ದಿ, ಸಿಪಿಐ(ಎಂ)ನ ಹಿಂದಿನ ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ರವರು 'ಭಾರತ್ ಬಂದ್' ದೇಶದ ಬಹುಪಾಲು ಜನರ ಯಶಸ್ವೀ ಕಾರ್ಯಾಚರಣೆಯಾಗಬೇಕು ಎಂದು ಕರೆ ನೀಡಿದರು.

ಬಿ.ಜೆ.ಪಿ.ಯ ಕನಸು ನನಸಾಗದು

-- ಸೂರಿ

ರ್ಯಾಲಿಯ ಅಧ್ಯಕ್ಷತೆ ವಹಿಸಿದ್ದ ಸಿಪಿಐ(ಎಂ) ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯ ಎಸ್. ಸೂರ್ಯನಾರಾಯಣ ರಾವ್ ಅವರೂ ಕರ್ನಾಟಕದಲ್ಲಿ 'ಭಾರತ ಬಂದ್' ಸಂಪೂರ್ಣ ಯಶಸ್ವಿಯಾಗುತ್ತದೆ ಎಂದರು. ಇದೇ ನಗರದಲ್ಲಿ ರಾಷ್ಟ್ರೀಯ ಕೌನ್ಸಿಲ್ ಸಭೆ ನಡೆಸಿ ಅಡ್ವಾಣಿಯವರು ಪ್ರಧಾನಿಯಾಗುವ, ಯಡಿಯೂರಪ್ಪನವರು ಮುಖ್ಯಮಂತ್ರಿಯಾಗುವ ಕನಸು ಕಂಡಿದ್ದಾರೆ. ಆದರೆ ಕರ್ನಾಟಕದಲ್ಲಿ ಕಾರ್ಮಿಕ ವರ್ಗ ಇದೆ. ದುಡಿಯುವ ಜನತೆ, ಪ್ರಜಾಪ್ರಭುತ್ವ ಶಕ್ತಿಗಳು ಅದಕ್ಕೆ ಅವಕಾಶ ಕೊಡುವುದಿಲ್ಲ ಎಂದರು. ರಾಜ್ಯದಲ್ಲಿ ಜುಲೈ 14ರ ಮುಷ್ಕರದಲ್ಲಿ ಮುಂದಿಟ್ಟ ಅಸಂಘಟಿತರ ಕನಿಷ್ಟ ಕೂಲಿಯ ಬೇಡಿಕೆಯನ್ನು ರಾಜ್ಯ ಸರಕಾರ ಈಡೇರಿಸದಿದ್ದರೆ ಅನಿರ್ದಿಷ್ಟ ಕಾಲದ ಮುಷ್ಕರ ಸಂಘಟಿಸಲಾಗುತ್ತದೆ. ಕೃಷಿ ಕಾರ್ಮಿಕರ ಹೋರಾಟವನ್ನು ಸಂಘಟಿಸಲಾಗುತ್ತದೆ ಎಂದು ಸೂರಿ ಹೇಳಿದರು. ಜನತಾದಳದವರಿಗೂ ಒಂದು ಕಿವಿಮಾತು ಹೇಳಿದರು. ಕೇವಲ ಪೇಪರ್ ಹೇಳಿಕೆಗಳಿಂದಲೇ ಜನರಲ್ಲಿ ವಿಶ್ವಾಸ ಮತ್ತೆ ಮೂಡುವುದಿಲ್ಲ ನಿಮ್ಮ ಹಳ್ಳಿಗೆ ಹೋಗಿ ಒಂದಾಗಿ ಕೆಲಸ ಮಾಡೋಣ, ಕೋಮುವಾದಿಗಳನ್ನು ಮೂಲೆ ಗುಂಪು ಮಾಡೋಣ ಎಂದು ಕರೆಯಿತ್ತರು.

ಬಂಗಾರಪೇಟೆ ತಾಲೂಕಿನಲ್ಲಿ ವಾರಾಚರಣೆ

ಬಂಗಾರಪೇಟೆ : ಹೊಸ ಆರ್ಥಿಕ ...ತಿ ಹಾಗೂ ಕೋಮುವಾದವನ್ನು ವಿರೋಧಿಸಿ ...ಂಗಾರಪೇಟೆ ತಾಲ್ಲೂಕಿನಲ್ಲಿ ನಡೆದ ಕಾರ್ಯಕ್ರಮಗಳ ವಿವರ ಕೆಳಕಂಡಂತಿವೆ.

ಆಗಸ್ಟ್ 9 : (ವಿದ್ಯಾರ್ಥಿ -ಯುವಜನ ಸಂಘಟನೆಗಳು) ಎಸ್.ಎಫ್. ಐ ಮತ್ತು ಡಿ.ವೈ. ಎಫ್‌ನ ಕೆ.ಜಿ.ಎಫ್ ಘಟಕಗಳು ಸೈಕಲ್ ರ್ಯಾಲಿ ನಡೆಸಿದವು. ಸುಮಾರು 100 ವಿದ್ಯಾರ್ಥಿ, ಯುವಜನರು ಪಾಲ್ಗೊಂಡಿದ್ದರು. ಮಾರಿಕುಪ್ಪಂನಲ್ಲಿ ...ರ್ಯಾಲಿಯನ್ನು ಸಿಐಟಿಯು ಮುಖಂಡ ಟಿ. ಶ್ರೀನಿವಾಸ್ ಉದ್ಘಾಟಿಸಿದರು. ನಗರದ ಪ್ರಮುಖ ಬೀದಿಗಳನ್ನು ಹಾದು ರ್ಯಾಲಿ ರಾಬರ್ಟ್‌ಸನ್ ಪೇಟೆ ಗಾಂಧಿ ವೃತ್ತದಲ್ಲಿ ಮುಕ್ತಾಯವಾಯಿತು. ಸಿಐಟಿಯು ಮುಖಂಡ ಮಾಜಿ ಎಮ್‌ಎಲ್‌ಎ ಕಾಂ. ಟಿ.ಎಸ್. ಮಣಿ, ವಕೀಲರಾದ ಕಾಂ. ...ಸ್. ಬಾಲನ್ ಎಸ್.ಎಫ್.ಐ ಮತ್ತು ಡಿ.ವೈ. ಎಫ್.ಐ ಮುಖಂಡರುಗಳಾದ ಕಾಂ. ವಶರನ್, ಎ.ಆರ್. ಬಾಬು, ಎಸ್. ಆನಂದನ್, ...ಸ್. ರವಿಚಂದರ್ ಮಾತನಾಡಿದರು.

ಎಸ್.ಎಫ್.ಐ ಮತ್ತು ಡಿ.ವೈ.ಎಫ್.ಐ ಬಂಗಾರಪೇಟೆ ಘಟಕಗಳಿಂದ ಬಂಗಾರಪೇಟೆಯಲ್ಲಿ ಟೆಂಪೋ ಜಾಥಾ ನಡೆಸಲಾಯಿತು. ಅಪರಾಹ್ನ 3 ಗಂಟೆಯಿಂದ 6.30 ಗಂಟೆ ತನಕ ನಡೆದ ಜಾಥಾದಲ್ಲಿ 4 ಪ್ರಮುಖ ಭಾಗಗಳಲ್ಲಿ ಬೀದಿ ಬೀದಿಯ ಸಭೆಗಳನ್ನು ಯಶಸ್ವಿಯಾಗಿ ನಡೆಸಲಾಯಿತು. ಮೈಕ್ ಅಳವಡಿಸಿದ ಟೆಂಪೋಗೆ ಬಾವುಟ ಮತ್ತು ಬ್ಯಾನರ್‌ಗಳನ್ನು ಕಟ್ಟಲಾಗಿತ್ತು. ಮೂವತ್ತು ವಿದ್ಯಾರ್ಥಿ, ಯುವಜನರು ಮಹಿಳೆಯರು ಜಾಥಾದಲ್ಲಿ ಪಾಲ್ಗೊಂಡಿದ್ದರು. ಬೀದಿ ಬದಿಯ ಸಭೆಗಳಲ್ಲಿ ನೂರು ಇನ್ನೂರು ಸಾರ್ವಜನಿಕರು ಭಾಗವಹಿಸಿದ್ದರು. ಬಿ.ಇ.ಎಮ್. ಎಲ್. ಕಾರ್ಮಿಕ ಮುಖಂಡ ಕಾಂ. ಜಿ. ಅರ್ಜುನನ್, ಡಿ.ವೈ.ಎಫ್.ಐ ಮಾಜಿ ಜಿಲ್ಲಾಧ್ಯಕ್ಷ ಕಾಂ. ಪಿ. ಶ್ರೀನಿವಾಸ್ ಈ ಸಭೆಗಳಲ್ಲಿ ಹೊಸ ಆರ್ಥಿಕ ನೀತಿ ಹಾಗೂ ಬಿಜೆಪಿ ಆರ್‌ಎಸ್‌ಎಸ್, ವಿ.ಹೆಚ್.ಪಿ.ಗಳ ಕೋಮುವಾದವನ್ನು ಖಂಡಿಸಿ ಮಾತನಾಡಿದರು. ಎಸ್. ಎಫ್.ಐ. ಡಿ.ವೈ.ಎಫ್.ಐ. ಕಾರ್ಯಕರ್ತರುಗಳ ಕೋಲಾಟ ಹಾಗೂ ಹಾಡುಗಳ ಕಾರ್ಯಕ್ರಮ ನಡೆಸಲಾಯಿತು. ಸಾವಿರ ಕರಪತ್ರಗಳನ್ನು ಮುದ್ರಿಸಿ ಹಂಚಲಾಯಿತು.

ಡಿ.ವೈ.ಎಫ್.ಐ ನ ಚಿಕ್ಕಕೋಟೆ ಘಟಕದ ಆಶ್ರಯದಲ್ಲಿ ಸೈಕಲ್ ರ್ಯಾಲಿ ನಡೆಯಿತು. ಸುಮಾರು 50 ಯುವಜನರು ಪಾಲ್ಗೊಂಡಿದ್ದ ... ಬೆಮೆಲ್ ನಗರ ಹಾಗೂ ಸುತ್ತಮುತ್ತಲಿನ ಮುಖ್ಯ ಬಡಾವಣೆಗಳಲ್ಲಿ ಚಲಿಸಿತು. ಬೆಮೆಲ್ ನಗರದ ಎ. ಟೈಪ್‌ನಲ್ಲಿ ರ್ಯಾಲಿಯನ್ನು ಡಿ.ವೈ. ಎಫ್.ಐ ಸಂಚಾಲಕ ಕಾಂ. ರವೀಂದ್ರ ಉದ್ಘಾಟಿಸಿದರು. ಆಲದ ಮರದ ಬಳಿ ರ್ಯಾಲಿ ಮುಕ್ತಾಯವಾಯಿತು. ಮುಕ್ತಾಯ ಸಮಾರಂಭದಲ್ಲಿ ಸಿಐಟಿಯು ಮುಖಂಡ ಜಿ. ಅರ್ಜುನನ್, ಅಚ್ಯುತಾ, ವೀರ ಕರುಪ್ಪಯ್ಯ ಹೊಸ ಆರ್ಥಿಕ ನೀತಿ ಹಾಗೂ ಕೋಮುವಾದದ ಅಪಾಯಗಳನ್ನು ವಿವರಿಸಿ ಮಾತನಾಡಿದರು. ರವೀಂದ್ರ ಸ್ವಾಗತಿಸಿದರು. ಹನುಮಂತರಾಯ ಅಧ್ಯಕ್ಷತೆ ವಹಿಸಿದರು. ರಘುಪತಿ ವಂದನೆ ಸಲ್ಲಿಸಿದರು. ಡಿ.ವೈ.ಎಫ್.ಐ ಬಾವುಟ ಪ್ಲೇಕಾರ್ಡ್‌ಗಳೊಂದಿಗೆ ರ್ಯಾಲಿ ಯಶಸ್ವಿಯಾಗಿ ನಡೆಯಿತು.

ಆಗಸ್ಟ್ 10 : (ಮಹಿಳಾ ಸಂಘಟನೆಗಳು)

ಎ.ಐ.ಡಿ.ಡಬ್ಲ್ಯು.ಎ. ಬೆಮೆಲ್‌ನಗರ ಘಟಕದ ಆಶ್ರಯದಲ್ಲಿ ಬೆಮೆಲ್‌ನಗರದಲ್ಲಿ ಮಹಿಳೆಯರ ಸಭೆ ನಡೆಯಿತು. ಸುಮಾರು ನಲವತ್ತು ಮಹಿಳೆಯರು ಭಾಗವಹಿಸಿದ್ದ ಸಭೆಗೆ ಎ.ಐ.ಡಿ. ಡಬ್ಲ್ಯು.ಎ. ಸಂಚಾಲಕಿ ಫ್ಲೋರಾ ಅಧ್ಯಕ್ಷತೆ ವಹಿಸಿದ್ದರು. ಸಿ.ಐ.ಟಿ. ಯು. ಮುಖಂಡ ಜಿ. ಅರ್ಜುನನ್, ಸಮುದಾಯ ರಾಜ್ಯ ಜಂಟಿ ಕಾರ್ಯದರ್ಶಿ ಅಚ್ಯುತಾ ಹಾಗೂ ಡಿ.ವೈ.ಎಫ್.ಐ ಮಾಜಿ ಜಿಲ್ಲಾಧ್ಯಕ್ಷ ಪಿ. ಶ್ರೀನಿವಾಸ್ ಹೊಸ ಆರ್ಥಿಕ ನೀತಿ ಹಾಗೂ ಕೋಮುವಾದದ ಅಪಾಯಗಳನ್ನು ವಿವರಿಸಿ ಮಾತನಾಡಿದರು. ಇವುಗಳ ವಿರುದ್ಧ ನಡೆಯುವ ಹೋರಾಟಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕಾದ ಅಗತ್ಯವನ್ನು ಒತ್ತಿ ಹೇಳಲಾಯಿತು. ಸಭೆ ಯಶಸ್ವಿಯಾಗಿ ನಡೆಯಿತು. ಶಾರದ ಗುರ್ಲ ಹೊಸೂರ್ ಸ್ವಾಗತಿಸಿದರು. ವನಿತಾ ವಂದನೆ ಸಲ್ಲಿಸಿದರು.

ಬಂಗಾರಪೇಟೆಯ ಹನುಮಪ್ಪ ಛತ್ರದಲ್ಲಿ ಎ.ಐ.ಡಿ.ಡಬ್ಲ್ಯು.ಎ. ಬಂಗಾರಪೇಟೆ ಮಹಿಳೆಯರು ಭಾಗವಹಿಸಿದ್ದರು. ಕಾಂ. ಅಮಲ ಸ್ವಾಗತಿಸಿದರು. ಕಾಂ. ಫ್ಲೋರಾ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯು ಮುಖಂಡ ಜಿ. ಅರ್ಜುನನ್ ಹಾಗೂ ಡಿ.ವೈ.ಎಫ್.ಐ. ಮಾಜಿ ಜಿಲ್ಲಾಧ್ಯಕ್ಷ ಪಿ. ಶ್ರೀನಿವಾಸ್ ಹೊಸ ಕೋಮುವಾದದ ಅಪಾಯಗಳನ್ನು ವಿವರಿಸಿ ಮಾತನಾಡಿದರು. ಎಡ ಪಕ್ಷಗಳ ಪರ್ಯಾಯ ಆರ್ಥಿಕ ನೀತಿಯನ್ನು ವಿವರಿಸಿದರು. ಕಾಂ. ಜಯಲಕ್ಷ್ಮಿ ವಂದನೆ ಸಲ್ಲಿಸಿದರು.

ಆಗಸ್ಟ್ 11 : (ಕಾರ್ಮಿಕ ಸಂಘಟನೆಗಳು) ಸಿಐಟಿಯುವಿನ ಕೆ.ಜಿ.ಎಫ್ ಘಟಕ 3000 ಕರಪತ್ರಗಳನ್ನು ಮುದ್ರಿಸಿ ಹಂಚಿತು.

ಆಗಸ್ಟ್ 13 : (ಸಾಂಸ್ಕೃತಿಕ ಸಂಘಟನೆಗಳು) ರಾಷ್ಟ್ರೀಯ ಏಕತಾ ಆಂದೋಲನದ ಬೆಮೆಲ್ ನಗರದ ಘಟಕದ ಆಶ್ರಯದಲ್ಲಿ ಸಮುದಾಯ ಬೆಮೆಲ್‌ನಗರ ಘಟಕದಿಂದ ವಿಜಯನಗರ ಮತ್ತು ಬಿ.ಇ.ಎಮ್.ಎಲ್. ಎ. ಟೈಪ್ ಕ್ವಾರ್ಟರ್ಸ್‌ನಲ್ಲಿ ಬೀದಿ ನಾಟಕ "ನಮ್ಮ ಚರಿತ್ರೆ" (ನಿರ್ದೇಶನ ಚೊಕ್ಕಲಿಂಗಂ) ಪ್ರದರ್ಶಿತವಾಯಿತು. ವಿಜಯನಗರದಲ್ಲಿ ಸಂಜೆ 5.30ಕ್ಕೆ ನಡೆಯಿತು. ಈ ಸಂದರ್ಭದಲ್ಲಿ ಏಕತಾ ಆಂದೋಲನದ ಸ್ಥಳೀಯ ಸಂಚಾಲಕ ಕೆ. ತಾರನಾಥ, ಸಿಐಟಿಯು ಮುಖಂಡ ಜಿ. ಅರ್ಜುನನ್, ಸಮುದಾಯದ ಅಚ್ಯುತಾ ಹೊಸ ಆರ್ಥಿಕ ನೀತಿ ಹಾಗೂ ಕೋಮುವಾದದ ಅಪಾಯಗಳ ಬಗ್ಗೆ ವಿವರಿಸಿ ಮಾತನಾಡಿದರು. ಮೇಘರಾಜ್, ಜನಾರ್ಧನ ಹಾಗೂ ಸಂಗಡಿಗರು ಕ್ರಾಂತಿ ಗೀತೆಗಳನ್ನು ಹಾಡಿದರು. ಸಮುದಾಯದ ಕಾರ್ಯದರ್ಶಿ ರವೀಂದ್ರ ವಂದನೆ ಸಲ್ಲಿಸಿದರು. ಎ.ಟೈಪ್ ಕ್ವಾಟರ್ಸ್‌ನಲ್ಲಿ ರಾತ್ರಿ 8 ಗಂಟೆಗೆ ಬೀದಿ ನಾಟಕ ಪ್ರದರ್ಶನಗೊಂಡಿತು. ಮಳೆ ಸುರಿಯುತ್ತಿದ್ದರೂ ಜನ ಕೊಡೆ ಹಿಡಿದು ನಾಟಕವನ್ನು ನೋಡಿದರು. ಸಿಐಟಿಯು ಮುಖಂಡ ಜಿ. ಅರ್ಜುನನ್ ಮಾತನಾಡಿದರು. ರವೀಂದ್ರ ಸ್ವಾಗತ ಹಾಗೂ ವಂದನೆ ಸಲ್ಲಿಸಿದರು.

ಬಂಗಾರಪೇಟೆ ತಾಲೂಕಿನ ಇತರ ಕಡೆಗಳಲ್ಲೂ ಬೀದಿ ನಾಟಕವನ್ನು ಪ್ರದರ್ಶಿಸಲು ತೀರ್ಮಾನಿಸಲಾಗಿದೆ.

ಆಗಸ್ಟ್ 14 : (ರಾಜಕೀಯ ಪಕ್ಷಗಳು) ಸಿಪಿಐ(ಎಂ)ನ ಬಂಗಾರಪೇಟೆ ತಾಲ್ಲೂಕು ಸಮಿತಿ ಆಶ್ರಯದಲ್ಲಿ ಮೆರವಣಿಗೆಯನ್ನು ನಡೆಸಲಾಯಿತು. ಸಂಜೆ 5.30 ಗಂಟೆಗ ಪಕ್ಷದ ಆಂಡರ್‌ಸನ್ ಪೇಟೆ ಕಚೇರಿಯಿಂದ ಪ್ರಾರಂಭಗೊಂಡ ಮೆರವಣಿಗೆ ನಗರದ ಮುಖ್ಯ ಬೀದಿಗಳಲ್ಲಿ ಚಲಿಸಿ ಊರುಗಾವ್ ರೈಲು ನಿಲ್ದಾಣದಲ್ಲಿ ಮುಕ್ತಾಯಗೊಂಡಿತು. ಸಿಐಟಿಯು ಮುಖಂಡ, ಮಾಜಿ ಎಮ್.ಎಲ್.ಎ. ಟಿ.ಎಸ್ ಮಣಿ ಸಮಾರೋಪ ಭಾಷಣ ಮಾಡಿ ಹೊಸ ಆರ್ಥಿಕ ನೀತಿ ಹಾಗೂ ಕೋಮುವಾದದ ವಿರುದ್ಧ ತೀವ್ರ ಹೋರಾಟಕ್ಕೆ ತಯಾರಾಗಲು ಕರೆ ನೀಡಿದರು. ಕರಪತ್ರಗಳನ್ನು ಮುದ್ರಿಸಿ ಹಂಚಲಾಯಿತು.

ವರದಿ ಪಿ. ಶ್ರೀನಿವಾಸ್

ಡಿ.ವೈ.ಎಫ್.ಐ ಕಚೇರಿ ಪ್ರಾರಂಭ

ಸಾಲಿಗ್ರಾಮ : ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ. ಎಫ್.ಐ) ಸಾಲಿಗ್ರಾಮ ಘಟಕವು ತನ್ನ ಚಟುವಟಿಕೆಗಳ ವಿಸ್ತರಣೆಗಾಗಿ ಒಂದು ಕಚೇರಿಯನ್ನು ಪ್ರಾರಂಭಿಸಿದೆ. ನೂತನ ಕಚೇರಿಯ ಉದ್ಘಾಟನೆ ದಿನಾಂಕ ಆಗಸ್ಟ್ 8, 1993 ರಂದು ಡಿ.ವೈ.ಎಫ್.ಐ ಕುಂದಾಪುರ ತಾಲೂಕು ಸಮಿತಿ ಕಾರ್ಯದರ್ಶಿ ಎಚ್. ನರಸಿಂಹರವರು ನೆರವೇರಿಸಿದರು. ಈ ಸಂದರ್ಭದಲ್ಲಿ ನಡೆದ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಅವರು ಯುವಜನತೆ ಇಂದು ಸ್ಥಳೀಯ ಸಮಸ್ಯೆಗಳ ಜೊತೆ ದೇಶದ ರಾಜಕೀಯ ವಿಚಾರಗಳಿಗೂ ಗಮನ ಹರಿಸಬೇಕಾದ ಅವಶ್ಯಕತೆ ಇದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಘಟಕದ ಅಧ್ಯಕ್ಷರಾದ ಶ್ರೀನಗೇಂದಿಕೇರಿ ಯವರು ವಹಿಸಿದ್ದರು. ಮುಖ್ಯ ಕಾರ್ಯಕರ್ತರಾದ ಗೋಪಾಲ, ಮತ್ತು ಮಂಜುನಾಥರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಕಾರ್ಯದರ್ಶಿ ಸುಧಾಕರ ಭಂಡಾರಿ ಸ್ವಾಗತಿಸಿ, ಗೋಪಾಲ ವಂದಿಸಿದರು. ಸಿಹಿ ತಿಂಡಿ ವಿತರಣೆ ಮಾಡಲಾಯ್ತು.

ದಾರಿದ್ರ್ಯದ ದವಡೆಗೆ ಜನಸಾಮಾನ್ಯರು : ಪಿ.ಆರ್. ಆತಂಕ

ಮಂಗಳೂರು : ಐ.ಎಂ.ಎಫ್. ಮತ್ತು ವಿಶ್ವಬ್ಯಾಂಕಿನ ಒತ್ತಡಗಳಿಗೆ ಮಣಿದು ನರಸಿಂಹ ರಾವ್ ಸರಕಾರ ಜಾರಿ ಮಾಡುತ್ತಿರುವ ಆರ್ಥಿಕ ಮತ್ತು ಕೈಗಾರಿಕಾ ನೀತಿಗಳಿಂದಾಗಿ ದೇಶದ ಆರ್ಥಿಕ ಸಾರ್ವಭೌಮತೆ, ಸ್ವಾತಂತ್ರ್ಯ ಮತ್ತು ಸ್ವಾಭಿಮಾನಕ್ಕೆ ಗಂಭೀರವಾದ ಅಪಾಯ ಒದಗಿ ಬಂದಿದ್ದು, ಜನಸಾಮಾನ್ಯರನ್ನು ದಾರಿದ್ರ್ಯದ ದವಡೆಗೆ ನೂಕಲಾಗುತ್ತಿದೆ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಪಿ. ರಾಮಚಂದ್ರ ರಾವ್ ಅವರು ಎಚ್ಚರಿಸಿದ್ದಾರೆ. ದೇಶದ ವಿವಿಧ ಸಾಮೂಹಿಕ ಸಂಘಟನೆಗಳು ಕರೆ ನೀಡಿದ್ದ ಆಗಸ್ಟ್ 19ರ ಜೈಲ್ ಭರೋ ಮತ್ತು ಸೆಪ್ಟೆಂಬರ್ 9ರ ಭಾರತ್ ಬಂದ್ ಕಾರ್ಯಕ್ರಮಗಳ ಬೆಂಬಲಾರ್ಥವಾಗಿ ಆಗಸ್ಟ್ 13 ರಂದು ಮಂಗಳೂರಿನ ನೆಹರೂ ಮೈದಾನದಲ್ಲಿ ಸಿಪಿಐ(ಎಂ), ಸಿಪಿಐ ಮತ್ತು ಜನತಾದಳದ ಜಿಲ್ಲಾ ಸಮಿತಿಗಳ ಜಂಟೀ ಆಶ್ರಯದಲ್ಲಿ ಜರಗಿದ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಸಭೆಯ ಅಧ್ಯಕ್ಷತೆಯನ್ನು ಸಿಪಿಐ(ಎಂ) ಜಿಲ್ಲಾ ಸೆಕ್ರೆಟಾರಿಯಟ್ ಸದಸ್ಯರಾದ ಬಿ. ಮಾಧವರವರು ವಹಿಸಿದ್ದರು.

ಸಿಪಿಐ ಮುಂದಾಳು ಎಚ್. ಉಮಾನಾಥ ನಾಯಕರು ಮಾತನಾಡುತ್ತಾ ಸಾರ್ವಜನಿಕ ಕ್ಷೇತ್ರದ ಖಾಸಗೀಕರಣದಿಂದಾಗಿ ದೇಶದ ಆರ್ಥಿಕತೆಯ ಮೇಲೆ ಮತ್ತು ಕಾರ್ಮಿಕ ವರ್ಗದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳನ್ನು ವಿವರಿಸಿದರು.

ಅಧ್ಯಕ್ಷಸ್ಥಾನದಿಂದ ಮಾತನಾಡಿದ ಬಿ. ಮಾಧವರವರು ಸರಕಾರದ ಹೊಸ ಕೈಗಾರಿಕಾ ನೀತಿ ದೇಶದ ಪ್ರಗತಿಗೆ ಮಾರಕವಾಗಲಿದೆ ಎಂದು ಎಚ್ಚರಿಸಿದರು.

ಕೆ. ಮೂಸಬ್ಬರವರು ಸ್ವಾಗತಿಸಿದರು. ಬೋಜಕೋಟ್ಯಾನ್ ವಂದಿಸಿದರು.

ಕಾಂ. ಲಕ್ಷ್ಮಣ ನಾಯಕ್ ನಿಧನ

ದ.ಕ. ಜಿಲ್ಲೆಯ ಮುನ್ನೂರು ಗ್ರಾಮದಲ್ಲಿ ಸಿಪಿಐ(ಎಂ) ಸ್ಥಾಪಕರಲ್ಲಿ ಒಬ್ಬರಾದ ಸೋಮನಾಥ ಉಳಿಯ ಲಕ್ಷ್ಮಣ ನಾಯಕ್ ಇತ್ತೀಚೆಗೆ ಮೃತಪಟ್ಟರು. ಇವರಿಗೆ 80 ವರ್ಷ ವಯಸ್ಸಾಗಿತ್ತು. ಇವರ ನಿಧನಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಉಳ್ಳಾಲ ವಲಯ ಸಮಿತಿ ಅತೀವ ಸಂತಾಪ ವ್ಯಕ್ತಪಡಿಸಿದೆ.

ದಿವಂಗತ ನಾಯಕ್ ಅವರು ಪಕ್ಷದ ನಿಷೇಧವಿದ್ದ ಕಾಲದಲ್ಲಿ ಪೋಲೀಸರು ಮರ್ದನವನ್ನು ಎದುರಿಸಿ ಸಂಘಟನೆ ಕೆಲಸ ಮಾಡಿದ್ದಾರೆ. ಜೀವನದ ಕೊನೆಕಾಲದವರೆಗೂ ಪಕ್ಷಕ್ಕೆ ನಿಕಟರಾಗಿದ್ದರು.

ಗುಂಡೂರಾವ್ ನಿಧನಕ್ಕೆ ಸಂತಾಪ

ಕರ್ನಾಟಕ ಮಾಜಿ ಮುಖ್ಯಮಂತ್ರಿ ಶ್ರೀ ಆರ್. ಗುಂಡೂರಾವ್‌ರವರ ನಿಧನಕ್ಕೆ ಸಿಪಿಐ(ಎಂ) ರಾಜ್ಯ ಸಮಿತಿ ತನ್ನ ಸಂತಾಪವನ್ನು ವ್ಯಕ್ತಪಡಿಸಿದೆ. ಮೃತರ ಕುಟುಂಬದ ಸದಸ್ಯರಿಗೆ ತನ್ನ ಸಂತಾಪವನ್ನು ವ್ಯಕ್ತಪಡಿಸಿದೆ.

ಬೇಸಾಯ .... ನೀಸಾಯ........................ ಮನೆ ಮಂದಿಯೆಲ್ಲ ಸಾಯ..........!?

ಕೆಲವು ಸಾಹಿತಿಗಳು, ಕವಿಗಳು, ಒಕ್ಕಲಿಗನೊಕ್ಕ-ದೊಡೆ ಜಗವೆಲ್ಲ ಬಿಕ್ಕುವುದು.........! ಎಂದರು. ಕೆಲವು ಸಮಾಜ ವಿಜ್ಞಾನಿಗಳು, ರಾಜಕಾರಣಿಗಳು, ಇತರರು. 'ರೈತ ದೇಶದ ಬೆನ್ನಲುಬು'........! ಎಂದರು. ಈ ಜಗತ್ತು ಮತ್ತು ದೇಶದ ಬಗ್ಗೆ ಬೇರೆ ಬೇರೆ ಅರ್ಥೈಸು-ತ್ತಿರುವುದರಿಂದ ತೆಲುಗಿನ ಮಹಾಕವಿ ಶ್ರೀ ಶ್ರೀ ಹೇಳಿ-ದರು. 'ದೇಶಮಂಟ ಮಟ್ಟಿಕಾದೊಯ್, ದೇಶ ಮಂಟೆ ಮನುಷಲು' ದೇಶಯುವರು ಏನೆಲ್ಲ ಹೇಳಿದರು, 88 ಕೋಟಿ ದೇಶದ ಬಕಾಸುರ ಹೊಟ್ಟೆಗೆ

'ಗಂಜಿ ಸುರಿಯುವ ರೈತ ಹೇಳುವುದೇ ಬೇರೆ, ಅವನ ಅನುಭವವೇ ಬೇರೆಯಾಗಿದೆ.

ಬೇಸಾಯ ಅಂದ್ರೆ, ನೀಸಾಯ.... ನಿಮ್ಮಪ್ಪ ಸಾಯ.... ನಿಮ್ಮಮ್ಮ ಸಾಯ ಮನೆಮಂದಿಯೆಲ್ಲಾ ಸಾಯ.......!? ಈ ರೀತಿ ರೈತರ ಅನುಭವ ಹರಳು ಗಟ್ಟಿ ಗಾದೆಯಾಗಿದೆ. ಈ ಮಾತು ಬಹಳ ಸ್ಪಷ್ಟ ವಾಗಿ ಬೇಸಾಯ ಒಂದು ಲಾಭದಾಯಕ ಉದ್ಯಮ ವಲ್ಲವೆಂಬುದನ್ನು ಸಾರಿ ಸಾರಿ ಹೇಳುತ್ತದೆ. ಈ ಗಾದೆ ನೂರಾರು ವರ್ಷಗಳಷ್ಟು ಹಿಂದೆಯೇ ಉದ್ಭವಿಸಿರಬಹುದಾದರೂ, ಸ್ವಾತಂತ್ರ್ಯಾ ನಂತರ ಕಳೆದ 5 ದಶಕಗಳಲ್ಲೂ, ಅದರಲ್ಲೂ ಮುಖ್ಯವಾಗಿ ಕಳೆದ ಒಂದು ದಶಕದಿಂದ ಆಳುವ ಸರ್ಕಾರ ಅನುಸರಿಸುತ್ತಿರುವ ಭೂಮಾಲಕ-ಬಂಡವಾಳಶಾಹಿ ಪಥದ ಹೊಸ ಆರ್ಥಿಕ ನೀತಿಯ ಹಾಗೂ ಆಮದು ನೀತಿಗಳು ಒಂದೆಡೆ ರೈತರ ಉತ್ಪಾದನಾ ವೆಚ್ಚ ವನ್ನು ತೀವ್ರ ರೀತಿಯಲ್ಲಿ ಏರಿಸಿ, ಮತ್ತೊಂದೆಡೆ ಬೆಳೆಯ ಬೆಲೆಯನ್ನು ತೀವ್ರ ಕುಸಿಯುವಂತೆ ಮಾಡುವ ಹಾಗೂ ಡಂಕೆಲ್ ಪ್ರಸ್ತಾಪ ಕುರಿತು ಚರ್ಚಿಸುತ್ತಿರುವ- ಆ ದಿಶೆಯಲ್ಲಿ ಕೇಂದ್ರಸರ್ಕಾರ ಹೆಜ್ಜೆ ಇಡುತ್ತಿರುವ ಈ ಸಂದರ್ಭ ದಲ್ಲಿಯೂ ಸಹ ಸ್ಪಷ್ಟವಾಗಿ ಅನ್ವಯಿಸುತ್ತದೆ. ಮೇಲೆ ಹೇಳಲಾದ ಗಾದೆ ಮಾತು.

ಈ ಕುರಿತು ಬಡ ರೈತರ ಜೊತೆ ಸಂವಾದಕ್ಕಿಳಿದು ಅಧ್ಯಯನಕ್ಕೆ ತೊಡಗಿದರೆ ಈ ಮಾತಿನ ಆಳ-ಅಗಲ ಅರ್ಥವಾಗುತ್ತಿದೆ.

'ಭತ್ತವು ರಾಜ್ಯದ 2 ನೇ ಪ್ರಮುಖ ಬೆಳೆಯಾಗಿದೆ ರಾಜ್ಯದ 30 ಲಕ್ಷ ಎಕರೆ ಪ್ರದೇಶದಲ್ಲಿ ಬೆಳೆಯಲಾಗುತ್ತದೆ. ನೀರಾವರಿಗೆ ಪ್ರದೇಶದಲ್ಲಿ ಭತ್ತಕ್ಕೆ ಪ್ರತಿ ಎಕರೆಗೆ ಬರುವ ವೆಚ್ಚ ಹಾಗೂ ಆದಾಯದ ಹಿನ್ನೆಲೆಯಲ್ಲಿ ಮೇಲೆ ತಿಳಿಸಲಾದ ಮಾತುಗಳನ್ನು ಗಮನಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಕೋಷ್ಟಕದಲ್ಲಿ ತಿಳಿಸಲಾದ ಭತ್ತದ ಆದಾಯ-ವೆಚ್ಚದಲ್ಲಿ ಬೀಜೋಪಚಾರದ ಖರ್ಚನ್ನು ಹಾಗೂ ಸರ್ಕಾರ ಹೇಳುವ ರೀತಿಯ ಕನಿಷ್ಠ ಕೂಲಿಯನ್ನು ಮತ್ತು ಇತರೇ ಸಣ್ಣ ಪುಟ್ಟ ಖರ್ಚಗಳನ್ನು ಸೇರಿಸಲಾಗಿರುವುದಿಲ್ಲ. ಹಾಗೇ ಬೆಳೆಬಂದ ತಕ್ಷಣವೇ ಮುಖ್ಯವಾಗಿ ಬಡ ರೈತರ ಮೇಲೆ ಸಾಲ ನೀಡಿದವರ ತೀವ್ರ ಒತ್ತಡವಿರುತ್ತದೆ. ಈ ಕಾರಣದಿಂದ ಗ್ರಾಮೀಣ ಪ್ರದೇಶದ 30 ರಿಂದ 40 ರಷ್ಟಿರುವ ಬಡರೈತರು ಕೂಡಲೇ ಮಾರುಕಟ್ಟೆಗೆ ಒಯ್ಯಬೇಕಾಗುತ್ತದೆ. ಕಳೆದ 3-4 ವರ್ಷಗಳಲ್ಲಿ ಆಯಾ ಸಂದರ್ಭದಲ್ಲಿ ಭತ್ತದ ಬೆಲೆಯು ಪ್ರತಿ ಕ್ವಿಂಟಲ್‌ಗೆ 250 ರಿಂದ 275 ನ್ನು ಮೀರಿರಲಿಲ್ಲ. ಆದಾಗಲೂ 1994 ರ ಸಾಲಿಗೆ ಕೇಂದ್ರ ಸರ್ಕಾರ ಘೋಷಿಸಿದ 300 ರೂ ಬೆಲೆಯನ್ನು ಲೆಕ್ಕಾಚಾರಕ್ಕೆ ಬಳಸಿಕೊಳ್ಳಲಾಗಿದೆ.

ಆದಾಗ್ಯೂ ರೈತರಿಗೆ ಪ್ರತಿ ಎಕರೆಗೆ ಇವತ್ತಿನ ಸಂದರ್ಭದಲ್ಲಿ 1500 ರೂ. ನಿಂದ 2 ಸಾವಿರ ರೂಪಾಯಿಯ ವರೆಗೆ ನಷ್ಟವಾಗುತ್ತದೆ.

ಹೀಗಿರುವಾಗ ರೈತರ ಉದ್ಧಾರ ಸಾಧ್ಯವೇ......! ? ಅವರ ಜೀವನ ಮಟ್ಟ ಆರೋಗ್ಯದ ಮಟ್ಟ ಎತ್ತರಿಸಲು ಸಾಧ್ಯವೆ.....! ? ದೇಶದ ಅನ್ನದಾತ-ಗ್ರಾಮೀಣ ಪ್ರದೇಶದ ಬಡರೈತ, ಈ ರೀತಿ ನಷ್ಟಕ್ಕೊಳಗಾಗಿ, ಸಾಲಗಾರರ ಬಾಧೆ ತಾಳಲಾರದೇ "ಉಪವಾಸವಿದ್ದರೂ ಚಿಂತೆಯಿಲ್ಲ ಉಪದ್ರ ಬೇಡ" ಎಂಬ ನಿರ್ಣಯಕ್ಕೆ ಬಂದು ಭೂಮಿ ಮಾರಾಟ ಮಾಡುವ ಒತ್ತಾಯಕ್ಕೊಳಗಾಗಿ ಕೃಷಿ ಕೂಲಿಕಾರರ ಸಂಖ್ಯೆಯನ್ನು ಹೆಚ್ಚಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶದ ಶೇ. 20 ರಿಂದ 25 ರಷ್ಟಿರುವ 10-15 ಎಕರೆ ಭೂಮಿ ಹೊಂದಿರುವ ಮಧ್ಯಮ ರೈತರು ದಿವಾಳಿಯಾಗಿ ತೆರವಾದ ಬಡರೈತರ ಸ್ಥಾನಕ್ಕೆ ದೂಡಲ್ಪಡುತ್ತಿ...

ಈ ತೆರನಾದ ಪರಿಸ್ಥಿತಿ ಒಂದೆಡೆ -ಭೂ... ಕೇಂದ್ರೀಕರಣಕ್ಕೆ ದಾರಿ ಮಾಡಿಕೊಟ್ಟರೇ, ಮತ್ತೊಂದೆಡೆ ಅ... ರದ ಅಭಾವವನ್ನು ಸೃಷ್ಟಿಸುತ್ತದೆ. ಈ ರೀತಿ ನಷ್ಟಕ್ಕೊಳಗಾಗುವ ಬಡರೈತರು ಕುಟುಂಬ ಜೀವನ ಸಾಗಿಸುತ್ತಿರುವುದಾದರೂ ಹ್ಯಾಗೆ.....!? ಎಂಬ ಕುತೂಹಲಕರ ಪ್ರಶ್ನೆ ಇಲ್ಲಿ ಎದ್ದು ಬರುತ್ತದೆ. ಉತ್ತರ ಹುಡುಕಿದಾಗ ಕುಟುಂಬದ ನೊಗವನ್ನು ಹಿಡಿದದ್ದು ಬೇರೆಯವರ ಕಡೆ ಕೂಲಿಗ್ಹೋದದ್ದು, ಕುಟುಂಬದ ಇತರ ಸದಸ್ಯರ ಅದರಲ್ಲೂ ಮುಖ್ಯವಾಗಿ ಮಹಿಳೆಯರ ಶ್ರಮದ ಮೇಲೆ ಆಧರಿಸಿದ್ದು, ಕಠೋರ ಸತ್ಯ ಬೆಳಕಿಗೆ ಬರುತ್ತದಲ್ಲದೇ, ತಮ್ಮ ಸ್ವಂತ ಜಮೀನಿನ ಆದಾಯದ ಮೂಲವಲ್ಲವೆಂಬುದನ್ನು ಬಯಲಿಗೆಳೆಯುತ್ತದೆ. ಸ್ವತಃ ಜಮೀನಿದ್ದು ಸಾಗುವಳಿ ಮಾಡುವ ರೈತರ ಪರಿಸ್ಥಿತಿ ಹೀಗಿದ್ದರೆ.... ಇನ್ನೊಬ್ಬರ ಭೂಮಿಯನ್ನು ಗುತ್ತಿಗೆ ನೀಡಿ (ಪ್ರತಿ ಎಕರೆಗೆ 1,500 ರಿಂದ 3 ಸಾವಿರದವರೆಗೆ) ಸಾಗುವಳಿ ಮಾಡುವ... ದಾರರ ಅಥವಾ ಸಾಗುವಳಿದಾರರ ಪರಿಸ್ಥಿತಿ ಹ್ಯಾ... ಹುದು !! ಊಹಿಸಿ, ಮುಂದೆ ನೋಡೋಣ.

... ಯು. ಬಸವರಾಜು

ಭತ್ತ- ತಗಲುವ ವೆಚ್ಚ ಹಾಗೂ ಆದಾಯ

ನಂ. ಖರ್ಚು	
1. ಬೀಜ 50 ಕೆ.ಜಿ......	150-00
2. 12 ಗಳೇವು..........	600-00
3. ಅಗೇ ಮಡಿ.......	100-00
4. ಸಸಿ ಮಡಿ ಕಣಿವೆ ಸವರಿದ್ದು	100-00
5. ಸಸಿ ನಾಟ ಮಾಡುವುದು ಹುಲ್ಲು ಆರಿಸುವುದು ಸಸಿ ಹೊರುವುದು ಸೇರಿ	650-00
6. ಕಳೆ ತಗೆದದ್ದು....... (3 ಬಾರಿ)	500-00
7. ರಸಾಯನಿಕ ಗೊಬ್ಬರ ಹಾಗೂ ಹಸಿರೆಲೆ ಗೊಬ್ಬರಕ್ಕೆ	2000-00
8. ಔಷಧಿ ಸಿಂಪರಣೆ......	200-00
9. ನೀರು ಹಾಯಿಸಲು ಹಾಗೂ ಕನಿಷ್ಠ 3 ತಿಂಗಳು ಉಸ್ತುವಾರಿ ಮಾಡಲು ಆಳು ಚೀಲಕ್ಕೆ ತುಂಬುವುದು	500-00
10. ಬೆಳೆ ಕಟಾವು ಹಾಗೂ	1000-00
11. ಮಾರುಕಟ್ಟೆಗೆ ಸಾಗಿಸುವ ಸಾಗಣೆ ಖರ್ಚು	350-00
12. ಬಾಜು.......	0090-00
13. ಹಾಲಿ ವಸೂಲಿ ಮಾಡಲಾಗುವ ಅನಧಿಕೃತ ದಲಾಲಿ ಶೇ. 3ರಷ್ಟು (ಇದು ಕಡಿಮೆ)	0180-00
14. ನೀರಾವರಿ ಕರ..........	0050-00
	34
ಮೊತ್ತ.......	6520-00
15. ಶೇ. 3 ರಂತೆ ಬಡ್ಡಿ......... (ಬಂಡವಾಳಕ್ಕೆ 7 ತಿಂಗಳಿಗೆ)	1364-00
ಖರ್ಚು ಒಟ್ಟು	7889-00

ಆದಾಯ	
ಸರಾಸರಿ ಇಳುವರಿ (i)20 ಕ್ವಿಂಟಲ್ ಭತ್ತ (ii) 2 ಬಂಡಿ ಮೇವು	
ಮಾರುಕಟ್ಟೆಯ ದರ ಪ್ರತಿ ಕ್ವಿಂಟಲ್‌ಗೆ 300ರಂತೆ ಈ ವರ್ಷ ಕೇಂದ್ರ ಸರಕಾರ ನಿಗದಿಸಿದಂತೆ	
20 ಕ್ವಿಂಟಲ್ ಭತ್ತಕ್ಕೆ	6000-00
2 ಬಂಡಿ ಮೇವು......	200-00
(ಸಾಗಣೆ ಖರ್ಚು ತೆಗೆದು)	
ಮೊತ್ತ.....	6.200-00
ಒಟ್ಟು ಆದಾಯ.......	620[illegible]

ನಷ್ಟ - 1,687-00

ದುರುಪಯೋಗವೇ ಬಂಡವಾಳಿಗರ ಬಂಡವಾಳ

ಖಾಸಗೀಕರಣ ಮತ್ತು ಉದಾರೀಕರಣದ ಸಂದರ್ಭದಲ್ಲಿ ಇವೆರಡೂ ಬಹಳ ಸುಂದರ ಮತ್ತು ಪ್ರಗತಿಪರ ಎಂದೇ ಉದಾರೀಕರಣವಾದೀ ಅರ್ಥಶಾಸ್ತ್ರಜ್ಞರು ಹೊಗಳುತ್ತಾರೆ. ಅಪರಿಮಿತ ಸ್ವಾತಂತ್ರ್ಯ ಮುಕ್ತತೆ ಮತ್ತು ಮಾನವನ ವಿಕಾಸ ಇವೆಲ್ಲವೂ ಇದರಿಂದ ಸಾಧ್ಯವಾಗುತ್ತದೆ ಎನ್ನುತ್ತಾರೆ. ಆದರೆ ಒಂದು ಚೌಕಟ್ಟಿನೊಳಗೆ ಈ ಬಂಡವಾಳಶಾಹಿಗಳು ಹೇಗೆ ನಡೆದುಕೊಳ್ಳುತ್ತಾರೆ ಎಂಬುದಕ್ಕೆ ಒಂದು ನಿದರ್ಶನ ಕೆಳಗಿದೆ.

ಭಾರತೀಯ ರಿಸರ್ವ್ ಬ್ಯಾಂಕಿನದು 'ಬಿಲ್ ಡಿಸ್ಕೌಂಟಿಂಗ್ ಯೋಜನೆ' ಎಂಬ ಒಂದು ಯೋಜನೆ ಇದೆ. ವಾಣಿಜ್ಯ ಬ್ಯಾಂಕುಗಳ ಮೂಲಕ ಅನುಷ್ಠಾನಗೊಳ್ಳುವ ಈ ಯೋಜನೆ ಬಂಡವಾಳಿಗರ ವ್ಯಾಪಾರ ಬಿಲ್ಲುಗಳ (ಹುಂಡಿಗಳು) ಮೂಲಕ ನಡೆದಾಗ ಅವುಗಳಿಗೆ ಧನ ಸಹಾಯ ನೀಡುತ್ತದೆ. ಈ ಯೋಜನೆಯಲ್ಲಿ ಹಣಕಾಸು ನೆರವು ನೀಡುವ ವಾಣಿಜ್ಯ ಬ್ಯಾಂಕುಗಳು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಧನಸಹಾಯ ಪಡೆಯುತ್ತವೆ.

ಈಗ ಭಾರತೀಯ ರಿಸರ್ವ್‌ಬ್ಯಾಂಕ್ ತನಿಖೆಯೊಂದರ ಪ್ರಕಾರ ಈ ಯೋಜನೆಯನ್ನು ಬಹುತೇಕ ಕಂಪನಿಗಳು ದುರುಪಯೋಗ ಪಡಿಸಿಕೊಂಡಿವೆ ಈ ಕಂಪನಿಗಳಲ್ಲಿ ... ಗುಂಪಿನ ಕಂಪನಿಗಳು, ರಿಲಯನ್ಸ್ ... ನವು ಮುಂಬಯಿ ಗುಂಪಿನವು ರುಮಿಯಾ ... ನರ ಸಿಯೆಟ್ ಟಯರ್ಸ್, ಹಾಗೂ ... ರಾಷ್ಟ್ರೀಯ ಕಂಪನಿಗಳು ಸೇರಿವೆ.

ಸುಳ್ಳು ದಾಖಲೆಗಳನ್ನು ಸೃಷ್ಟಿಸುವುದು, ಸರಕುಗಳಿಲ್ಲದೆ ಶೇರು ಇತ್ಯಾದಿಗಳ ವ್ಯವಹಾರಕ್ಕೆ ಈ ಯೋಜನೆಯಡಿ ಸಹಾಯ ಪಡೆಯುವುದು ಇತ್ಯಾದಿ ಹಲವಾರು ಅಕ್ರಮಗಳು ನಡೆದಿವೆ.

ಯಾವುದೇ ಯೋಜನೆಯಿರಲಿ ತಮ್ಮ ಅನುಕೂಲಕ್ಕೆ ತಕ್ಕಂತೆ ಬಂಡವಾಳಿಗರು ಬಳಸಿಕೊಳ್ಳುತ್ತಾರೆ. ಅದರಲ್ಲಿ ನ್ಯಾಯ, ನೀತಿ, ಇತ್ಯಾದಿಗಳಿಗೆ ಯಾವುದೇ ಪ್ರಾಮುಖ್ಯತೆ ಇರುವುದಿಲ್ಲ ಎಂಬುದು ಸ್ಪಷ್ಟವಲ್ಲವೆ? ಖಾಸಗೀಕರಣ, ಉದಾರೀಕರಣದ ಸೌಂದರ್ಯವನ್ನು ನಾವು ಊಹಿಸಿಕೊಳ್ಳಬಹುದಲ್ಲವೇ?

'ಸಾರ್ವಜನಿಕ ವಲಯದ ಅಸಫಲತೆಗೆ ಸರಕಾರ ಕಾರಣ'

ಇದು ಈ ಕೆಳಗಿನ ಉದಾಹರಣೆಯಿಂದ ಬಹಳ ಸ್ಪಷ್ಟವಾಗುತ್ತದೆ. ಸರ್ಕಾರಿ ಸ್ವಾಮ್ಯದ ಇಂಡಿಯನ್ ಐರನ್ ಅಂಡ್ ಸ್ಟೀಲ್ ಕಂಪನಿಯು ಬರ್ನಪುರ ಸ್ಟೀಲ್ ವರ್ಕ್ ಲಿಮಿಟೆಡ್‌ನ ಆಧುನೀಕರಣಗೊಳಿಸುವ, ಅದರ ಉತ್ಪಾದಕತೆಯನ್ನು ಹೆಚ್ಚಿಸುವ, ಕಾರ್ಮಿಕರಿಗೆ ಅನುಕೂಲವಾಗುವ ಕೆಲವು ಪ್ರಸ್ತಾಪಗಳನ್ನು ವರದಿಯೊಂದರಲ್ಲಿ ಇಪ್ಪತ್ತೊಂದು ವರ್ಷಗಳ ಹಿಂದೆಯೇ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಆದರೆ ನಮ್ಮ ಘನ ಸರ್ಕಾರ ಈ ಇಪ್ಪತ್ತೊಂದು ವರ್ಷಗಳ ಕಾಲವೂ ನಿದ್ರಿಸುತ್ತಿದ್ದು ಈ ವರದಿಯ ಅನುಷ್ಠಾನದತ್ತ ಯಾವುದೇ ಕ್ರಮ ಕೈಗೊಳ್ಳಲಿಲ್ಲ.

ನಿರ್ಲಕ್ಷ್ಯದಿಂದಾಗಿ ಇಂಡಿಯನ್ ಐರನ್ ಅಂಡ್ ಸ್ಟೀಲ್ ಕಂಪನಿ (ಇಸ್ಕೋ) ಸತತವಾಗಿ ಹಾನಿ ಅನುಭವಿಸುತ್ತಾ ಬಂದಿದೆ. ಮಾರ್ಚ್ 1993 ರ ವೇಳೆಗೆ 784 ಕೋಟಿ ರೂಪಾಯಿಗಳ ಹಾನಿ ತೋರಿಸುತ್ತಿರುವ ಈ ಇಸ್ಕೋ ಸರ್ಕಾರ ಮೊದಲೇ ಕಾಳಜಿ ವಹಿಸಿದ್ದರೆ ಈ ಹಾನಿಯಿಂದ ತಪ್ಪಿಸಿಕೊಳ್ಳಬಹುದಾಗಿತ್ತು. ಆದರೆ ಸರ್ಕಾರ ತನ್ನ ಅಸಾಮರ್ಥ್ಯವನ್ನೇ ಮೆರೆಯಿತು. ಈಗ ಸರ್ಕಾರದ ನಿಲುವು? ಇಸ್ಕೋ ಹಾನಿ ಅನುಭವಿಸುತ್ತಿದೆ. ಅದನ್ನು ಖಾಸಗೀಕರಣಗೊಳಿಸುವುದೊಂದೆ ಪರಿಹಾರ

ಹೇಗಿದೆ ಖಾಸಗೀಕರಣದ ಹಿನ್ನೆಲೆ?

'ಪೆಪ್ಸಿ' ಎಂಬ ಮೋಸಗಾರರಿಗೂ ಸ್ವಾಗತ

ಹಲವು ವಿದೇಶೀ ಕಂಪನಿಗಳ ಹಣ ಹೂಡಿಕೆಯನ್ನು ಭಾರತ ಸರಕಾರ ಅನುಮೋದಿಸಿದೆ. ಇದರಿಂದ 24 ವಿದೇಶೀ ಕಂಪನಿಗಳು 500 ಕೋಟಿ ರೂಪಾಯಿಗಳ ಬಂಡವಾಳವನ್ನು ನಮ್ಮ ದೇಶದಲ್ಲಿ ಹೂಡಲಿದ್ದಾರೆ. ಇದರಲ್ಲಿ 'ಪೆಪ್ಸಿ' ಎಂಬ ಬಹುರಾಷ್ಟ್ರೀಯ ಕಂಪನಿಯ ಒಂದು ಪ್ರಸ್ತಾಪವೂ ಸೇರಿದೆ.

ಒಂದೆ ಉತ್ತಮ ಆಹಾರ ತಂತ್ರಜ್ಞಾನ ತರುವ ನೆಪದಲ್ಲಿ ಈ ಪೆಪ್ಸಿ ಎಂಬ ಪಾನೀಯದ ಕಂಪನಿ ಭಾರತದೊಳಕ್ಕೆ ಬಂತು ವಿದೇಶಿ ಹಣ ಹೂಡಿಕೆಯ ಮೇಲೆ ಹಲವು ನಿಬಂಧನೆಗಳು ಇದ್ದ ಆ ಕಾಲದಲ್ಲಿ ರಫ್ತು ಪರ ತ್ತುಗಳನ್ನು ಒಪ್ಪಿಕೊಂಡು ಬಂದ ಈ ಕಂಪನಿ ನಮ್ಮ ಸಾಂಪ್ರದಾಯಿಕ ರಫ್ತು ಸರಕುಗಳಾದ ಏಲಕ್ಕಿ ಕಾಳುಮೆಣಸು, ಇತ್ಯಾದಿಗಳನ್ನು ಬಾರತದಲ್ಲಿ ಕೊಂಡು ರಫ್ತು ಮಾಡಿತು. ಪಾನೀಯ ಮಾರಾಟದಿಂದ ಅಪಾರ ಲಾಭವನ್ನೂ ಗಳಿಸಿತು.

ಆದರೆ ಈ ಕಂಪನಿ ಬಂದಿದ್ದರಿಂದ ನಮ್ಮ ಆಹಾರ ತಂತ್ರಜ್ಞಾ ಸುಧಾರಿಸಿದೆಯೇ? ಎಳ್ಳಷ್ಟೂ ಇಲ್ಲ. ಈಗ ಮತ್ತೆ ಅದು ದೊಡ್ಡ ಪ್ರಮಾಣದಲ್ಲಿ ಬರುತ್ತದೆ ದೇಶ ಕೊಳ್ಳೆಹೊಡೆಯಲು!!

ಹಣಕಾಸು ಖೋತಾ ಎಂಬ ಮರಿಚಿಕೆ

ಐ.ಎಂ.ಎಫ್. ಮತ್ತು ವಿಶ್ವಬ್ಯಾಂಕ್ ಧಣಿಗಳಿಗೆ ಭಾರತ ಸರ್ಕಾರ ತನ್ನ ಹಣಕಾಸು ಖೋತಾ ಕಡಿಮೆ ಮಾಡುವ ಮಾತುಕೊಟ್ಟು ಅವರಿಂದ ಸಾಲ ಪಡೆದಿದೆ. ಈ ಹಣ ಕಾಸು ಖೋತಾ ಕಡಿಮೆ ಮಾಡುವ ನೆಪದಲ್ಲಿ ಸಹಾಯಧನಗಳಲ್ಲಿ ಕಡಿತ ಮಾಡಿದ್ದು ಅದು ದೇಶದ ಬಡಜನತೆಯ ಮೇಲೆ ಹೊಡೆದ ಹೊಡೆತವಾಗಿದೆ. ಈ ಕ್ರಮಗಳ ಪರಿಣಾಮಗಳೂ ಇನ್ನೂ ಗಾಢವಾಗಿ ಬಡವರನ್ನು ಇನ್ನು ಮುಂದೆಯೂ ಕಾಡಲಿವೆ.

ಆದರೆ ಈ ಕ್ರಮಗಳಿಂದ ಹಣಕಾಸು ಖೋತಾ ಸಹ ಸರ್ಕಾರ ನಿರೀಕ್ಷಿಸಿದ ಪ್ರಮಾಣದಲ್ಲಿ ಆಗಿಲ್ಲ. 1993-94 ರ ಸಾಲಿನ ಕೊನೆಗೆ ಇದು ಶೇ. 4.7 ಕ್ಕೆ ಬರಬೇಕು. ಆ... ಈಗ ಸಿಕ್ಕಿರುವ ಸೂಚನೆಗಳ ಪ್ರಕಾರ ಇ... ಸಾಧ್ಯವಾಗುವುದಿಲ್ಲ. ಸರ್ಕಾರ ಮತ್ತೆ ಭಾ... ತೀಯ ರಿಸರ್ವ್ ಬ್ಯಾಂಕಿನಿಂದ ನೋಟುಗಳ... ಛಾಪಿಸಿ ಹಣ ಪಡೆಯಬಹುದು.

ಇದರ ಒಳಾರ್ಥ ಏನು ಗೊತ್ತೆ? ಹ... ಕಾಸು ಖೋತಾ ಕಡಿಮೆ ಮಾಡಲು ಮು... ರುವ ದಿನಗಳಲ್ಲಿ ಭಾರತ ಸರ್ಕಾರ ಬಡ... ರನ್ನು ಇನ್ನೂ ಹಿಂಡಲಿದೆ. ಬಡಜನರೇ ... ರಿಕೆ!!

ಬರಲಿರುವ ವಿದೇಶೀ ದಲ್ಲಾಳಿಗ...

ದೇಶದಲ್ಲಿನ ದಲ್ಲಾಳಿಗಳು ವಿದೇ... ಬ್ಯಾಂಕುಗಳ ಕುಮ್ಮಕ್ಕಿನಿಂದ ನಡೆಸಿದ ... ಹಗರಣದ ದೊಡ್ಡ ಅವಾಂತರ ... ಮುಂದಿದೆ. ಈಗ ವಿದೇಶೀ ದಲ್ಲಾಳಿ... ಭಾರತಕ್ಕೆ ಬರಲಿದ್ದಾರೆ. ಉದಾರೀಕರ... ಪರಿಣಾಮವಾಗಿ ಸುಲಭದಲ್ಲಿ ಒಳಬ... ರುವ ಈ ದಲ್ಲಾಳಿಗಳು ಲಾಭ ಕೊಳ್ಳೆ... ಡೆಯಲೇ ಬರುವುದು. ಹಾಂಗ್-ಕಾಂ... ಹೆಚ್. ಜಿ. ಏಶಿಯಾ ಜೇಮ್ಸ್ ಕೆ... ಇತ್ಯಾದಿ ವಿದೇಶೀ ದಲ್ಲಾಳಿ ಕಂಪನಿ... ಆಗಲೇ ಭಾರತದೊಳಕ್ಕೆ ಬರಲು ಎಲ್ಲ... ಹದ ತಯಾರಿಗಳನ್ನು ನಡೆಸಿದ್ದಾರೆ.

ಇವರೆಲ್ಲ ಬಂದ ಮೇಲೆ 'ದಿನಕ್ಕೊ... ಹಗರಣ' ಕಾರ್ಯಕ್ರಮ ಪ್ರಾರಂಭವಾದೀತ...

ಸಂಘಟನೆಯ ಹೊಸ್ತಿಲಲ್ಲಿ ಉತ್ತರ ಕನ್ನಡ ಹೆಂಚು ಕಾರ್ಮಿಕರು

—ಸುರೇಶ್ ತಾಂಡೇಲ

ಉತ್ತರ ಕನ್ನಡದ ಕರಾವಳಿಗುಂಟಿ ಇರುವ ಹೆಂಚು ಉದ್ಯಮದ ಕಾರ್ಮಿಕರ ಬದುಕಿನಲ್ಲೊಂದು ಪರಿವರ್ತನೆಯ ಗಾಳಿ ಬೀಸುತ್ತಿದೆ. ಸಿಐಟಿಯುವಿನ ಕೆಂಬಾವುಟ ಹಲವು ಕಾರ್ಖಾನೆಯಂಗಳದಲ್ಲಿಂದು ಹಾರ್ಡಾಡುತ್ತಿದೆ. ದಶಕಗಳಕಾಲದಿಂದ ಕಾನೂನು ರಿತ್ಯ ಸೌಲಭ್ಯಗಳಿಂದ ವಂಚಿತರಾಗಿ, ಮಾಲಿಕರ ಉಡಿತುಂಬುತ್ತಿದ್ದ ಈ ಸ್ಥಳೀಯ, ಅಶಿಕ್ಷಿತ, ಅರೆಶಿಕ್ಷಿತ ಮಿನುಗಾರರ, ಹಾಲಕ್ಕಿ ಶೇರುಗಾರ, ಗುನಗ, ಗೊಂಡ, ಈಡಿಗ ಮುಂತಾದ ಬುಡಕಟ್ಟು ಜನಾಂಗದ ಬಡವರು ಧೈರ್ಯದಿಂದ ತಮ್ಮ ಬೇಡಿಕೆಗಳ ಬಗ್ಗೆ ಉಸಿರೆತ್ತುವ ಸ್ಥಿತಿ ನಿರ್ಮಾಣವಾಗುತ್ತಿದೆ.

ಜಿಲ್ಲೆಯ ಹೆಂಚುಕಾರ್ಮಿಕರ ಸ್ಥಿತಿ

ಜಿಲ್ಲೆಯ ಸುಮಾರು 16 ರಷ್ಟಿರುವ ಹೆಂಚು ಕಾರ್ಖಾನೆಗಳಲ್ಲಿ 2000 ಕ್ಕೂ ಮಿಕ್ಕಿ ಕಾರ್ಮಿಕರು ದುಡಿಯುತ್ತಿದ್ದಾರೆ. ಮೇಲೆ ತಿಳಿಸಿದಂತೆ ಬಡಬುಡಕಟ್ಟು ಜನಾಂಗಕ್ಕೆ ಸೇರಿದ ಈ ದೃಢಕಾಯರು ಮೆಕ್ಕಲು ಮಣ್ಣು ತಂದು ಹದಗೊಳಿಸಿ ಅದಕ್ಕೆ ಬೇಕಿರುವ ಉರುವಲು ಸಾಮಗ್ರಿಗಳನ್ನು ತಂದು ಕೆಂಪು ಹೊನ್ನಾಗಿಸುವರೆಗಿನ ಇವರ ಶ್ರಮ ಅಪೂರ್ವವಾದದ್ದು. ಪ್ರೆಸ್ಸಿನ ಕೆಲಸ, ಗೂಡಿನ ಕೆಲಸ, ಮುಂತಾದ ಶ್ರಮಯುಕ್ತ ತೊಂದರೆದಾಯಕ ಕೆಲಸಗಳನ್ನು ನಡೆಸಿ, ಆಧುನಿಕ ಜನರ ಮನೋಧರ್ಮಕ್ಕೆ ಅನುಗುಣವಾದ ಹೆಂಚು, ಹೂಕುಂಡ ಇತ್ಯಾದಿಗಳನ್ನು ನಿರ್ಮಿಸುತ್ತಾರೆ. ಕೇವಲ ಕಬ್ಬಿಣದ [illegible] ಹಿಡಿದು ಕಣ್ ಕಣ್ ಎಂದು ಸಪ್ಪಳ ಮಾಡಿ, ಹೆಂಚಿನ ಗುಣಮಟ್ಟ ನಿರ್ಧರಿಸುವ ರೀತಿ ಯಾವುದೇ ತಜ್ಞ ಇಂಜಿನಿಯರ್‌ರಿಗೆ ಕಡಿಮೆಯದಲ್ಲ. ಆದರೆ ಈ ತಜ್ಞತೆ, ಶ್ರಮ, ಈ ಕಾರ್ಮಿಕರ ಬದುಕಿಗೆ ಸಂತೋಷದ ದಿನಗಳನ್ನು ತಂದಿಲ್ಲ. ಇಲ್ಲಿಯ ದೊಡ್ಡ ಬಂಗಲೆಗಳ [illegible] ಇಲ್ಲಿಯ ಎಷ್ಟೋ ಕಾರ್ಮಿಕರ ಮನೆಗೆ ಹೆಂಚುಗಳೇ ಇಲ್ಲ. ಇಲ್ಲಿಯ ಕಾರ್ಮಿಕರು ಕಡಿಮೆ ಕೂಲಿಗೆ ದುಡಿಯಬೇಕಾಗಿದೆ.

ಹೆಂಚು ಕಾರ್ಮಿಕರ ಒತ್ತಾಯ ಚಳುವಳಿಗಳ ಫಲವಾಗಿ ರಾಜ್ಯ ಸರಕಾರ 1989 ರ ಫೆಬ್ರವರಿಯಲ್ಲಿ ಹೆಂಚು ಉದ್ಯಮದಲ್ಲಿ ದುಡಿಯುವ ಕಾರ್ಮಿಕರಿಗೆ ಕನಿಷ್ಠ ವೇತನ ಪ್ರಕಟಿಸಿತು. ಇದರಲ್ಲಿ ಏರಿಳಿತ ತುಟ್ಟಿಭತ್ಯೆ ನಿಗದಿ ಮಾಡಿತ್ತು. ಈ ಪ್ರಕಟಣೆ 1987 ರ ಜನವರಿಯವರೆಗೂ ಅಂತಿಮ ಪ್ರಕಟನೆಯಾಗದಿದ್ದಾಗ ದಕ್ಷಿಣ ಕನ್ನಡದ 6 000 ಹೆಂಚು ಕಾರ್ಮಿಕರು ದೊಡ್ಡರೀತಿಯಲ್ಲಿ 3 ತಿಂಗಳ ಕಾಲ ಹೋರಾಟ ನಡೆಸಿ 600 ಕ್ಕೂ ಮಿಕ್ಕಿ ಕಾರ್ಮಿಕರು ಜೈಲಿಗೆ ಹೋದರು. ಇದರಿಂದ 1987 ಮಾರ್ಚ್ 13 ರಂದು ಅಂತಿಮ ಪ್ರಕಟಣೆ ಪ್ರಕಟವಾಯಿತು. ಆದರೆ ಇದರ ವಿರುದ್ಧ ಉತ್ತರ ಕನ್ನಡದ ಹೆಂಚು ಮಾಲಿಕರು ರಿಟ್ ಹೋದರು. ಹೈಕೋರ್ಟ್ ರಿಟ್ ಸ್ವೀಕರಿಸಿ "ತಾತ್ಕಾಲಿಕ ತಡೆಯಾಜ್ಞೆ" ನೀಡಿತು. ಮುಂದೆ ಇದು ರದ್ದಾಯಿತು. ಆದರೂ ಉ. ಕನ್ನಡದ ಹೆಂಚು ಕಾರ್ಮಿಕರಿಗೆ ನ್ಯಾಯಯುತ ಸೌಲಭ್ಯ ಎಲ್ಲಿಡೆ ಲಭ್ಯವಾಗಲಿಲ್ಲ.

ದಕ್ಷಿಣ ಕನ್ನಡದಲ್ಲಿ "ತಾತ್ಕಾಲಿಕ ತಡೆಯಾಜ್ಞೆ" ಇದ್ದಾಗಲೂ ಒಂದಿನ ಒಪ್ಪಂದಗಳಂತೆ ಕನಿಷ್ಠ ಕೂಲಿ ತುಟ್ಟಿಭತ್ಯೆ ಕೊಟ್ಟರಲ್ಲದೆ, 1988 ರಿಂದ ಹೆಚ್ಚಳವಾದ ಏರಿಳಿತ ತುಟ್ಟಿಭತ್ಯೆ, 1992 ಎಪ್ರಿಲ್ 1 ರಿಂದ ಹೆಚ್ಚಳವಾದ 191 ಪಾಯಿಂಟಿಗೆ 5.73 ರೂ. ಜಾರಿ ಮಾಡಿರುತ್ತಾರೆ. ಆದರೆ ಉತ್ತರ ಕನ್ನಡದಲ್ಲಿ ಹೆಂಚು ಉದ್ಯಮ ನಡೆಸುತ್ತಿರುವ ಇದೇ ಮಾಲಿಕರು ಈ ಸೌಲಭ್ಯ ನೀಡಲು ಹಿಂದೇಟು ಹಾಕುತ್ತಿದ್ದಾರೆ. ದ.ಕ. ದಲ್ಲಿ ಓರ್ವ ಕಾರ್ಮಿಕನಿಗೆ 40-50 ಸಿಕ್ಕರೆ ಉ.ಕ.ದ ಕೆಲವೆಡೆ 10-12 ರೂ. ಕೂಲಿಯೂ ಇದೆ. ಇತ್ತ ಯಾವ ಕಾರ್ಮಿಕ ಅಧಿಕಾರಿಯೂ ಗಮನ ಹರಿಸಿದಂತಿಲ್ಲ.

ಕಾರ್ಮಿಕರ ಸಂಘಟನೆ ನಡೆಸಿದ ಎಸ್.ಕೆ. ಟೈಲ್ಸ್ ವರ್ಕರ್ಸ್ ಯೂನಿಯನ್

ದಕ್ಷಿಣ ಕನ್ನಡದಲ್ಲಿ ಹೆಂಚು ಕಾರ್ಮಿಕರನ್ನು ಒಂದೆಡೆ ಸಂಘಟಿಸಿದ್ದ ಸೌತ್ ಕೆನರಾ ಟೈಲ್ಸ್ ವರ್ಕರ್ಸ್ ಯೂನಿಯನ್ (ಸಿಐಟಿಯು) ನ ಪ್ರಮುಖ ಪದಾಧಿಕಾರಿಗಳಾದ ಕಾಂ. ಕೆ. ಶಂಕರ, ಕಾಂ. ಸಿ. ನಾರಾಯಣ ಮುಂತಾದವರು ಉತ್ತರ ಕನ್ನಡದಲ್ಲಿ ತಿರುಗಿ, ಇಲ್ಲಿಯ ಕಾರ್ಮಿಕರಿಗೆ ಸಂಘಟನೆಯ ಅವಶ್ಯಕತೆ, ನ್ಯಾಯಯುತ ಸೌಲಭ್ಯ ಪಡೆಯುವ ಬಗೆ ತಿಳಿಸಿ ಸಂಘಟಿಸಿದ್ದರಿಂದ ಜಿಲ್ಲೆಯಲ್ಲಿ ಹೆಂಚು ಕಾರ್ಮಿಕರ ಸಂಘಟನೆಯ ಕ್ರಿಯೆ ಪ್ರಾರಂಭವಾಯಿತು. ಕಳೆದ ದಶಕದ ಅಂತ್ಯದ ಎರಡು ವರ್ಷಗಳು ಈ ದಿಸೆಯಲ್ಲಿ ಪ್ರಮುಖ ಘಟ್ಟಗಳಾಗಿ ದಾಖಲಾಗಿವೆ. ಜಿಲ್ಲೆಯಲ್ಲಿ ಕಾರ್ಮಿಕರು ತಮ್ಮ ಹಿತದ ಬೇಡಿಕೆಗಳೊಂದಿಗೆ ಹೊಸ ಆರ್ಥಿಕ ನೀತಿಗಳ ವಿರುದ್ಧ ಬೆಲೆ ಏರಿಕೆ ಮುಂತಾದವುಗಳ ವಿರುದ್ಧ ಪ್ರತಿಭಟಿಸಿ, ಹೋರಾಟ ನಡೆಸಲು ಸಾಧ್ಯವಾಗಿದೆ.

ಚಾರಿತ್ರಿಕ ಶರಾವತಿ ಹೆಂಚು ಕಾರ್ಮಿಕರ ಹೋರಾಟ

ಜಿಲ್ಲೆಯ ಹೊನ್ನಾವರ ತಾಲೂಕಿನ ಪುಟ್ಟ ನದಿ ದ್ವೀಪ ವಿನಕುರ್ವಾ -ಇಲ್ಲಿಯ ಶರಾವತಿ ಹಂಚಿನ ಕಾರ್ಖಾನೆಯ ಕಾರ್ಮಿಕರ ಸರಿಸುಮಾರು 8 ತಿಂಗಳ ಹೋರಾಟ ಜಿಲ್ಲೆಯ ಕಾರ್ಮಿಕ ಹೋರಾಟದಲ್ಲಿ ಐತಿಹಾಸಿಕ ದಾಖಲೆಯಾಗಿ ಉಳಿದಿದೆ.

ತಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಲು ಮನವಿ ಮಾಡಿದ್ದರ ವಿರುದ್ಧ ಮಾಲಿಕರು ಫೆಬ್ರವರಿ 12, 1990 ರಂದು 300 ರಷ್ಟಿದ್ದ ಕಾರ್ಮಿಕರಿಗೆ ಕೆಲಸ ನಿರಾಕರಿಸಿ ಕಾರ್ಖಾನೆ ಮುಚ್ಚಿದರು.

ಇದೇ ಕಾರ್ಖಾನೆಯ ಮಾಲಿಕರು ಹಂಗಾರ ಕಟ್ಟೆ (ದಕ)ಯಲ್ಲಿ ನಡೆಸುತ್ತಿದ್ದ ಹೆಂಚು ಕಾರ್ಖಾನೆಯ ಕಾರ್ಮಿಕರಿಗೆ ನೀಡುತ್ತಿದ್ದ ಸೌಲಭ್ಯದ, ಕೂಲಿಯ ಬಹುಪಾಲು ಕಡಿಮೆ ಕೊಡುತ್ತಿದ್ದರು. ಕಾರ್ಮಿಕರು ನ್ಯಾಯಯುತ ಬೇಡಿಕೆಯನ್ನು ಇಟ್ಟಾಗ, ಅವರಿಗೆ ಕೆಲಸ ನಿರಾಕರಿಸಿ, ಬೇರೆಡೆಯಿಂದ ಕಾರ್ಮಿಕರನ್ನು ತಂದು ಕಡಿಮೆ ಬೆಲೆಗೆ ದುಡಿಸುವ ಉದ್ದೇಶ ಪ್ರಕಟಿಸಿದರು. ಕಾರ್ಮಿಕ ನಾಯಕರಿಗೆ ಬಹು ಅನೇಕ ವಿಧದ ಕಿರುಕುಳ, ಓಂಸೆ ನೀಡಿದ್ದಲ್ಲದೇ, ಪೋಲೀಸ್ ಗೂಂಡಾಗಳಿಂದ ಹಲ್ಲೆಗಳನ್ನು, ಬೆದರಿಕೆಗಳನ್ನು ಹಾಕಲಾಯಿತು. ಪೋಲೀಸ್ ಸ್ಟೇಷನ್ನಿನಲ್ಲಿ ಸುಳ್ಳು ಕ್ರಿಮಿನಲ್ ಕೇಸ್‌ಗಳು ದಾಖಲಾದವು. ವಿಧ ವಿಧದ ಪ್ರತಿಕಾರ ನಡೆದವು.

ಆದರೆ ನ್ಯಾಯಕ್ಕಾಗಿ ಸೆಣಸಿನಿಂತ ಕಾರ್ಮಿಕರ ಕೆಂಬಾವುಟ ಕೆಳಗಿಡಲಿಲ್ಲ. ಹೋರಾಟ ಮುಂದುವರಿಸಿದರು. ಅವರಿಗೆ ಎಸ್.ಕೆ. ಟೈಲ್ಸ್ ವರ್ಕರ್ಸ್ ಯೂನಿಯನ್ ನಿಂದ ಸೌಹಾರ್ದ ಸಹಾಯ ಹರಿದು ಬಂತು. ಅಂತಿಮವಾಗಿ ಕಾರ್ಮಿಕರೇ ಗೆದ್ದು, ಮಾಲೀಕರು [illegible] ಬೇರೆಯವರಿಗೆ ಮಾರಿ ಪಲಾಯನಗೈದರು.

ಹೆಚ್ಚುತ್ತಿರುವ ಮುಗ್ಗಟ್ಟು ಬೆಳೆಯುತ್ತಿರುವ ಸಂಘಟನೆ:-

ಜಿಲ್ಲೆಯ ಬೇರೆ ಬೇರೆ ಕಾರ್ಖಾನೆಯಲ್ಲಿ ಸಂಘಟನೆ ಬೆಳೆದು ನ್ಯಾಯಯುತ ಬೇಡಿಕೆ ಮುಂದಿಟ್ಟಂತೆಲ್ಲಾ ಮಾಲಿಕರಿಂದ ಪ್ರತಿಕಾರದ ಕ್ರಿಯೆ ನಡೆಯುತ್ತಿದೆ. ಸುಳ್ಳು ಸಬೂಬು ಹೇಳಿ ಫ್ಯಾಕ್ಟರಿ ಮುಚ್ಚುವ ಕುತಂತ್ರಗಳು ನಡೆಯುತ್ತಿವೆ. ಕಳೆದ ವರ್ಷ ಇದೇ ರೀತಿ ಭಟ್ಕಳದ ವೆಂಕ್ಟಾಪುರ ಹೆಂಚು ಕಾರ್ಖಾನೆಯನ್ನು ಸುಳ್ಳು ಸಬುಬೂ ಮುಂದೊಡ್ಡಿ ತಿಂಗಳುಗಟ್ಟಲೆ ಕಾರ್ಖಾನೆ ಮುಚ್ಚಲಾಯಿತು. ಆದರೆ ಬೆದರದ ಕಾರ್ಮಿಕರ ನಿರಂತರ ಹೋರಾಟದಿಂದ ಮರಳಿ ಆರಂಭಗೊಂಡಿತು.

ಇದೀಗ ಮುರ್ಡೇಶ್ವರದ ಚಿತ್ರಾಪುರ ಟೈಲ್ಸ್‌ನ ಸರದಿ, ಜೂನ್ 7, ರಂದು ಲಾಭದಲ್ಲಿ ನಡೆಯುತ್ತಿದ್ದ, 140 ಕ್ಕೂ ಮಿಕ್ಕಿ ಕಾರ್ಮಿಕರಿದ್ದ ಚಿತ್ರಾಪುರ ಟೈಲ್ಸ್‌ನ್ನು ಮುಚ್ಚಲಾಗಿದೆ. ಎರಡು ದಿನ ಮುಂಚೆ ಅಂದರೆ ಶನಿವಾರ ಜೂನ್ 5, 1993 ರಂದು ಸಂಜೆ ಅಲ್ಲಿಯೇ ಇದ್ದ ಕೆಲ ಕಾರ್ಮಿಕರಿಗೆ ಸರಿಯಾದ ಕಾರಣವೂ ನೀಡದೇ, ದಿನಾಂಕ 7 ರಿಂದ ಮುಚ್ಚಲಾಗುವುದು ಎಂದು ತಿಳಿಸಲಾಯಿತು. ಈ ಕುರಿತು ಸರಕಾರಕ್ಕಾಗಲೀ ಸಂಘಕ್ಕಾಗಲೀ ತಿಳಿಸಲಿಲ್ಲ. ಇಲ್ಲಿ ಉತ್ಪಾದನೆ ಸರಿ ಇಲ್ಲ ಎಂದು ಕಾರಣ ನೀಡಿದರೂ, ಇದಕ್ಕೆ ನಿಜವಾದ ಕಾರಣವೇ ಬೇರೆಯಾಗಿದೆ. ದಿನಾಂಕ ಮಾರ್ಚ್ 24, 1993 ರಂದು ಕಾರ್ಮಿಕರು ನ್ಯಾಯಯುತ ಏರಿಳಿತ ತುಟ್ಟಿಭತ್ಯೆ ನೀಡಬೇಕೆಂದಿಟ್ಟಿದ್ದ ಬೇಡಿಕೆಯ ನೋಟೀಸಿಗೆ ಪ್ರತಿಯಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಮಾತುಕತೆಗೆಂದು ಕರೆಸಿ, ಮಾಲೀಕರು ಬರದೇ ಸತಾಯಿಸುವುದು ಇವರ ಇನ್ನೊಂದು ತಂತ್ರವಾಗಿದೆ. ಮಾಲಿಕರ ಕುತಂತ್ರಗಳು ಹೆಚ್ಚಿದಂತೆಲ್ಲಾ ಸಂಘಟನೆ ಬಲವಾಗಿ ಬೆಳೆಯುತ್ತಿದೆ.

ಕಾರ್ಮಿಕರ ಐಕ್ಯತೆಗೆ ತೊಡಕಾಗಿರು ಸ್ವಯಂ ಘೋಷಿತ ಕಾರ್ಮಿಕ ನಾಯಕರ ಕಾರ್ಮಿಕ ಪ್ರೇಮ

ಈ ನಡುವೆ ಜಿಲ್ಲೆಯ ಕೆಲವು ಸ್ವಯಂ ಘೋಷಿತ ಕಾರ್ಮಿಕ ನಾಯಕ ಮಣಿಗಳು ಕಾರ್ಮಿಕರ ವಿಶಾಲ ಐಕ್ಯತೆಗೆ ಅಡ್ಡಿಯಾಗಿದ್ದಾರೆ. ಇವರ ಕಾರ್ಮಿಕ ಪ್ರೇಮ ಮಾಲಕರ ಸೇವೆಯಿಂದ ಅಮಾಯಕ ಕಾರ್ಮಿಕರು ಬಳಲುವಂತಾಗಿದೆ. ಎಂದೂ ಕಾರ್ಮಿಕರಾಗಿರದ ಈ ಜನರಿಂದ ಕಾರ್ಮಿಕರಿಗೆ ಅನ್ಯಾಯವೇ ಹೆಚ್ಚಾಗಿದೆ. ಕಾರ್ಮಿಕರ ನ್ಯಾಯಯುತ ಬೇಡಿಕೆಗಳಿಗಾಗಿ ಶ್ರಮಿಸುತ್ತಿರುವ ಸಿಐಟಿಯು ಇಂದು ಕಾರ್ಮಿಕರ ಮಧ್ಯೆ ಜನಪ್ರಿಯವಾಗಿ ಬೆಳೆಯುತ್ತಿದೆ.

ಮುಷ್ಕರಕ್ಕೆ ವಿದ್ಯಾರ್ಥಿಗಳ ಬೆಂಬಲ

ಬೆಂಗಳೂರು: ಅತ್ಯಂತ ಹೆಚ್ಚಿನ ಕಾರ್ಮಿಕರು ಮಾನ್ಯತೆ ಪಡೆದಿರುವ ಸಂಘದ ಜೊತೆ ಕೆ.ಎಸ್.ಆರ್.ಟಿ.ಸಿ. ಆಡಳಿತ ವರ್ಗವು ಒಪ್ಪಂದ ಮಾಡಿ [illegible] ಎರಡು ವರ್ಷಗಳೇ ಕಳೆದರೂ ಜಾರಿಗೊಳಿಸದಿರುವುದರ ಬಗ್ಗೆ ಸೆಪ್ಟೆಂಬರ್ 9 ರಂದು ಮುಷ್ಕರ ನಡೆಸಲು ನಿರ್ಧರಿಸಿರುವ ರಸ್ತೆ ಸಾರಿಗೆಯ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್‌ನ ಮಾನ್ಯತೆ ರದ್ದುಪಡಿಸುವುದಾಗಿ, ಇ.ಎಸ್.ಎಂ.ಎ ಯನ್ನು ಅನ್ವಯಿಸಿ ಕ್ರಮ ಕೈಗೊಳ್ಳುವುದಾಗಿ ಬೆದರಿಕೆ ಹಾಕುತ್ತಿರುವ ಅಪ್ರಜಾಪ್ರಭುತ್ವ ನಿಲುವಿನ ಸಾರಿಗೆ ಸಚಿವ ಭೀಮಣ್ಣ ಖಂಡ್ರೆಯವರ ಉದ್ಧಟತನವನ್ನು [illegible] ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್.ಐ) ರಾಜ್ಯ ಸಮಿತಿಯು ಖಂಡಿಸಿದೆ.

ತಮ್ಮ ತಾಯ್ನೆಲದ ಜೀವನ್ಮರಣದ ಪ್ರಶ್ನೆಗಾಗಿ ಹೋರಾಟವಾಗಿ ಮೂಡಿಬರುತ್ತಿರುವ ಸೆಪ್ಟೆಂಬರ್ 9 ಹೋರಾಟಕ್ಕೆ ಕೆ.ಎಸ್.ಆರ್.ಟಿ.ಸಿ. ನೌಕರರು ಮತ್ತು ಕಾರ್ಮಿಕರು ಧುಮುಕಿರುವುದು ಸಂದರ್ಭೋಚಿತವಾದುದಾಗಿದೆ. ಅದೇ ದಿನ ಅಖಿಲ ಭಾರತ ಶಾಲಾ ಕಾಲೇಜುಗಳ ಬಂದ್ ಆಚರಿಸುವುದರ ಮೂಲಕ ವಿದ್ಯಾರ್ಥಿ ಸಮುದಾಯ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತದೆ.

ಕಾರದ ಮಟ್ಟದಲ್ಲಿಯೇ ಇತ್ಯರ್ಥ ಪಡಿಸಬೇಕೆಂದು ಎಸ್.ಎಫ್.ಐಯವರು ಅಭಿಪ್ರಾಯಿಸಿದರು. ಪಾರಿತೋಷಕಗಳನ್ನು ಸರಿಪಡಿಸುವ ಭರವಸೆ ನೀಡಿದವರು, ಮೆರವಣಿಗೆಯ ನೇತೃತ್ವವನ್ನು ಜನಾರ್ಧನ ನಾಯಕ್, ರಾಮಚಂದ್ರ, ಸುಕುಮಾರ್, ರಾಜೀವ್ ಮೆಂಡನ್ ಈಶ್ವರ, ಕುತ್ತಿರ್ [illegible] ವಹಿಸಿದರು.

ವಿದ್ಯುತ್ ದರ ಏರಿಕೆ: ಉಳ್ಳಾಲದಲ್ಲಿ ಪ್ರತಿಭಟನೆ

ಮಂಗಳೂರು : ವಿದ್ಯುತ್ ದರ ಏರಿಕೆಯನ್ನು ಪ್ರತಿಭಟಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ದಿನಾಂಕ ಆಗಸ್ಟ್ 11, 1993 ರಂದು ತೊಕ್ಕೊಟಿನಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಿದರು. ನಂತರ ಸೆಕ್ಷನ್ ಆಫೀಸಿನಲ್ಲಿ ಎ.ಇ. ಮುಖಾಂತರ ಸರಕಾರಕ್ಕೆ ಮನವಿ ಸಲ್ಲಿಸಿದರು. ಮತ್ತು ಸ್ಥಳೀಯ ಸಮಸ್ಯೆಗಳಾದ ಬಿಲ್ ಪಾವತಿಸಲು ಗಂಟೆಗಟ್ಟಲೆ ಕಾಯಿಸುವುದು, ಲೋ ವೋಲ್ಟೇಜ್, ದಾರಿ ದೀಪಗಳು ಉರಿಯದ ಬಗ್ಗೆಯೂ ಚರ್ಚಿಸಲಾಯಿತು. ವಿದ್ಯುತ್ ಪೂರೈಕೆಯಲ್ಲಿನ ಕೊರತೆ [illegible] ಸಾಕಷ್ಟು ಸಿಬ್ಬಂದಿ ನೇಮಿಸದೆ ಇರುವುದೇ ಈ ಸಮಸ್ಯೆಗೆ ಕಾರಣ. ಇದನ್ನು ಸರ[illegible]

ದ.ಕ. ಜಿಲ್ಲಾದ್ಯಂತ ರಿಕ್ಷಾ ಚಾಲಕರ ಅನಿರ್ದಿಷ್ಟಾವಧಿ ಮುಷ್ಕರ

ದ.ಕ. ಜಿಲ್ಲಾದ್ಯಂತ ದಿನಾಂಕ ಆಗಸ್ಟ್ 20, 1993 ರಿಂದ 29, 1993 ರವರೆಗೆ ರಿಕ್ಷಾ ಚಾಲಕರು ತಮ್ಮ ರಿಕ್ಷಾಗಳನ್ನು ಬೀದಿಗಿಳಿಸದೆ. ಹಂತ, ಹಂತವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತೀವ್ರ ರೀತಿ ಹೋರಾಟ ಮಾಡಿರುತ್ತಾರೆ.

ಈಗಾಗಲೇ ಜಿಲ್ಲೆಯ ರಿಕ್ಷಾ ಚಾಲಕರು ತಮ್ಮ ವಾಹನಗಳಿಗೆ ಯಾಂತ್ರಿಕ ಮೀಟರ್ ಅಳವಡಿಸಿದ್ದು, ಈ ಮೀಟರ್ ಬದಲಿಸಿ 1700 ರೂ. ವೆಚ್ಚದ ಫ್ಲಾಗ್ ಮೀಟರ್ ಅಳವಡಿಸಬೇಕೆಂಬ ಅಧಿಕಾರಿಗಳ ಆದೇಶವನ್ನು ವಿರೋಧಿಸಿ ನಗರದ ಸಾರಿಗೆ ಕಛೇರಿ ಮುಂಭಾಗದಲ್ಲಿ ಧರಣಿ, ಜಿಲ್ಲೆಯಾದ್ಯಂತ ರಿಕ್ಷಾ ಚಾಲಕರಿಂದ ಬೃಹತ್ ಮೆರವಣಿಗೆಯೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ, ರಸ್ತಾರೋಕೋ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಿಐಟಿಯು ಸಂಘಟನೆಯ ಚಾಲಕರು ಬಂಧನಕ್ಕೊಳಗಾದರು.

ರಿಕ್ಷಾ ಚಾಲಕರು ನ್ಯಾಯವಾದ ಬೇಡಿಕೆಗಳ ಬಗ್ಗೆ ಹೋರಾಟ ಶಾಂತಿಯುತವಾಗಿದ್ದು ಸಮಸ್ಯೆ ಬಗೆಹರಿಸಲು ಜಿಲ್ಲಾಡಳಿತ ವಿಫಲವಾಗಿ 144 ನೇ ಸೆಕ್ಷನ್ ಜಾರಿ ಮಾಡಿದಾಗ್ಯೂ ಸಿಐಟಿಯು ರಿಕ್ಷಾ ಚಾಲಕರು ನ್ಯಾಯಕ್ಕಾಗಿ ತೀವ್ರ ರೀತಿ ಹೋರಾಟ ಮಾಡುವುದನ್ನು ನಿಲ್ಲಿಸಲಿಲ್ಲ. ಇದನ್ನು ಗಮನಿಸಿದ ಜಿಲ್ಲಾಡಳಿತ ರಿಕ್ಷಾ ಚಾಲಕರೊಂದಿಗೆ ಮಾತುಕತೆಗೆ ಒಪ್ಪಿತು. ಈ ಸಭೆಯಲ್ಲಿ ದ.ಕ. ಜಿಲ್ಲಾ ಆಟೋರಿಕ್ಷಾ ಚಾಲಕರ ಸಂಘದ ಅಧ್ಯಕ್ಷರಾದ ಪಿ. ರಾಮಚಂದ್ರರಾವ್, ಜಿಲ್ಲೆಯ ಕಾರ್ಮಿಕ ಸಚಿವರಾದ ಬ್ಲೇಸಿಯಸ್ ಡಿ ಸೋಜಾ, ರಿಕ್ಷಾ, ಚಾಲಕರು, ಪೋಲೀಸ್ ಅಧಿಕಾರಿಗಳು ಭಾಗವಹಿಸಿದ ಸಭೆಯಲ್ಲಿ, ಪಿ. ರಾಮಚಂದ್ರರಾವ್‌ರವರ ಸೂಚನೆಯಂತೆ, ದುಬಾರಿ ಬೆಲೆಯ ಫ್ಲಾಗ್ ಮೀಟರ್‌ಗಳು ಆಗಾಗ್ಗೆ ಹಾಳಾಗುವುದನ್ನು ಗಮನಿಸಲು ಒಂದು ಕಮಿಟಿಯನ್ನು ರಚಿಸಲಾಯಿತು. ಈ ಕಮಿಟಿಯಲ್ಲಿ ಜಿಲ್ಲಾಧಿಕಾರಿಗಳು, ಪೋಲೀಸ್ ಅಧಿಕಾರಿಗಳು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ರಿಕ್ಷಾ ಸಂಘಟನೆಗಳ ಪದಾಧಿಕಾರಿಗಳನ್ನು ನೇಮಿಸುವಂತೆ ಜಿಲ್ಲಾಡಳಿತೆ ಒಪ್ಪಿಕೊಳ್ಳಲಾಯಿತು. ಅಲ್ಲದೆ 1991 ರಿಂದ ಇದುವರೆಗೂ ಪೆಟ್ರೋಲ್ ಬೆಲೆ, ದಿನನಿತ್ಯ ಉಪಯೋಗಿಸುವ ವಸ್ತುಗಳ ಬೆಲೆಗಳು ಹೆಚ್ಚಾಗಿದ್ದು ಮೀಟರ್ ದರ ಪರಿಷ್ಕರಿಸದೆ ಇದ್ದುದನ್ನು ಒಪ್ಪಿದ ಕಾರ್ಮಿಕ ಸಚಿವರು ಒಂದು ವಾರದೊಳಗಾಗಿ ಈ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿರುವುದರಿಂದ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಗಿದೆ.

ಮೀಟರ್ ಕೊಳ್ಳಲು ಆರ್ಥಿಕವಾಗಿ ಬ್ಯಾಂಕ್ ನಿಂದ ಸಾಲ ನೀಡುವುದಾಗಿ ಕಾರ್ಮಿಕ ಸಚಿವರು ಭರವಸೆ ನೀಡಿರುತ್ತಾರೆ.

ಭಾರತ್ ಬಂದ್ ಯಶಸ್ಸಿಗೆ ಡಿ.ವೈ.ಎಫ್.ಐ ಕರೆ

ಮಂಗಳೂರು : ಕೇಂದ್ರ ಸರ್ಕಾರದ ಜನವಿರೋಧಿ ಆರ್ಥಿಕ ನೀತಿಗಳು ಹಾಗೂ ಕೋಮುವಾದದ ಅಪಾಯಗಳ ವಿರುದ್ಧ ಪ್ರತಿಭಟಿಸಿ ಇದೇ ಸೆಪ್ಟೆಂಬರ್ 9 ರ ರಂದು ನಡೆಯಲಿರುವ ಭಾರತ್ ಬಂದ್‌ನ್ನು ಸಂಪೂರ್ಣ ಯಶಸ್ವಿಗೊಳಿಸಲು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ನಿರ್ಧರಿಸಿದೆ.

ಈ ಐತಿಹಾಸಿಕ ಬಂದ್‌ನ ಯಶಸ್ವಿಗೆ ಡಿ.ವೈ.ಎಫ್.ಐ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಸೆಪ್ಟೆಂಬರ್ 1 ರಿಂದ ಗೋಡೆ ಬರಹ, ಭಿತ್ತಿಚಿತ್ರ ಅಂಟಿಸುವಿಕೆ ಅಲ್ಲದೆ ಕರಪತ್ರಗಳ ವಿತರಣೆಯಿಂದ ಪ್ರಚಾರ ಕಾರ್ಯ ಆರಂಭಗೊಳ್ಳುವುದು. ಸೆಪ್ಟೆಂಬರ್ 5 ರಿಂದ 7 ರವರೆಗೆ ಬಂದ್‌ನ ಆಶಯ, ಬೇಡಿಕೆಗಳ ಬಗ್ಗೆ ನಾಗರೀಕರಿಗೆ ವಿವರಿಸಲು ಬೀದಿ ಬದಿಯ ಸಭೆಗಳು, ಹಾಡುಗಳ ಮೂಲಕ ಪ್ರಚಾರಿಸಲಾಗುವುದು. 8 ರಂದು ಪಂಜಿನ ಮೆರವಣಿಗೆ ನಡೆಯಲಿದೆ.

ಈ ಐತಿಹಾಸಿಕ ಬಂದ್‌ಗೆ ಎಲ್ಲಾ [illegible] ಪ್ರೇಮಿ ಶಕ್ತಿಗಳು ಬೆಂಬಲಿಸಿ ಯಶಸ್ವಿಗೊಳಿಸಬೇಕಾಗಿದೆ ವಿನಂತಿಸುತ್ತದೆ.

ವೃತ್ತಿಪರ ಶಿಕ್ಷಣ : ಸಿಪಿಐ(ಎಂ) ಆಗ್ರಹ

ಖಾಸಗಿ ವೃತ್ತಿಪರ ಕಾಲೇಜುಗಳು ಹೊಸ ನಿಯಮಾವಳಿ ಪ್ರಕಾರ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದಿಲ್ಲ ಎಂಬ ನಿರ್ಧಾರವನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿಯು ಖಂಡಿಸಿದೆ. ಲಾಭದ ವ್ಯಾಪಾರದಲ್ಲಿ ಸಿಲುಕಿರುವ ಖಾಸಗಿ ವೃತ್ತಿಪರ ಕಾಲೇಜುಗಳ ಪಟ್ಟಭದ್ರ ಹಿತಗಳು ಸಹಸ್ರಾರು ವಿದ್ಯಾರ್ಥಿ ವಿದ್ಯಾರ್ಥಿನಿಯರ ಒಂದು ವರ್ಷವನ್ನು ವ್ಯರ್ಥ ಮಾಡಲು ಹೊರಟಿವೆ.

ಸರ್ವೋಚ್ಛ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿದು, ವಿದ್ಯಾರ್ಥಿ-ವಿದ್ಯಾರ್ಥಿನಿಯರ ಹಿತರಕ್ಷಣೆ ಮಾಡಲು ಕೂಡಲೇ ಪ್ರವೇಶ ದೊರಕಿಸಿ ಕೊಡಲು, ರಾಷ್ಟ್ರೀಕರಣವೂ ಸೇರಿದಂತೆ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕೆಂದೂ, ಶಿಕ್ಷಣದ ವ್ಯಾಪಾರೀಕರಣವನ್ನು ಉಚ್ಚಾಟನೆ ಮಾಡಲು ದೃಢವಾದ ಹೆಜ್ಜೆ ಇಡಬೇಕೆಂದು ಕಾರ್ಯದರ್ಶಿ ಮಂಡಳಿಯು ಕರ್ನಾಟಕ ಸರ್ಕಾರವನ್ನು ಆಗ್ರಹಪಡಿಸುತ್ತದೆ.

ಗಮನಿಸಿ
ಬಳ್ಳಾರಿ ಪಕ್ಷದ ಜಿಲ್ಲಾ ಸಮಿತಿ ಕಚೇರಿಯ ವಿಳಾಸ ಬದಲಾವಣೆ

ಬಳ್ಳಾರಿ ಜಿಲ್ಲಾ ಸಮಿತಿಯು ತನ್ನ ಕಚೇರಿಯನ್ನು ಬದಲಿಸಿದ್ದು ಸೆಪ್ಟೆಂಬರ್ 2, 1993 ರಿಂದ ಹೊಸ ಕಚೇರಿಯಲ್ಲಿ ತನ್ನ ಕಾರ್ಯ ನಿರ್ವಹಿಸುತ್ತಿದೆ. ಈ ಬಗ್ಗೆ ಬಳ್ಳಾರಿ ಜಿಲ್ಲಾ ಸಮಿತಿಯನ್ನು ಸಂಪರ್ಕಿಸುವವರು ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬೇಕೆಂದು ಬಳ್ಳಾರಿ ಜಿಲ್ಲಾ ಸಮಿತಿ ಕೋರಿದೆ.

* ವಿಳಾಸ: ಸಿಪಿಐ(ಎಂ) ಬಳ್ಳಾರಿ ಜಿಲ್ಲಾ ಸಮಿತಿ, ನಂ. 58 ರೆಡ್ಡಿ ಬೀದಿ (ಕುದುರೆಗಳಾಪ್ಪ ಓಣಿ) ಬಳ್ಳಾರಿ.

ಭಾರತ್ ಬಂದ್: ಸಿಪಿಐ(ಎಂ), ಸಿಪಿಐ, ಜನತಾದಳ ಕರೆ

ಕಾಂಗ್ರೆಸ್(ಐ)ನ ನರಸಿಂಹರಾವ್ ಸರ್ಕಾರದ ಕರಾಳ ಹೊಸ ಆರ್ಥಿಕ-ಕೈಗಾರಿಕಾ ನೀತಿಗಳ ವಿರುದ್ಧವಾಗಿ, ಕೋಮುವಾದದ ವಿರುದ್ಧವಾಗಿ ತಮ್ಮ 20 ಅಂಶಗಳ ಬೇಡಿಕೆಗಳ ಈಡೇರಿಕೆಗಾಗಿ ದೇಶದ ಸಾಮೂಹಿಕ ಸಂಘಟನೆಗಳ ವೇದಿಕೆಯು ಕೊಟ್ಟಿರುವ ಸೆಪ್ಟೆಂಬರ್ 9ರ 'ಭಾರತ್ ಬಂದ್' ಕರೆಗೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಹಾಗೂ ಸಿಪಿಐನ ಕರ್ನಾಟಕ ರಾಜ್ಯ ಮಂಡಳಿ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿ, ರಾಜ್ಯದಲ್ಲಿ ತಮ್ಮ ಎಲ್ಲಾ ಘಟಕಗಳು, ಶಾಖೆಗಳು, ಕಾರ್ಯಕರ್ತರು ಬಂದ್ ಯಶಸ್ವಿಗಾಗಿ ದುಡಿಯಬೇಕೆಂದು ಕರೆ ನೀಡಿವೆ. ರಾಜ್ಯದ ಎಲ್ಲ ವಿಭಾಗಗಳ ಜನಗಳೂ ಈ 'ಭಾರತ್ ಬಂದ್'ನ ಚಾರಿತ್ರಿಕ ಪ್ರತಿಭಟನೆಯನ್ನು ಯಶಸ್ವಿಗೊಳಿಸಬೇಕೆಂದು ಅವು ಕರೆ ನೀಡಿವೆ.

-ಕರ್ನಾಟಕ ಪ್ರದೇಶ ಜನತಾದಳ "ಕೇಂದ್ರ ಸರ್ಕಾರದ ಜನ-ವಿರೋಧಿ ಆರ್ಥಿಕ ನೀತಿ ಮತ್ತು ಜಾತ್ಯಾತೀತ ಸ್ವರೂಪಕ್ಕೆ ಒದಗುತ್ತಿರುವ ಆತಂಕ ಇವುಗಳ ಬಗ್ಗೆ ಆಡಳಿತಾರೂಢ ಜನರನ್ನು ಎಚ್ಚರಿಸಲು ಮತ್ತು ಜನ ಜಾಗೃತಿ ಉಂಟುಮಾಡಲು" ಸಾಮೂಹಿಕ ಸಂಘಟನೆಗಳು ನೀಡಿರುವ 'ಭಾರತ್ ಬಂದ್' ಕರೆಯನ್ನು ತಾನು ಸಕ್ರಿಯವಾಗಿ ಬೆಂಬಲಿಸುವುದಾಗಿ ತಿಳಿಸಿದೆ. [illegible] ತಾದಳದ ಎಲ್ಲಾ ಜಿಲ್ಲಾ ಘಟಕಗಳು ಹಾಗೂ ತಾಲ್ಲೂಕು ಘಟಕಗಳು ಆಯಾಯ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಎಡ ಪಕ್ಷಗಳ ಹಾಗೂ ಪ್ರಗತಿಪರ ಸಂಘಟನೆಗಳೊಂದಿಗೆ ಸೇರಿ ಬಂದ್‌ನ್ನು ಸಂಪೂರ್ಣ ಯಶಸ್ವಿಗೊಳಿಸಬೇಕೆಂದು ಶ್ರೀ ಸಿದ್ಧರಾಮಯ್ಯನವರು ಪಕ್ಷದ ಪರವಾಗಿ ನೀಡಿರುವ ಹೇಳಿಕೆಯೊಂದರಲ್ಲಿ ಕೋರಿದ್ದಾರೆ.

KRNM/BGS-405 MAG(2) PRB DECR 319-78/79

ಸ್ಫೂರ್ತಿ ತುಂಬಿದ "ಜೈಲ್ ಭರೋ"

ಸಿಂಧನೂರು : ರಾಷ್ಟ್ರಮಟ್ಟದ ಈ ಕರೆಗೆ ತಾಲೂಕಿನಾದ್ಯಂತ ವ್ಯಾಪಕ ಪ್ರಚಾರ ನಡೆಸಿ ಅಂದು ಕೇಂದ್ರ ಹಾಗೂ ರಾಜ್ಯ ಸರಕಾರಿ ಕಚೇರಿಗಳನ್ನು ಪಿಕೆಟಿಂಗ್ ಮಾಡುವ ಮುಖಾಂತರ ಜೈಲ್‌ಭರೋ ಕಾರ್ಯಕ್ರಮ ಯಶಸ್ವಿಗೊಳಿಸಲಾಯಿತು.

ಕಾರ್ಯಕ್ರಮದ ವಿವರ ಹೀಗಿದೆ: ಎಸ್.ಎಫ್.ಐ ವತಿಯಿಂದ 400 ವಿದ್ಯಾರ್ಥಿಗಳು ಹನುಮಂತ ಮತ್ತು ಈ. ಬಸವರಾಜರವರ ನೇತೃತ್ವದಲ್ಲಿ ಪೋಸ್ಟ್ ಆಫೀಸ್ ಪಿಕೆಟಿಂಗ್, ಗಂಗೂಬಾಯಿ ಮತ್ತು ಮಾದೇವಿ ನೇತೃತ್ವದಲ್ಲಿ 150 ಮಹಿಳೆಯರ ಸಿಂಡಿಕೇಟ್ ಬ್ಯಾಂಕ್ ಪಿಕೆಟಿಂಗ್, ಸುಬಾನ್ ಮತ್ತು ಶರಬಣ್ಣ ನಾಗಲಾಪುರ ಇವರ ನೇತೃತ್ವದಲ್ಲಿ 110 ಯುವಕರ ಮುತ್ತಿಗೆ, ದುರುಗಪ್ಪ, ನರಸಿಂಹಪ್ಪ, ನಬೀಸಾಬರವರ ಮುಖಂಡತ್ವದಲ್ಲಿ 125 ಜನರ ಬಿಡಿಓ ಕಛೇರಿಗೆ ಮುತ್ತಿಗೆ, ಸಿಐಟಿಯುವಿನ ಬಸವನಗೌಡ, ಶರಣಪ್ಪ, ಖಾದರಸಾಬರವರ ನೇತೃತ್ವದಲ್ಲಿ ಕ.ವಿ. ಮಂ.ಗೆ 50 ಜನರು ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು. ಒಟ್ಟು ನಗರದಲ್ಲಿ 200 ಮಹಿಳೆಯರನ್ನು ಒಳಗೊಂಡು 835 ಜನರು ಮತ್ತು ಬಳಗಾನೂರ ವ್ಯಾಪ್ತಿಯಲ್ಲಿ 3 ಹಳಖು ಹಾಗೂ 1 ಕ್ಯಾಂಪಿನಿಂದ 150 ಜನರು ನಾರಾಯಣ ಕಿಲ್ಲೇದ, ವಿಶ್ವನಾಥ, ಪಿರ್ ಅಹ್ಮದ್ ನೇತೃತ್ವದಲ್ಲಿ ಎಸ್.ಬಿ. ಹೆಚ್. ಬ್ಯಾಂಕನ್ನು ಮುತ್ತಿಗೆ ಹಾಕಿದರು.

ಜವಳಗೇರಾದಲ್ಲಿ ಎಸ್.ಎಫ್.ಐ ಮತ್ತು ಕೃಷಿ ಕೂಲಿಗಾರರ ಸಂಘಟನೆಯ 250 ಜನರು ಸ್ಥಳೀಯ ಸಿಂಡಿಕೇಟ್ ಬ್ಯಾಂಕ್ ಮತ್ತು ಪೋಸ್ಟ್ ಆಫೀಸ್‌ಗಳಿಗೆ ಬೀಗ ಜಡಿದು ಬಂಧನಕ್ಕೊಳಗಾದರು. ಕುರ್ವಿಹಾಳದಲ್ಲಿ ಸಂಗಪ್ಪ ಮತ್ತು ಶೇಷಾದ್ರಿಯವರ ನೇತೃತ್ವದಲ್ಲಿ ಪೋಸ್ಟ್ ಆಫೀಸ್ ಮತ್ತು ಯುಕೋ ಬ್ಯಾಂಕ್ ಬಂದ್ ಮಾಡಿ 38 ಜನರ ಬಂಧನಕ್ಕೊಳಗಾದರು. ಒಟ್ಟು ಗ್ರಾಮಾಂತರ ಪ್ರದೇಶದಲ್ಲಿ 438 ಜನರು ದಸ್ತಗಿರಿಯಾದರು. ಅಲ್ಲಲ್ಲಿ ಬಹಿರಂಗ ಸಭೆ, ಮೆರವಣಿಗೆಗಳನ್ನು ಸಂಘಟಿಸಿ ಅತ್ಯುತ್ಸಾಹದಿಂದ, ಹುರುಪಿನಿಂದ ಜನ ತಮ್ಮ ವೈಯುಕ್ತಿಕ ಬೇಡಿಕೆಗಳೊಂದಿಗೆ ರಾಷ್ಟ್ರಮಟ್ಟದ ಬೇಡಿಕೆಗಳಿಗೆ ಒತ್ತು ನೀಡಿ ಹೋರಾಟದಲ್ಲಿ ಭಾಗವಹಿಸಿದ್ದರು.

ಬಂಧನದಿಂದ ಬಿಡುಗಡೆಯ ನಂತರ ಮೆರವಣಿಗೆ ಮೂಲಕ ಪುರಸಭೆಗೆ ತೆರಳಿ ಸಭೆಯನ್ನು ನಡೆಸಲಾಯಿತು. ಸಭೆಯನ್ನು ದ್ದೇಶಿಸಿ ಶರಬಣ್ಣ ನಾಗಲಾಪುರ ಮತ್ತು ಬಿ. ಲಿಂಗಪ್ಪ ಮಾತನಾಡಿದರು.

ಗಂಗಾವತಿ : ಜೈಲ್‌ಭರೋ ಕರೆಲಿಃ ಗಂಗಾವತಿ ತಾಲೂಕಿನಾದ್ಯಂತ ಅತ್ಯುತ್ಸಾಹದ ಪ್ರತಿಕ್ರಿಯೆ ವ್ಯಕ್ತಗೊಂಡಿದೆ. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಗಾಳೆಮ್ಮನ ಗುಡಿಕ್ಯಾಂಪ್, ಹುಳ್ಕಿಹಾಳ, ಸಂಗಮೇಶ್ವರ ಕ್ಯಾಂಪ್, ಸಿಂಗನಾಳ ಕ್ಯಾಂಪ್, ಉಳೇನೂರ, ಶ್ಯಾಲೆಗನೂರು, ಕೊರಮ್ಮನ ಕ್ಯಾಂಪ್, ಬಂಧುಗಳು ಹಾಗೂ ಎಸ್.ಎಫ್.ಐ ಡಿ.ವೈ.ಎಫ್.ಐನ ಸಂಗಾತಿಗಳಿಂದ ಕೊಪ್ಪಳ, ರಾಯಚೂರು, ಕಂಪ್ಲಿ, ಬಸ್ ಸಂಚಾರವನ್ನು ಸುಮಾರು ಒಂದು ಗಂಟೆಯವರೆಗೆ ತಡೆ ಹಿಡಿದು ರಸ್ತಾರೋಕೋ ಮಾಡಿದರು. ನಗರದಲ್ಲಿ ಎಸ್.ಎಫ್.ಐ, ಬಜಾರ ಹಮಾಲರ ಸಂಘ, ವೇರ್ ಹೌಸ್ ಹಮಾಲರ ಸಂಘ, ಡಿ.ವೈ.ಎಫ್.ಐ., ಎಸ್.ಎಫ್.ಐ ಸಂಘಟನೆಗಳು, ಕೆ.ಎಸ್.ಆರ್.ಟಿ.ಸಿ. ವರ್ಕರ್ಸ್ ಸಂಘಟನೆಗಳು, ಕೇಂದ್ರ ಕಚೇರಿಗಳಾದ ಸ್ಟೇಟ್ ಬ್ಯಾಂಕ್ ಆಫ್ ಹೈದ್ರಾಬಾದ್, ದೂರವಾಣಿ, ಟೆಲಿಗ್ರಾಫ್, ಪೋಸ್ಟ್ ಆಫೀಸ್ ಎಲ್.ಐ.ಸಿ. ಕಚೇರಿಗಳ ಕೆಲಸಗಳನ್ನು ಸ್ಥಗಿತಗೊಳಿಸಿ ಸುಮಾರು 500 ಕ್ಕಿಂತ ಹೆಚ್ಚು ಜನರು ಬಂಧನಕ್ಕೊಳಗಾದರು.

ಈ ಸಂದರ್ಭದಲ್ಲಿ ಕೆ. ಪ್ರಕಾಶ್, ಎಲ್.ಐ.ಸಿ ನೌಕರರ ಸಂಘದ ಕಾರ್ಯದರ್ಶಿ ನರೇಶ್, ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಸಹ ಸಂಚಾಲಕರಾದ ಬಾಲಪ್ಪನವರು, ಎಸ್.ಎಫ್.ಐನ ಜಿಲ್ಲಾ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ, ಮಾತನಾಡಿದರು. ವಂದನಾರ್ಪಣೆಯನ್ನು ಡಿ.ವೈ.ಎಫ್.ಐನ ಉಪಾಧ್ಯಕ್ಷರಾದ ತಿಮ್ಮಣ್ಣ ವಜ್ರಬಂಡಿ ಮಾಡಿದರು.

ಈ ಜೈಲ್‌ಭರೋ ಕಾರ್ಯಕ್ರಮದ ಮುಖಂಡತ್ವವನ್ನು ಡಿ.ವೈ.ಎಫ್.ಐನ ಅಬ್ದುಲ್ ಸಾಬ, ಲಿಂಗಪ್ಪ ಮೇಸ್ತ್ರೀ, ಕಾಶಿಂಬೀ, ಸತ್ಯನಾರಾಯಣ, ಎಸ್.ಎಫ್.ಐ.ನ ಜಿ. ನಾಗರಾಜ, ಮುರ್ತುಜಾ, ರವಿಬಾಬು, ಸಿಐಟಿಯುನ ಚಂದೂಸಾಬ, ನಬೀಸಾಬ, ಬಾಬುಸಾಬ, ಶಣ್ಮುಗಪ್ಪ, ಕೆದರಪ್ಪ ಬಿ. ಹನುಮಂತ ಎ. ಹುಲುಗಪ್ಪ, ಹುಸೇನ್ ಸಾಬ ಭಾಗವಹಿಸಿದ್ದರು.



ಬಂಗಾರಪೇಟೆ: ಸಾಮೂಹಿಕ ಸಂಘಟನೆಗಳ ವೇದಿಕೆಯ ಕರೆಯಂತೆ ಆಗಸ್ಟ್ 19, 1993 ರಂದು ಜೈಲ್ ಭರೋ ಚಳುವಳಿಯನ್ನು ಬಂಗಾರಪೇಟೆಯಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಸಲಾಯಿತು. ಸಿಪಿಐ(ಎಂ), ಸಿಐಟಿಯು, ಡಿ.ವೈ.ಎಫ್.ಐ, ಎಸ್.ಎಫ್. ಐ., ಎ.ಐ.ಎ.ಡಿ.ಡಬ್ಲ್ಯು.ಎ ಯ 500 ಕ್ಕೂ ಹೆಚ್ಚು ಕಾರ್ಯಕರ್ತರು ಹಾಗೂ ಮುಖಂಡರು ಮಧ್ಯಾಹ್ನ 3.45 ಗಂಟೆಗೆ ಬಂಗಾರಪೇಟೆಯಲ್ಲಿ ಬೃಂದಾವನ್ ಎಕ್ಸ್‌ಪ್ರೆಸ್ ರೈಲನ್ನು ಒಂದೂವರೆ ಗಂಟೆ ಕಾಲ ತಡೆದು ಬಂಧನಕ್ಕೊಳಗಾಗಿ ಬಿಡುಗಡೆಯಾದರು. ಬಿಜಿಎಮ್‌ಎಲ್ (ಚಿನ್ನದ ಗಣಿ) ಮತ್ತು ಬಿಇಎಮ್‌ಎಲ್.ನ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.



ಹೊನ್ನಾವರ: ಹೊಸ ಆರ್ಥಿಕ ನೀತಿ, ಕೈಗಾರಿಕಾ ನೀತಿ ವಿರೋಧಿಸಿ ಮತ್ತು ಕನಿಷ್ಠ ಕೂಲಿ, ಸರ್ವರಿಗೂ ಶಿಕ್ಷಣ-ಉದ್ಯೋಗ, ರಸಗೊಬ್ಬರಕ್ಕೆ ಸಹಾಯಧನ, ಸಾರ್ವಜನಿಕ ವಿತರಣಾ ವ್ಯವಸ್ಥೆ ಬಲಪಡಿಸಲು ಒತ್ತಾಯಿಸಿ ಸರ್ಕಾರದ ಆರ್ಥಿಕ ನೀತಿಯು ಮತ್ತು ಕೋಮುವಾದದ ವಿರುದ್ಧ ಸಾಮೂಹಿಕ ಸಂಘಟನೆಗಳ ವೇದಿಕೆಕರೆಯಂತೆ ಜೈಲ್‌ಭರೋ ಕಾರ್ಯಕ್ರಮ ನಡೆಸಲಾಯಿತು.

ಸಿಐಟಿಯು ನೇತೃತ್ವದಲ್ಲಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದ ಕಾರ್ಮಿಕ, ರೈತ ಯುವಜನರನ್ನು ಉದ್ದೇಶಿಸಿ ಬೇಡಿಕೆಗಳ ಕುರಿತು ತಿಲಕ ಗೌಡ, ರಾಮಯ್ಯ ಗೌಡ, ಸುರೇಶ್ ತಾಂಡೇಲ ಮಾತನಾಡಿದರು.

ಹಣಕಾಸು ಸಂಸ್ಥೆಗಳ ನೌಕರರು ತೀವ್ರ ಹೋರಾಟದ ಕಣದಲ್ಲಿ

ಸೆಪ್ಟೆಂಬರ್ 2 ರಂದು ದೇಶಾದ್ಯಂತ ಹಣಕಾಸು ವ್ಯವಹಾರ ಸ್ಥಗಿತ

ಆಗಸ್ಟ್ 19 ರಂದು ದೇಶಾದ್ಯಂತ 10 ಲಕ್ಷಕ್ಕೂ ಹೆಚ್ಚು ದುಡಿಯುವ ಜನ ನರಸಿಂಹರಾಯರ ಜೈಲುಗಳನ್ನು ತುಂಬಿ ದೇಶದಲ್ಲಿ ಐ.ಎಂ.ಎಫ್.-ವಿಶ್ವಬ್ಯಾಂಕ್ ನಿರ್ದೇಶಿತ ಆರ್ಥಿಕ ನೀತಿಗಳ ವಿರುದ್ಧ ಜನಗಳಲ್ಲಿ ಹರಡುತ್ತಿರುವ ತೀವ್ರ ಅಸಂತೃಪ್ತಿಗೆ ದನಿ ನೀಡಿದ ಎರಡು ವಾರದೊಳಗೇ ದೇಶದ ದುಡಿಯುವ ವರ್ಗದ ಒಂದು ಪ್ರಮುಖ ವಿಭಾಗವಾದ ಬ್ಯಾಂಕ್, ವಿಮಾ ಕಂಪೆನಿಗಳ ಹತ್ತು ಲಕ್ಷಕ್ಕೂ ಹೆಚ್ಚು ನೌಕರರು ಹಾಗೂ ಅಧಿಕಾರಿಗಳು ಸೆಪ್ಟೆಂಬರ್ 2 ರಂದು ಮುಷ್ಕರ ನಡೆಸಿ ದೇಶದ ಆರ್ಥಿಕ ಜೀವನಾಡಿಯಾದ ಹಣಕಾಸು ವ್ಯವಹಾರಗಳನ್ನು ಸ್ಥಗಿತಗೊಳಿಸಿದರು. ವೇತನ ಪರಿಷ್ಕರಣ, ನಿವೃತ್ತಿ ಸೌಲಭ್ಯ ಇತ್ಯಾದಿ ತಮ್ಮ ಬೇಡಿಕೆಗಳಲ್ಲದೆ ಬ್ಯಾಂಕ್ ವಿಮಾ ಕಂಪನಿಗಳ ಖಾಸಗೀಕರಣ ಬೇಡವೇ ಬೇಡ ಎಂಬ ದೇಶದ ಪ್ರಗತಿಪರ ಜನವಿಭಾಗಗಳ ಒಂದು ಪ್ರಮುಖ ಬೇಡಿಕೆಗಾಗಿ ಈ ದೇಶವ್ಯಾಪಿ ಮುಷ್ಕರ ನಡೆಯಿತು. ಎಲ್.ಐ.ಸಿ., ಜಿ.ಐ.ಸಿ., ಸಾರ್ವಜನಿಕ ವಲಯದ ಬ್ಯಾಂಕುಗಳು, ರಿಝರ್ವ್ ಬ್ಯಾಂಕ್ ಹಾಗೂ ಇತರ ಹಣಕಾಸು ಸಂಸ್ಥೆಗಳ ನೌಕರರ ಹಾಗೂ ಅಧಿಕಾರಿಗಳ ಜಂಟಿ ಹೋರಾಟದಲ್ಲಿ ರೂಪುಗೊಂಡ ಜಂಟಿ ಕ್ರಿಯಾ ಸಮಿತಿ ಸರಕಾರಕ್ಕೆ ಹಾಗೂ ಬ್ಯಾಂಕ್ ವಿಮಾ ಕಂಪೆನಿಗಳ ವ್ಯವಸ್ಥಾಪಕ ಮಂಡಳಿಗೆ ಸಾಕಷ್ಟು ಎಚ್ಚರಿಕೆ ನೀಡಿದ ನಂತರ ಈಗ ಒಂದು ತೀವ್ರ ಹೋರಾಟದ ಕಾರ್ಯಕ್ರಮವನ್ನು ರೂಪಿಸಿದ್ದು ಸೆಪ್ಟೆಂಬರ್ 2 ಮುಷ್ಕರದಿಂದ ಇದು ಯಶಸ್ವಿಯಾಗಿ ಆರಂಭವಾಗಿದೆ ಎಂದು ಈ ಸಮಿತಿಯ ಮುಖಂಡರು ಹೇಳಿದ್ದಾರೆ. ಅಕ್ಟೋಬರ್ 4 ರಂದು ಇನ್ನೊಂದು ಮುಷ್ಕರ, ಆಗಲೂ ಸರಕಾರ ತನ್ನ ದೇಶವಿರೋಧಿ ನೀತಿಗಳನ್ನು ಕೈಬಿಡದಿದ್ದರೆ, ನವಂಬರ್ 2 ರಿಂದ ಅನಿರ್ದಿಷ್ಟ ಕಾಲದ ಮುಷ್ಕರಕ್ಕೆ ಜಂಟಿ ಕ್ರಿಯಾ ಸಮಿತಿ ಈಗಾಗಲೇ ಕರೆ ನೀಡಿದೆ. ಈ ನಡುವೆ ಹಣಕಾಸು ವಲಯದ ನೌಕರರ ಕೆಲವು ಪ್ರಮುಖ ಸಂಘಟನೆಗಳು 'ಭಾರತ್ ಬಂದ್'ಗೂ ಬೆಂಬಲ ನೀಡಿದ್ದು ಸೆಪ್ಟೆಂಬರ್ 9 ರಂದು ದೇಶವ್ಯಾಪಿ ಕೈಗಾರಿಕಾ ಮುಷ್ಕರದಲ್ಲಿಯೂ ಭಾಗವಹಿಸುತ್ತಿವೆ.

ನಷ್ಟದ ಹಿಂದಿರುವ ಮೋಸ

ಕರ್ನಾಟಕದಲ್ಲಿ ಸೆಪ್ಟೆಂಬರ್ 2 ರ ಮುಷ್ಕರ ಬ್ಯಾಂಕ್ ವಲಯದ ಒಂದು ಪ್ರಮುಖ ನೌಕರರ ಸಂಘಟನೆ ವಿರೋಧಿಸಿದ್ದರೂ ಅತ್ಯಂತ ಯಶಸ್ವಿಯಾಗಿ ನಡೆದಿದೆ ಎಂದು ವರದಿಯಾಗಿದೆ. ಬೆಂಗಳೂರಿನಲ್ಲಿ ಬ್ಯಾಂಕಿನ ಮುಖ್ಯ ಕಚೇರಿಯೆದುರು ನಡೆದ ಒಂದು ಬೃಹತ್ ರ್‍ಯಾಲಿ ಈ ವಿಭಾಗದಲ್ಲಿ ದುಡಿಯುತ್ತಿರುವವರಲ್ಲಿ ಸರಕಾರದ ದೇಶ ವಿರೋಧಿ ನೀತಿಗಳ ಬಗ್ಗೆ ಎದ್ದಿರುವ ತೀವ್ರ ಕ್ರೋಧವನ್ನು ಪ್ರತಿಬಿಂಬಿಸಿತು. ಸಾರ್ವಜನಿಕ ವಲಯದ ಬ್ಯಾಂಕುಗಳು ತೀವ್ರ ನಷ್ಟ ಅನುಭವಿಸಿವೆ ಎಂದು ಸರಕಾರವೇ ನಡೆಸುತ್ತಿರುವ ಪ್ರಚಾರದ ಹಿಂದಿರುವ ಮೋಸವನ್ನು ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಆರ್.ಎನ್. ಗೋಡ್‌ಬೋಳೆಯವರು ಸಿಂಡಿಕೇಟ್ ಬ್ಯಾಂಕಿನ ಒಂದು ಉದಾಹರಣೆ ನೀಡುತ್ತಾ ಬಯಲಿಗೆಳೆದರು. ಸಿಂಡಿಕೇಟ್ ಬ್ಯಾಂಕ್ ಈ ವರ್ಷ ಸುಮಾರು 600 ಕೋಟಿ ನಷ್ಟವಾಗಿದೆಯೆಂದು ಹೇಳಿಕೊಂಡಿದೆ. ಆದರೂ 500 ಕೋಟಿ ರೂಗಳಿಂದ ಹೆಚ್ಚು ಕಳೆದ 20 ವರ್ಷಗಳಲ್ಲಿ ಬ್ಯಾಂಕ್ ದೊಡ್ಡ-ದೊಡ್ಡ ಆಡಳಿತಗಾರರು ಉದ್ಯಮಗಳಿಗೆ, ಇತರರಿಗೆ ನೀಡಿದ ಮರುಪಾವತಿಯಾಗದ ಸಾಲವನ್ನು ಮನ್ನಾಮಾಡಲು ತೋರಿಸಿದ ನಷ್ಟ ಎಂದ ಅವರು ಈ 500 ಕೋಟಿ ರೂ. ಸಾಲ ಮರುಪಾವತಿ ಮಾಡುವವರ ಹೆಸರುಗಳನ್ನೇಕೆ ಸರಕಾರ ಪ್ರಕಟಿಸುತ್ತಿಲ್ಲ. ಇದಕ್ಕೆ ಕಾರಣರಾದ ಬ್ಯಾಂಕಿನ ದೊಡ್ಡ-ದೊಡ್ಡ ಅಧಿಕಾರಿಗಳನ್ನೇಕೆ ದಂಡಿಸಿಲ್ಲ ಎಂದು ಪ್ರಶ್ನಿಸಿದರು. ಸಾರ್ವಜನಿಕ ವಲಯ ಬ್ಯಾಂಕುಗಳಿಂದ ಹೀಗೆ ಸಾಲ ಪಡೆದು ಮರುಪಾವತಿ ಮಾಡದೇ ಇದ್ದವರ ಹೆಸರುಗಳನ್ನೆಲ್ಲಾ ಪ್ರಕಟಿಸುವ ಧೈರ್ಯವನ್ನು ಸರಕಾರ ತೋರಲಿ ಎಂದು ಸವಾಲು ಹಾಕಿದರು. ಈ ಪಟ್ಟಿಯಲ್ಲಿ ದೊಡ್ಡ ಉದ್ಯಮಿಗಳಲ್ಲದೆ, ಮಂತ್ರಿ-ಮಾನ್ಯರುಗಳು, ಅವರ ಸಂಬಂಧಿಗಳ ಹೆಸರುಗಳು ಇವೆ ಎಂದರು ಅವರು. ಓಂದೆ ಸಣ್ಣ-ಸಣ್ಣ ಕೃಷಿಕರಿಗೆ ನೀಡಿದ ಸಾಲವನ್ನು ಮಾಡಿದಾಗ ಹುಯಿಲೆಬ್ಬಿಸಿದ ಆರ್ಥಿಕ ತಜ್ಞರು ಈಗ ದೊಡ್ಡ ದೊಡ್ಡ ಕುಳಗಳಿಗೆ ಕೊಟ್ಟ ಸಾಲ ಮನ್ನಾ ಮಾಡಿ ಬ್ಯಾಂಕುಗಳು ನಷ್ಟದಲ್ಲಿವೆ ಎಂದು ಸರಕಾರ ನೌಕರರ, ಅಧಿಕಾರಿಗಳ ಮೇಲೆ ಗೂಬೆ-ಕೂರಿಸುತ್ತಿರುವಾಗ ಏಕೆ ಮೌನವಾಗಿದ್ದಾರೆ ಎಂದೂ ಪ್ರಶ್ನಿಸಿದರು. ಬ್ಯಾಂಕುಗಳು ನಷ್ಟದಲ್ಲಿವೆ. ಅದನ್ನು ಸುಧಾರಿಸಲು ಸರಕಾರದ ಬಳಿ ಹಣವಿಲ್ಲ, ಆದ್ದರಿಂದ ಅದನ್ನು ಐ.ಎಂ.ಎಫ್ ಬಯಸುವಂತೆ ಖಾಸಗಿಯವರಿಗೆ ಒಪ್ಪಿಸಲೇ ಬೇಕಾಗಿದೆ ಎಂಬ ಭಾವನೆ ಸೃಷ್ಟಿಸುವುದೇ ಈ ದಿವಾಳಿಯೆದ್ದ ಸರಕಾರದ ಹಂಚಿಕೆ ಎಂದ ಅವರು ಹಾಗೂ ಬ್ಯಾಂಕ್ ನೌಕರರ ಸಂಘಟನೆಗಳ ಇತರ ಮುಖಂಡರುಗಳು ವಿವರಿಸಿದರು. ಸರಕಾರ ಹಣಕಾಸು ವಲಯದ ನೌಕರರ ಇತರ ಎಲ್ಲಾ ಬೇಡಿಕೆಗಳನ್ನು ಅಂಗೀಕರಿಸಿದರೂ ಈ ಖಾಸಗೀಕರಣದ ಪ್ರಯತ್ನವನ್ನೂ ಕೈ ಬಿಡುವವರೆಗೆ ಹೋರಾಟ ಮುಂದುವರಿಯುತ್ತದೆ ಎಂದು ಸಾರಿದರು. ಬ್ಯಾಂಕ್ ನೌಕರರ ಒಂದು ಸಂಘಟನೆ ಕಂಪ್ಯೂಟರೀಕರಣಕ್ಕೆ ಸಂಪೂರ್ಣ ಒಪ್ಪಿ ನೌಕರರ ಹಿತಾಸಕ್ತಿ ಎರಡು ಬಗೆದರೂ ಬ್ಯಾಂಕ್ ನೌಕರರು ಇದರ ವಿರುದ್ಧ ದೃಢ ಹೋರಾಟ ಮುಂದುವರಿಸುತ್ತಾರೆ ಎಂದು ಬಿ.ಇ. ಎಫ್.ಐ. ಮುಖಂಡ ಎಸ್. ರೇವಣ್ಣ, ರಿಝರ್ವ್ ಬ್ಯಾಂಕ್ ನೌಕರರ ಮುಖಂಡ ನಾಗರಾಜ್ ಹಾಗೂ ಎಸ್.ಸಿ.ಬಿ.ಐ. ಮುಖಂಡರು ಸಾರಿದರು.

ಬ್ಯಾಂಕ್‌ಗಳಂತೆ ನಷ್ಟ ತೋರಿಸದೆ ಸರಕಾರವೇ ಒಪ್ಪಿಕೊಳ್ಳುವಂತೆ ಭಾರೀ ಲಾಭ ತೋರಿಸುತ್ತಿರುವ ಎಲ್.ಐ.ಸಿ. ಹಾಗೂ ಜಿ.ಐ.ಸಿ.ಗಳ ದಕ್ಷತೆಯ ನೆಪವೊಡ್ಡಿ ಖಾಸಗೀಕರಿಸುವ ಸರಕಾರದ ಪ್ರಯತ್ನ ಸಾರ್ವಜನಿಕ ವಲಯದ ಹಣಕಾಸು ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಐ.ಎಂ.ಎಫ್. ಒತ್ತಡಕ್ಕೆ ತಲೆಬಾಗಿರುವ ಸರಕಾರದ ಪಿತೂರಿಯೇನು ಎಂಬುದನ್ನು ಸ್ಪಷ್ಟಪಡಿಸಿದೆ ಎಂದು. ಎಲ್.ಐ.ಸಿ. ಹಾಗೂ ಜಿ.ಐ.ಸಿ. ನೌಕರರ ಸಂಘಟನೆಗಳ ಮುಖಂಡರಾದ ಕೃಷ್ಣ ಮೂರ್ತಿ ಹಾಗೂ ವೆಂಕಟಕೃಷ್ಣ ವಿವರಿಸಿದರು.

ಸಭೆಯನ್ನು ನಡೆಸಿಕೊಟ್ಟ ಕೆ.ವಿ. ಶ್ರೀನಿವಾಸ್ ನೌಕರರು ಹಾಗೂ ಅಧಿಕಾರಿಗಳನ್ನು ಜಂಟೀ ಕ್ರಿಯಾ ಸಮಿತಿಯ ಪರವಾಗಿ ಹಾರ್ದಿಕವಾಗಿ ಅಭಿನಂದಿಸಿ ಮುಂದಿನ ತೀವ್ರ ಹೋರಾಟಗಳಿಗೆ ಸಿದ್ದರಾಗಬೇಕೆಂದು ಕರೆ ನೀಡಿದರು. ನೌಕರರ, ಅಧಿಕಾರಿಗಳ ಈ ರ್‍ಯಾಲಿ ಹೋರಾಟವನ್ನು ತೀವ್ರಗೊಳಿಸುವ, ಸರಕಾರವನ್ನು ಎಚ್ಚರಿಸುವ ನಿರ್ಣಯವೊಂದನ್ನು ಅಂಗೀಕರಿಸಿತು.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪರವಾಗಿ ಮುದ್ರಕ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, ಕಾಸಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ : 236462. **ಸಂಪಾದಕರು : ಪಿ.ರಾಮಚಂದ್ರರಾವ್**